
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2026




ಬಿಡಿ ಪ್ರತಿ: ರೂ. 10/–



# ಬೀChi Prakashana

1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಚಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಟೋ !
21. ಎಲ್ಲಿರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಟೆಂಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಳಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆಗಿಷ್ಟು-ಈಗಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಚಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಚಿತ್ತದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಟಿನ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. **Best of Best** ಬರಹಗಳು ಭಾಗ-1 (ಬಿ.ಎಸ್.ಕೆ)
70. **Best of Best** ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೊಲೀಸ್ ಎನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೊಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಚೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖಿ
77. ರಕ್ಷ-ಖಾ-**NALINI GOWDA**
78. ಕವನ ಸಂಕಲನ-**ARUNDATHI JOSHI**
79. THE PANDEMIC PROSE -VINOD D GANGOLLI
80. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

81. ESSAYS & POEMS
82. EASY COOKING OF DELICIOUS RECIPES
83. BOOK OF POEMS
84. BIRDS AND OTHER POEMS
85. EASY COOKING OF DELICIOUS RECIPES PART-II
86. CHANDRAYAAN -3 MISSION AND OTHER POEMS (Space Craft)
87. ANECDOTES OF MY STUDENT LIFE
88. EXCERPTS FROM SRIMADH BHAGAVAD GEETA
89. EASY COOKING OF DELICIOUS RECIPES PART-III
90. RAIN AND OTHER POEMS
91. EASY COOKING OF DELICIOUS RECIPES PART-IV
92. SRIMADH BHAGAVAD GEETA
93. EASY COOKING OF DELICIOUS RECIPES- PART V
94. RAMAYANA ABRIDGED



TEMPLE OF KNOWLEDGE

Ph : 080-29731414, Mob : 9845264304.
Website : www.beechi.in


ನಾನು ನೂರಕ್ಕೆ ನೂರು ತೆಗೀ
ಬಹುದಾಗಿತ್ತಮ್ಮಾ.ಆದ್ರೆ ಹ್ಯಾಪಿಛೈಲ್ಡ್
ಹುಡ್ ನನಗೆ ಮುಖ್ಯ ಅನ್ನಿಸ್ತು
ರಿಪೋರ್ಟ್ ಕಾರ್ಡ್

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

PATIENT SAFETY & QUALITY OF CARE
NABH
ACCREDITED

Certificate No.: MC-2068



Established in 1978 we are a multi-speciality, tertiary care hospital.

CARING
AND
HEALING

| 126 | 60+ | 25+ |
| --- | --- | --- |
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE
LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 43
ಸಂಚಿಕೆ – 04
ಜನವರಿ–2026

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ ಅಪರಂಜಿಗೆ ಪ್ರಶಸ್ತಿ ಸಿಕ್ತು ! | ರಾಂಕಿ ಬೆಳ್ಳೂರ್ | 3 |
| ಅವಿಸ್ಮರಣೀಯ ನಗೆಗಾರರು – 6 | ಶಿವಕುಮಾರ್ | 5 |
| ಟ್ವಿನ್ ಸ್ಟೋರ್ಸ್ ! | ತುರುವೇಕೆರೆ ಪ್ರಸಾದ್ | 9 |
| ರುಕ್ಕು ಇದ್ದಮೇಲೆ.... | ಚಿತ್ರಾ ರಾಮಚಂದ್ರನ್ | 12 |
| ಪಿಂಗಾಣಿ ಪಾಕ ಪ್ರಸಂಗಗಳು | ಸಂಜಯ ಹಾವನೂರ | 15 |
| ತುಂತುರು | ದಂನಆ | 22 |
| ಮೀಮ್ಸ್ ಮೀಮಾಂಸೆ | ಕವಿತಾ ಹೆಗಡೆ ಅಭಯಂ | 23 |
| ಕೆಲಸದವರ ಕರಾಮತ್ತು | ಧಾರಿಣಿ ಮಾಯಾ | 25 |
| ಪರಿಪಕ್ವ ಜೀವನಕ್ಕೆ ಪಂಚ ತತ್ವಗಳು | ಕಾರಕೂನ | 26 |
| ಗುಂಡನ ಹೊಸ ವರ್ಷದ 2026.... | ಸುಮನಾ | 29 |
| ರಾಶಿ ಫಲ | ನಳಿನಿ ಟಿ. ಭೀಮಪ್ಪ | 30 |
| ವೈದ್ಯರಿಗೆ...ವೈದ್ಯಾನಾ ? | ವಿ. ವಿಜಯೇಂದ್ರ ರಾವ್ | 33 |
| ನಾನು ಮತ್ತು ಕಳ್ಳರು | ಸಿ.ಎ.ವಿಲಾಸ ನಾ ಹುದ್ದಾರ | 35 |
| 38ನೇಯ ಮೈಲಿಕಲ್ಲು ! | ಎನ್.ವಿ. ರಘುರಾಮ್ | 37 |
| ಹೈಕು ಪ್ರಪಂಚ | ಗೋಪಾಲ್ & ಶಿವಕುಮಾರ್ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ದಕ್ಷಿಣ ಆಫ್ರಿಕಾಗೆ ಕ್ರಿಕೆಟ್‌ನಲ್ಲಿ ಹೀನಾಯ ಸೋಲು

– ಕ್ರೀಡಾ ಸುದ್ದಿ

ಛೇ! ಬಾಪುವಿನ ದೇಶದಲ್ಲೇ ಹೀಗಾಗಬಾರದಾಗಿತ್ತು !!

* * *

ರೇಷ್ಮೆಯ ಬದಲು ಪಾಲಿಯೆಸ್ಟರ್ ಬಳಕೆ.

– ತಿರುಪತಿ ಸುದ್ದಿ

ಅಸಂಖ್ಯಾತ ರೇಷ್ಮೆ ಹುಳುಗಳು "ವೆಂಕಟರಮಣಾ"
ಅಂದಿರಬೇಕು!!

* * *

ಸ್ಮಾರಕಗಳ ರಕ್ಷಣೆಗೆ ಜಾಗ್ರತಿ ಓಟ

– ಪತ್ರಿಕೆ

ಇದಕ್ಕೆ ಓಟನ್ನ ಹಾಕಲೇ ಬೇಕು !!

* * *

ಸರ್ಕಾರ ಸಾಕುವ "ಬಿಳಿಯಾನೆ"

– ದಿನಪತ್ರಿಕೆ

ವೈಟ್ ಎಲಿಫೆಂಟ್ ಅಂದರೆ ಬೇಗ ಅರ್ಥವಾಗುತ್ತೆ !!

* * *

ಭೂ ಮಾಫಿಯಾದವರ ಹೆಡೆಮುರಿ ಕಟ್ಟುವೆ :
ಸಚಿವ ಶ್ರೀ ಕೃಷ್ಣ ಬೈರೇಗೌಡ

– ದಿನ ಪತ್ರಿಕೆ

.........ಸಂಭವಾಮಿ ಯುಗೇ ಯುಗೇ !!

* * *

"ವಂದೇ ಮಾತರಂ" ಸ್ಫೂರ್ತಿಗೀತೆಗೆ ರಾಜಕೀಯ ಕೊಳಕು
ತಾಗದಿರಲಿ

–ಪತ್ರಿಕೆ

ಬಂಕಿಮ್ ಬಾಬು ಅವರ ಆತ್ಮ "ತಲೆ" ದೂಗಿತಂತೆ !!

* * *

"ಚಿರತೆ ದಾಳಿ ತಡೆಯಲು ಕಾಡಿಗೆ ಆಡು ಬಿಡಿ."

– ಅರಣ್ಯ ಸಚಿವ

ಸಧ್ಯ, ಡಕಾಯಿತಿ ತಗ್ಗಿಸಲು ಧನ ಸಹಾಯ
ಮಾಡಿಬಿಡಿ ಅನ್ನಲಿಲ್ಲ ಅವರು!!

* * *

●

# ನಮ್ ಅಪರಂಜಿಗೆ ಪ್ರಶಸ್ತಿ ಸಿಕ್ತು !



**ವರದಿ ಒಪ್ಪಿಸ್ತಿರೋದು: ರಾಂಕಿ ಬೆಳ್ಳೂರ್**



ಭಾರತೀಯ ವಿದ್ಯಾ ಭವನ ಮತ್ತು ವಿದ್ಯಾರಣ್ಯ ಪ್ರತಿಷ್ಠಾನ ಆಯೋಜಿಸಿದ್ದ ಡಾ. ಎಚ್.ಕೆ. ರಂಗನಾಥ್ ಸ್ಮಾರಕ ಹಾಸ್ಯಪ್ರಶಸ್ತಿ ದತ್ತಿ ಕಾರ್ಯಕ್ರಮದಲ್ಲಿ ಅಪರಂಜಿ ಹಾಸ್ಯಪತ್ರಿಕೆಗೆ ಪ್ರಶಸ್ತಿ ಪ್ರದಾನ ಏರ್ಪಾಡಾಗಿತ್ತು. ಖಿಂಚ ಸಭಾಂಗಣದಲ್ಲಿ ನವೆಂಬರ್ 29ರ ಛಳಿಯ ಕೊರೆತದಲ್ಲಿ ಸಭಿಕರು ಆಗಮಿಸಿದಾಗ 'ನ(ಡ)ಗ್ತಾ ನ(ಡ)ಗ್ತಾ' ಬಂದ್ರು  ನಿರ್ಗಮಿಸಿದಾಗ 'ನಗ್ತಾ ನಗ್ತಾ' ಹೊರಟರು. ಭವನದ ಜಂಟಿ ನಿರ್ದೇಶಕರಾದ ಹೆಚ್ ಎನ್ ಸುರೇಶ ಅವರು ಸ್ವಾಗತ ಭಾಷಣ ಮಾಡುತ್ತ "ಡಾ.ರಂಗನಾಥ್ ಅವರು ಭವನದ ನಿರ್ದೇಶಕರಾಗಿ ಅನೇಕ ಶ್ಲಾಘನೀಯ ಕೆಲಸಗಳನ್ನು ಮಾಡಿದಲ್ಲದೆ 'ಸ್ಟಡಿ ಸರ್ಕಲ್' ನಿರಂತರವಾಗಿ ನಡೆಸಿಕೊಂಡು ಬಂದರು. ರಂಗನಾಥ್ ಅಭಿಮಾನಿಯೊಬ್ಬರಾದ ಶ್ರೀ ಎಂ.ವಿ.ಸತ್ಯನಾರಾಯಣ ಆಡ್ಮೈರರ್ ಆಗಿ ಈ ದತ್ತಿ ಕಾರ್ಯಕ್ರಮ ಮಾಡುತ್ತಿರುವುದು ವಿಶೇಷ ಸಂಧರ್ಭ." ಎಂದು ಹೇಳಿದರು. ಗಣ್ಯರಿಂದ ದೀಪ ಬೆಳಗಲಾಯಿತು. ಶ್ರೀ ರಾಜಗೋಪಾಲಾಚಾರ್ ಅವರು 'ಇಂದು ನಮಗೆ ಆನಂದ' ಎಂಬ ಪ್ರಾರ್ಥನೆ ಹಾಸ್ಯಗೀತೆಯೊಂದಿಗೆ ರಂಜಿಸಿದರು.

ಅಪರಂಜಿ ಪತ್ರಿಕೆಯ ಸಂಪಾದಕರಾದ ಶಿವಕುಮಾರ್ ಅವರು 'ಕೊರವಂಜಿ ಅಪರಂಜಿ ನಡೆದು ಬಂದ ಹಾದಿ' ಎನ್ನುವ ಸೊಗಸಾದ ಪ್ರಸ್ತುತಿ ನೀಡುತ್ತಾ ಚಿತ್ರಗಳಿಗೆ ಸಂದರ್ಭೋಚಿತ ಕಥನಗಳನ್ನು ಹಂಚಿಕೊಂಡರು. ವಿದ್ಯಾರಣ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಎಂ.ವಿ.ಸತ್ಯನಾರಾಯಣ ಅವರು ದತ್ತಿಯ ಉದ್ದೇಶ ಸಾರ್ಥಕತೆಯ ಬಗ್ಗೆ ಮಾತನಾಡುತ್ತಾ ಡಾ. ಎಚ್. ಕೆ. ರಂಗನಾಥ್ ಬಗ್ಗೆ ತಮಗಿರುವ ಗೌರವ ಭಾವವನ್ನು ಹಂಚಿಕೊಂಡರು. ಶ್ರೀ ಶಿವಕುಮಾರ್ ಅವರಿಗೆ ವಿದ್ಯಾರಣ್ಯ ಪ್ರತಿಷ್ಠಾನ 'ಡಾ. ಎಚ್. ಕೆ. ರಂಗನಾಥ್ ಸ್ಮಾರಕ ಹಾಸ್ಯಪ್ರಶಸ್ತಿ' ನೀಡಿ ಗೌರವಿಸಿತು. ಪ್ರಶಸ್ತಿ ವಾಚನವನ್ನು ಸೂಕ್ತವಾಗಿ ಶ್ರೀಮತಿ ಅನಘ ನೆರವೇರಿಸಿದರು. ಭವನದ ಅಧ್ಯಕ್ಷರಾದ ಶ್ರೀ ಕೆ.ಜಿ.ರಾಘವನ್ ಅವರು ನಗಿಸಬೇಕು,

ನಕ್ಕು ನಲಿಯಬೇಕು' ಎಂದು ಸ್ಫೂರ್ತಿದಾಯಕ ಮಾತುಗಳನ್ನು ಆಡಿದರು. ಪ್ರಶಸ್ತಿ ಸ್ವೀಕರಿಸಿದ ಸಂಧರ್ಭದಲ್ಲಿ ಮಾತನಾಡಿದ ಶ್ರೀ ಶಿವಕುಮಾರ್ – ಅಂದಿನ ಸಸಿ ಅಪರಂಜಿ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಪ್ರಶಸ್ತಿ ಕೇವಲ ಅಪರಂಜಿಗೆ ಮಾತ್ರವಲ್ಲ – ಹಾಸ್ಯ ಮನೋಭಾವವನ್ನು ಪೋಷಿಸಿಕೊಂಡು ಬಂದಿರುವ ಹಾಸ್ಯ ರಸಿಕರಿಗೂ ಸಲ್ಲುವ ಗೌರವ ಇದು. ಈ ಪ್ರೋತ್ಸಾಹದಿಂದ ಅಪರಂಜಿ ಪ್ರಭಾವಿತಳಾಗಿ ಇನ್ನೂ ಹೆಚ್ಚಿನ ಹುರುಪಿನಿಂದ ಕನ್ನಡಾಂಬೆಗೆ ಹಾಸ್ಯದ ಬೆಡಗನ್ನು ನೀಡುವಳೆಂದು ಭರವಸೆ ನೀಡಿದರು.

ಮುಖ್ಯ ಅತಿಥಿ ಪ್ರೊ.ಎಂ ಕೃಷ್ಣೇ ಗೌಡ ಅವರು "ಈ ಕಾರ್ಯಕ್ರಮದಲ್ಲಿ ಭಾಗವಹಿಸೋದು ಬಹಳ ಗೌರವ. 42 ವರ್ಷಗಳಿಂದ ನಿರಂತರವಾಗಿ ನಡೆದುಬಂದಿದೆ ಅಪರಂಜಿ. ಇಂಥ ಸಭೆಗಳಲ್ಲಿ ಆಪ್ತ ಭಾವ, ಪ್ರೀತಿ ಹರಿದಾಡುತ್ತೆ. ಸದಭಿರುಚಿಯಾದ ಹಾಸ್ಯ ಬರಬೇಕು ಅನ್ನುವ ಅಪರಂಜಿ ಪತ್ರಿಕೆಗೆ ಬದ್ಧತೆ ಇದೆ. ವಿನಮ್ರವಾಗಿ ಒಳ್ಳೆಯ ಹಾಸ್ಯವನ್ನು ಪಸರಿಸಬೇಕು ಅನ್ನೋ ಉದ್ದೇಶ ಇದೆ. ಬಹಳ ಮುಖ್ಯವಾದದ್ದು ಅದೇನೇ. ಸತ್ಯನಾರಾಯಣ ಅವರಿಗೆ ರಂಗನಾಥ್ ಅವರ ಪರಿಚಯವೇನಿರಲಿಲ್ಲ. ಅವರ ಬಗ್ಗೆ ಇದ್ದ ಗೌರವ ಈ ಪ್ರಶಸ್ತಿ ಇನ್ಸ್ಟಿಟ್ಯೂಟ್ ಮಾಡಿದ್ದೇವೆ ಅಂತಾರೆ. ದೊಡ್ಡ ಮನಸ್ಸು ಅವರದ್ದು. ಇಂಥ ಸಂಸ್ಕೃತಿ ಸಂಪನ್ನರಿಂದ ಈ ಜಗತ್ತು ಬೆಳೆಯಬೇಕು"ಎನ್ನುತ್ತಾ ಸಭಿಕರಿಗೆ ನಮಸ್ಕರಿಸಿದರು. ಶ್ರೀಮತಿ ನಾಗಲಕ್ಷ್ಮಿ ವಂದನಾರ್ಪಣೆ ಸಲ್ಲಿಸಿದರು.

ಹಾಸ್ಯ ರಂಜನೆಯ ಕಾರ್ಯಕ್ರಮದಲ್ಲಿ ಅಪರಂಜಿಯ ಕಾರ್ಟೂನಿಸ್ಟ್ ರಾಂಕಿ ಬೆಳ್ಳೂರ್ ಎರಡು ಅಣಕವಾಡುಗಳನ್ನು ಹಾಡಿದರು. 'ಸಾಕ್ಷಿ' ಮತ್ತು 'ಜೋಡೀದಾರ' – ಎರಡು ಹಾಸ್ಯ ಪ್ರಹಸನಗಳನ್ನು ಶ್ರೀ ಅಶ್ವತ್ಥನಾರಾಯಣ್ ಮತ್ತು ಶ್ರೀ ರಾಜಗೋಪಾಲಾಚಾರ್ ಅವರು ರಂಜಿಸಿದರು. ಬೇಲೂರು ರಾಮಮೂರ್ತಿಯವರು ಅಚ್ಚುಕಟ್ಟಾಗಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಶ್ರೀ ರಂಗನಾಥ್ ಅವರ ಇಬ್ಬರು ಹೆಣ್ಣು ಮಕ್ಕಳು ಉಪಸ್ಥಿತರಿದ್ದುದು ವಿಶೇಷ. ■

"ಕೊರವಂಜಿ" ಕರೆತಂದ ರಾ.ಶಿ
ರಾ. ಶಿವರಾಮ ಹಾಸ್ಯದ ಹರಿಕಾರ
ಹೊಸ ಲೇಖಕರ ಪರಿಚಯಿಸಿ 'ರಾ.ಶಿ'
ಹೊರಬಂದವು ಹಾಸ್ಯ ರಾಶಿ ರಾಶಿ.
ಭುವನೇಶ್ವರಿ ಹೆಗಡೆ, HKR
ಶಿವಸ್ವಾಮಿ 'ಕೇಫ'
ಸುನಂದಮ್ಮ ದೀಕ್ಷಿತರು
ಹಲವಾರು ಲೇಖಕರು
ನಮಗೆಲ್ಲ ತೋರಿದರು
"ನಗೆಯ ಕಾಶಿ"
ಅಂಥಹ ರಾ. ಶಿವರಾಮ್‌ರ
ಹೆಮ್ಮೆಯ 'ಕುವರ'
ಶಿಸ್ತಿನ ಸಿಪಾಯಿ 'ಶಿವಕುಮಾರ'

ಆರಂಭ ಇವರಿಂದ "ಅಪರಂಜಿ"
ಅಪ್ಪನದು "ಕೊರವಂಜಿ"
ಇಪ್ಪತ್ತೈದು ವರುಷ
ಮಗನ "ಅಪರಂಜಿ" ಗೆ ನಲ್ವತ್ತಮೂರು
ಸಾಗುತಿದೆ ಶುಭವಾಗಿ
ಸಾಗಲಿ ಹೀಗೆ ನಿಮ್ಮ ಸಲುವಾಗಿ
ಮುಗಿಸಲಿ 'ಐವತ್ತು'
ನೆಗೆಯಲಿ 'ನೂರಕ್ಕೆ'
ಈಗ "HKR ಸ್ಮಾರಕ" ಪುರಸ್ಕಾರ
ಎಲ್ಲರ ಹಾರೈಕೆ ಭರಪೂರ
ಶಿವಕುಮಾರ್ ರವರಿಗೆ
ಅಭಿನಂದನೆ ವಂದನೆಗಳು.

**– ಆರ್ ರಾಗೋಪಾಲಾಚಾರಿ**

**ಅವಿಸ್ಮರಣೀಯ ನಗೆಗಾರರು–6**

# ಟಿ. ಸುನಂದಮ್ಮ



**ಶಿವಕುಮಾರ್**

ಕೊರವಂಜಿಯ ಪ್ರಾರಂಭದ ಸಂಚಿಕೆಯಿಂದಲೂ ಅದರ ಹೊರ ರಕ್ಷಾಪುಟದ ಮೇಲೆ ಒಂದು ಬರಹಗಾರರ ಪಟ್ಟಿ ಅಚ್ಚಾಗಿರುತ್ತಿತ್ತು. ಆ ಪಟ್ಟಿಯ ಕೊನೆಯಲ್ಲಿ ಯಾವಾಗಲೂ ಇರುತ್ತಿದ್ದ ಒಂದು ಹೆಸರೆಂದರೆ ಶ್ರೀಮತಿ. ಟಿ.ಸುನಂದಮ್ಮ. ಈ ಹೆಸರಾಂತ ಲೇಖಕಿ ಕೊರವಂಜಿ ಮಾಸಪತ್ರಿಕೆಗೆ ನಿರಂತರವಾಗಿ ಲೇಖನಗಳನ್ನು ನೀಡಿ ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತಿ, ಮನ್ನಣೆಗಳನ್ನು ಪಡೆದರು.

ಚಿಕ್ಕ ವಯಸ್ಸಿನಿಂದಲೂ ಸುನಂದಮ್ಮನವರು ಓದಿನಲ್ಲಿ ಚುರುಕು. ವ್ಯಾಕರಣ, ಗಣಿತ, ಆಂಗ್ಲಭಾಷೆಯ ಪದ್ಯ ಪಾಠಗಳು–ಪ್ರತಿಯೊಂದರಲ್ಲೂ ಜಾಣೆ. ಇವರು ತರೀಕೆರೆಯಲ್ಲಿ ಶಾಲೆಗೆ ಸೇರಿದಾಗ ಅದೇ ತೊಂದರೆಯಾಗಿ ಪರಿಣಮಿಸಿತು. ಇವರು ಇಷ್ಟು ಚುರುಕಾಗಿದ್ದು ಉಪಾಧ್ಯಾಯರೆಲ್ಲರ ಮೆಚ್ಚುಗೆ ಪಡೆದರೂ ತರಗತಿಯ ಇತರ ವಿದ್ಯಾರ್ಥಿಗಳೆಲ್ಲಾ ಹುಡುಗರೇ ಆಗಿದ್ದು, ಆ ಹುಡುಗರ ಮನೆಯವರಿಗೆಲ್ಲ ಇದೊಂದು ಅವಮಾನದ ಸಂಗತಿಯಾಗಿಬಿಟ್ಟಿತು. ಆ ಎಲ್ಲ ವಿದ್ಯಾರ್ಥಿಗಳ ತಂದೆಯರೂ ಒಟ್ಟಿಗೆ ಮುಖ್ಯೋಪಾಧ್ಯಾಯರ ಬಳಿಗೆ ಹೋಗಿ, ತರಗತಿಯ ಆ ಏಕೈಕ ವಿದ್ಯಾರ್ಥಿನಿಯನ್ನು ಮನೆಗೆ ಕಳಿಸಬೇಕೆಂದೂ, ಇಲ್ಲದಿದ್ದರೆ ಮುಖ್ಯಾಪಾಧ್ಯಾಯರೇ ಮನೆಗೆ ಹೋಗಬೇಕಾಗಬಹುದೆಂದೂ ಬೆದರಿಸಿದರು. ಆ ಕೂಡಲೆ ಬೇರೆ ಮಾರ್ಗವಿಲ್ಲದೇ ಸುನಂದಮ್ಮನವರನ್ನು ಮನೆಗೆ ಕಳಿಸಲಾಯಿತು. ಆದರೆ ಅವರ ವಿದ್ಯಾಭ್ಯಾಸವೇನೂ ಅಲ್ಲಿಗೆ ನಿಲ್ಲಲಿಲ್ಲ. ಸುನಂದಮ್ಮನವರ ತಾಯಿ ನಾಗಮ್ಮ, ಛಾತಿಯ ಮಹಿಳೆ. ಅವರು ಅದೇ ಗುರುಗಳಿಂದ ಮನೆಪಾಠ ಏರ್ಪಡಿಸಿ, ಅವರ ವಿದ್ಯಾಭ್ಯಾಸ ಮುಂದುವರಿಯುವಂತೆ ನೋಡಿಕೊಂಡರು. ನಿರೀಕ್ಷಿಸಿದಂತೆ ಸುನಂದಮ್ಮನವರು ಲೋಯರ್ ಸೆಕೆಂಡರಿಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. ಅಷ್ಟೇ ಅಲ್ಲ ಮುಂದೆ ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅಲ್ಲಿಂದ ಮುಂದೆ ಇಂಟರ್ಮೀಡಿಯಟ್ ಪರೀಕ್ಷೆಯಲ್ಲೂ ವಾಣೀವಿಲಾಸ್ ಕಾಲೇಜಿಗೆ ಮೊದಲ ಸ್ಥಾನ ಪಡೆದರು.

ಸುನಂದಮ್ಮನವರ ತಾತ ಡಿ. ವೆಂಕಟರಾಮಯ್ಯನವರು ಆಗಿನ ಕಾಲದಲ್ಲಿ ವಿದ್ಯಾಧಿಕಾರಿಗಳಾಗಿದ್ದವರು. ತಾತನ ವಿದ್ವತ್ ಪ್ರೀತಿ, ತಂದೆ ತಾಯಿಯರ ಓದುವ ಹವ್ಯಾಸ, ವಿವಿಧ ಲೈಬ್ರರಿಗಳಲ್ಲಿ ಸದಸ್ಯತ್ವ, ಇವೆಲ್ಲದರ ಪರಿಣಾಮವಾಗಿ ಸುನಂದಮ್ಮನವರು, ಹದಿನಾಲ್ಕನೆಯ ವಯಸ್ಸಿನ ವೇಳೆಗೆ ಸರ್ ವಾಲ್ಟರ್ ಸ್ಕಾಟ್, ಛಾರ್ಲ್ಸ್ ಡಿಕ್ಕನ್ಸ್, ಜೇನ್ ಆಸ್ಟಿನ್ ಇವರುಗಳ ಪುಸ್ತಕಗಳನ್ನೆಲ್ಲಾ ಓದಿದ್ದಲ್ಲದೆ, ಕನ್ನಡದ ಗಳಗನಾಥ, ಬಿ.ವೆಂಕಟಾಚಾರ್ ಇವರುಗಳ ಕೃತಿಗಳನ್ನೂ ಓದಿ ಮುಗಿಸಿದ್ದರು.

1941ರಲ್ಲಿ ಸುನಂದಮ್ಮ, ತಮ್ಮ ಪತಿ ವೆಂಕಟನಾರಾಯಣಪ್ಪನವರೊಡನೆ ಬೆಂಗಳೂರಿನಲ್ಲಿ ಸಂಸಾರ ಹೂಡಿದರು. ಆ ಹೊಸದರಲ್ಲೇ ಇವರಿಗೆ ಆಗತಾನೇ ಕೊರವಂಜಿ ಪತ್ರಿಕೆ ಪಾರಂಭಿಸಿದ್ದ ರಾಶಿಯವರೊಡನೆ ಸಂಪರ್ಕ ಉಂಟಾಯಿತು. ಲೇಖಕರ ಬರಹಗಳೇ ತುಂಬಿರುತ್ತಿದ್ದ ಆ ಪತ್ರಿಕೆಯಲ್ಲಿ ಸುನಂದಮ್ಮ ತಮ್ಮ ಬರಹಗಳಿಂದ ಮಹಿಳಾ ಲೇಖಕಿಯ

ಸ್ಥಾನವನ್ನು ತುಂಬಿದರು. ಸುನಂದಮ್ಮನವರ ಹಾಸ್ಯದ ಶೈಲಿ ಬಹು ಸರಳ.

ದಿನನಿತ್ಯ ಸಾಂಸಾರಿಕ ಘಟನೆಗಳಿಂದ ಅವರು ಹಾಸ್ಯವನ್ನು ಹೊರಹೊಮ್ಮಿಸುತ್ತಿದ್ದರು. ಇವರ ಮೊದಲ ಲೇಖನ "ನಾನ್ಕಾರಿಟ್ಟಿದ್ದು". ಈ ಬರಹದಲ್ಲಿ, ತುಂಬಾ ಆಸೆಪಟ್ಟು ಒಬ್ಬ ಪತಿ ಒಂದು ಕಾರನ್ನು ಕೊಳ್ಳುತ್ತಾನೆ. ಪತ್ನಿಯನ್ನು ಕಾರಿನಲ್ಲಿ ಕೂರಿಸಿಕೊಂಡು ಮೆರೆದಾಡುವ ಅನೇಕ ಕನಸುಗಳನ್ನು ಹೊತ್ತಿದ್ದ ಈತ, ಮೊದಲ ಪಯಣದಲ್ಲೇ ಭ್ರಮನಿರಸನ ಹೊಂದುವುದು ಇಲ್ಲಿನ ಕಥಾವಸ್ತು. ಮುಂದಿನ ಆಗುಹೋಗುಗಳನ್ನು ಪತಿಯ ಬಾಯಿಂದಲೇ ಕೇಳಿ.

"(ಕಾರು ಕೊಂಡ ಮೇಲೆ) ದಿನಾ ಆಫೀಸಿಗೆ ಹೋಗಿ ಮನೆಗೆ ಬರುವುದು, ಸಂಜೆ ಮನೆಯಾಕೇನೂ ಮಕ್ಕಳನ್ನೂ ಲಾಲ್ ಬಾಗ್ ಕಬ್ಬನ್‌ಪಾರ್ಕ್‌ಗಳಲ್ಲಿ ಸುತ್ತಿಸುವುದು, ಎಲ್ಲಾ ಶುರುವಾಯಿತು. ನನ್ನ ಹೆಮ್ಮೆಗೆ ಮಿತಿಯೇ ಇರಲಿಲ್ಲ.

ಆದರೆ ಒಂದು ಪಾಯಿಂಟ್ ನನಗೆ ಹೊಳದೇ ಇರಲಿಲ್ಲ. ಸ್ವಲ್ಪ ದಿನಗಳ ನಂತರ ಆಫೀಸಿಂದ ಮನೆಗೆ ಬಂತೂಂದ್ರೆ, "ಇವತ್ತೊಂದರ್ಧಗಂಟೆ ಸಮಾಜಕ್ಕೆ ಕರಕೊಂಡ್ಹೋಗಿ ಬಂದ್ಬಿಡೀಂದ್ರೆ, ಇವತ್ತು ಸ್ವಲ್ಪ ಇಂದ್ರಾಬಾಯಿ ಮನೇ ಹತ್ರ ಬರಬೇಕಲ್ಲಾಂದ್ರೆ...." ಅಂತ ಶುರುಮಾಡಿಬಿಡುತ್ತಿದ್ದಳು. ನಾನೋ...ಸ್ವಲ್ಪ ಹೆಣ್ಣು ಪೆಕ್ಡೇ ! ಅವಳಿಗೆ ಎದುರಾಡುವ ಧೈರ್ಯ ನನಗಿಲ್ಲ. ಅಂತೂ ಅವಳ ಹಿಂದೆ ಹೋಗಿ ಬಾಗಿಲು ಕಾಯುವುದು ಹೆಚ್ಚುಕಡಿಮೆ ನನ್ನ ದಿನಚರಿಯಾಯಿತು.

ಮೊನ್ನೆ ಮಹಿಳೆಯರ ಗೋಷ್ಠಿ ಆಯಿತಲ್ಲಾ, ಅವತ್ತೂ ಯಥಾಪ್ರಕಾರ ಬಾಗಿಲು ಕಾದಿದ್ದೆ. ನಾಲ್ಕೂವರೆಯಿಂದ ಏಳೂವರೆಯವರೆಗೂ ನನ್ನವಸ್ಥೆ ಬೇಡ. ಐದಾರು ಸಿಗರೇಟೂ ಖರ್ಚಾಯಿತು. ಕೊನೆಗೆ ಮಾನ್ಯ ಮಹಿಳೆಯರು ಹೊರಗೆ ದಯಮಾಡಿಸಿದರು. ಅದರಲ್ಲೊಂದು ಗುಂಪು ನನ್ಕಾರಿನ ಪಕ್ಕದ ಕಾರಿಗೆ ಬಂದು ಕೂತಿತು. ಈ ಕಾರು ಎಷ್ಟುಹೊತ್ತಾದರೂ ಯಾಕೋ ಸ್ಟಾರ್ಟೇ ಆಗಲಿಲ್ಲ. ಅವರಲ್ಲೊಬ್ಬಾಕೆ, "ಅಲ್ಲೋಡೋ ರಹೀಮ್, ಆ ಸರೋಜಮ್ಮನ್ನನೆ ಡ್ರೈವರ್‍ನ ಸ್ವಲ್ಪ ಕರೆಯೋ. ಸಹಾಯ ಮಾಡ್ಲಿ. .....................ನೋಡ್ರಿ ಅವನನ್ನ ! ನನ್ಮಾತ್ಕೇಳಿಸ್ಕೊಂಡೂ ಕೇಳಿಸದೋನ್ಹಾಗೆ ಸಿಗರೇಟು ಸೇದ್ತಾ ಕೂತಿರೋದು. ! ಸರೋಜಮ್ಮನಿಗೆ ಹೇಳ್ಬೇಕು ಕಾಣ್ರೀ, ಈ ಅಧಿಕ ಪ್ರಸಂಗಿನ ಓಡ್ಸಿ, ಬೇರೇ ಡ್ರೈವರ್‌ನಿಟ್ಕೊಳ್ಳಿಂತ" ಅಂದಳು.

ಅವಳ್ಮಾತು ಕೇಳ್ತಾ ಕೇಳ್ತಾ ನಾನು ನಾಲ್ಕೈದು ಕಾರುಗಳ ಹಿಂದೆ ಬಚ್ಚಿಟ್ಟುಕೊಂಡೋನು ಆ ಕಾರು ಸ್ಟಾರ್ಟ್ ಆಗಿ ಹಾಳಾಗಿ ಹೋಗೋತನಕ ಈಚೆಗೇ ಬರಲಿಲ್ಲ......

ಇನ್ನೊಮ್ಮೆ ಇವಳನ್ನ ಯಾರೋ ಭಾನುವಾರ ಊಟಕ್ಕೆ ಕರೆದಿದ್ದು ಹನ್ನೊಂದ್ಗಂಟೇಗೆ ಅಷ್ಟನ್ನ ತಿಂದು, ಇವಳನ್ನ ಅವರ ಮನೇಗೆ ಕರೆದುಕೊಂಡು ಹೋದೆ. ಅರ್ಧ ಗಂಟೆ ಮೇಲೆ ಆ ಮನೆ ಯಜಮಾನ್ತಿ ಹೊರಗೆ ಬಂದು "ಲೋ ಬೋರಾ, ಸರೋಜಮ್ಮನ್ನನೆ ಡ್ರೈವರ್‌ಗೆ ಅಂಗಳದಲ್ಲೊಂದೆಲೆ ಹಾಕ್ಸಿ, ಸೀನಪ್ಪನ ಕೈಲಿ ಬಡಿಸೋ. ಅವರಮ್ಮಾವ್ರು ಎಲೆಡಿಕೆ ಹಾಕ್ಕೊಳ್ಳೋದ್ರಲ್ಲಿ ಅವನೂ ಉಂಡ್ಬಿಡ್ಲಿ ಪಾಪ. ಆ ಬಚ್ಚಲ್ಮನೇ ಚೊಂಬನ್ನೂ, ಒಂದ್ಹಿತ್ತಾಳೆ ಲೋಟಾನೂ ಕೂಡ. ಆಮೇಲೆ ಸೀನಪ್ಪನ್ನ ಹುಳೀ ಹಾಕ್ಕೊಂಡ್ಹೋಗೋ ಅಂತ ಹೇಳು" ಅಂದರು.

ಆ ಮಾತು ಕಿವೀಗ್ಬಿತ್ತೋ ಇಲ್ಲವೋ, ಕೆಟ್ಟೆನೋ ಬಿದ್ದೆನೋ ಅಂತ ಕಾರೂ ಅಲ್ಲೇ ಬಿಟ್ಟು ಮನೆಗೆ ಓಡಿ ಬಂದ್ಬಿಟ್ಟೆ......."

ಅವತ್ತಿನಿಂದ ಇವತ್ತಿನ ವರೆಗೂ ಕಾರನ್ನ ಈಚೆಗೆ ತೆಗೆದಿಲ್ಲ. ಹದಿನೈದು ರೂಪಾಯಿಗೆ

ಡ್ರೈವರ್ ಸಿಕ್ಕೋ ಕಾಲ ಬರೋತನಕ ಅದಲ್ಲೇ, ನಾನಿಲ್ಲೇ."

1950ನೇ ಜೂನ್ ತಿಂಗಳಲ್ಲಿ ಸುನಂದಮ್ಮನವರು ಕೊರವಂಜಿಗೆ ಒಂದು ಅಣಕವಾಡನ್ನು ಬರೆದರು. "ಬುಳ್ಳ" ಎಂಬ ಕಾವ್ಯನಾಮದಡಿ ಶ್ರೀನಿವಾಸನ್ ಬರೆಯುತ್ತಿದ್ದ ಧಾಟಿಯಲ್ಲಿ ಸುನಂದಮ್ಮನವರು ನಡೆಸಿದ ಪ್ರಯೋಗವಿದು. ಒಬ್ಬ ಮುಗ್ಧ ಮಡದಿಗೆ ತನ್ನ ಪತಿ ಯಾಕೆ ಅಚಾನಕ್ಕಾಗಿ ರೇಗ್ತಾನೆ ಅನ್ನೋದೇ ತಿಳೀವಲ್ದು. ಅವಳ ಅಮಾಯಕ ಪ್ರಶ್ನೆಗಳನ್ನು ಲೇಖಕಿ "ಕೈ ಹಿಡಿದಾತ ಕಿಡಿ ಕಿಡಿಯಾಗೋದು ಏಕೆ ?" ಎಂಬ ಶೀರ್ಷಿಕೆಯಡಿಯಲ್ಲಿ ರೂಪಿಸಿರುವ ಕವನದ ನಾಲ್ಕು ಪದ್ಯಗಳಲ್ಲಿ ಎರಡನ್ನು ಇಲ್ಲಿ ಉದಹರಿಸಿದೆ.

"ಸೀರೇ ಬಲು ಸಿಂಪಲ್ಲು
ಸಿಂಗಲ್ ಮಾವಿನಕಾಯಿ ಬಾರ್ಡರ್ರು
ಬಿಲ್ಲೇನೂ ಭಾರಿ ಅಲ್ಲ !
ಬರೀ ಆರೇ ಬ್ಲೌಜುಪೀಸು ಜೊತೆಗೆ,
ಬೇಡವೇ ಬಳಸಲು ಸಂಜೆಗೆ ?
ಅದರಲ್ನಾಕೇ ಸ್ಯಾಟಿನ್ನು,
ಮತ್ತಿನ್ನೆಲ್ಲಾ ಕಾಟನ್ನು : "
ಅಂತ ನಾನಂದ್ಮಾತ್ರಕ್ಕೆ
ಕೈ ಹಿಡಿದಾತ ಕಿಡಿ ಕಿಡಿ ಯಾಗೋದು ಯಾಕೆ ?
"ಒಡವೇಲಿ ಬಡವಳೇ ನಾನು !
ಹಡೆದವರು ಕೊಟ್ಟಿದ್ದಲ್ಲದೆ ಕೈ
ಹಿಡಿದವರು ಕೊಟ್ಟಿರುವುದು
ಏನು ಎಷ್ಟು ಎಲ್ಲಿ ?
ಸೇರಿದ ಮೇಲೆ ನಿಮ್ಮನೆಯ,
ಸುರೈಯ ಸರ, ಭಾನುಮತಿ ಬ್ಯಾಂಗಲ್ಸ್,
ಚಂದ್ರಲೇಖಾ ಚೈನು,
ಇಷ್ಟೇ ಅಲ್ಲವೇ ಅಡಿಷನ್ನು ?
ಈಗೊಂದು ನರ್ಗೀಸ್ ನೆಕ್‌ಲೇಸ್
ಮಾಡ್ಸಿದ್ದಕ್ಕೆ ಸಿಟ್ಟೇಕೆ, ಏಕೆ ಇಷ್ಟು ಎರಪ್ಪನ್ನು ?"
ಅಂದ್ಮಾತ್ರಕ್ಕೆ ಕೈ ಹಿಡಿದಾತ ಕಿಡಿ ಕಿಡಿ ಯಾಗೋದು ಯಾಕೆ ?

ಸುನಂದಮ್ಮನವರು ಸೃಷ್ಟಿಸಿದ ಪಾತ್ರಗಳಲ್ಲಿ ಬಹು ಜನಪ್ರಿಯವಾದವರೆಂದರೆ ಸರಸು ಮತ್ತು ಮೈಲಾರಯ್ಯ ದಂಪತಿಗಳು. ಈ ಗಂಡಹೆಂಡಿರು ಕೊರವಂಜಿಯಲ್ಲಿ ಮೊದಲು ಕಾಣಿಸಿಕೊಂಡಿದ್ದು ಜನವರಿ 1951 ನೇ ಇಸವಿಯ ಸಂಚಿಕೆಯಲ್ಲಿ. "ಸೋಲದ ಸರಸು" ಎಂಬ ಈ ಲೇಖನದ ಕೆಲವು ಸ್ವಾರಸ್ಯಗಳನ್ನು ಇಲ್ಲಿ ನೋಡಿ.

"ಅವಳದೊಂದು (ಸರಸುವಿನದು) ವಿಶೇಷ ಗುಣ. ಅಚ್ಚಾದ ಯಾವುದೇ ಸುದ್ದಿಯನ್ನು ಕಂಡರೂ ಅದನ್ನು ಪೂರ್ತಿ ನಂಬಿ, ತಕ್ಷಣವೇ ಕಾರ್ಯರೂಪಕ್ಕಿಳಿಸಿಬಿಡುವುದು. ಒಂದು ಸಾರಿ ಸರಸು ಯಾವುದೋ ಪೇಪರಿನಲ್ಲಿ ಓದಿದಳು. "ಫ್ರಾನ್ಸಿನಲ್ಲಿ ಹಾಡು ಹಾಲನ್ನು ಹೆಚ್ಚಿಸುತ್ತದೆ ಎಂಬುದನ್ನು ಕಂಡು ಹಿಡಿದಿರುವರು. ಸಂಗೀತವನ್ನಾಲಿಸುವ ಹಸುಗಳು ಹೆಚ್ಚಿಗೆ ಹಾಲನ್ನು ಕರೆಯುತ್ತವೆ. ಅಲ್ಲಿನ ಅನೇಕ ಗೋಮಾಳಗಳಲ್ಲಿ ರೇಡಿಯೋ ಅಳವಡಿಸಿರುವರಂತೆ". ಇದನ್ನು ಓದಿ ಸರಸುಗೆ ಸ್ಫೂರ್ತಿ ಉಕ್ಕಿತು. ಮನೇಲಿರೋ ಸೀಮೆ ಹಸು ಹಾಲು ನೆಟ್ಟಗೆ ಕೊಡುತ್ತಿಲ್ಲ. ಸಧ್ಯ ಹಾಲು ಹೆಚ್ಚಿಸುವ ಮಾರ್ಗ ಸುಗಮವಾಯಿತಲ್ಲ ಅಂತ ಸಂತೋಷಿಸಿದಳು. ರೇಡಿಯೋ ಅವಳ ಮನೆಯಲ್ಲಿಲ್ಲ. ಇಲ್ಲದಿದ್ದರೇನು? ಅವರಪ್ಪ ಅಮ್ಮ ಅವಳಿಗೂ ತಾಳಿ ಕಟ್ಟಿಸುವವರೆಗೂ ಹಾರ್ಮೋನಿಯಂ ಮೇಷ್ಟ್ರಿಗೆ ಹಣ ತೆತ್ತಿರಲಿಲ್ಲವೇ?

ಅಟ್ಟದಿಂದ ಅವತರಿಸಿತು ಹಾರ್ಮೋನಿಯಂ. ಧೂಳನ್ನು ವರೆಸಿ ಜಿರಲೆ ಸಂಸಾರಗಳನ್ನು ಆಚೆಗೆ ಸಾಗಿಸಿ ಸಿದ್ಧಮಾಡಿಕೊಂಡಳು. ಸಂಜೆ ಆಳು ಹಾಲು ಕರೆಯಲು ಕುಳಿತ. ಹಸುವಿನ ಹಟ್ಟಿಯ ಬಾಗಿಲಲ್ಲಿ ಕುಳಿತು ಹಾರ್ಮೋನಿಯಂ ತಿದಿ ಒತ್ತಿದಳು. "ಬಿಡೆ ನಿನ್ನ ಪಾದವ, ಬಿಂಕವಿದೇಕೆ......"

ಶೃತಿಯೆತ್ತಿದಳು. ಹಸು ಪಾದ ಒಂದು ಬಾರಿ ಝಾಡಿಸಿತು. "ಕೊಡು ಮನೋಭೀಷ್ಟವಾ ಕೋಪವಿದೇಕೆ ........" ಹಾಡು ಮುಂದೆ ತೇಲಿತು. ಹಾಲು ಕೊಡುವುದು ಹಾಗಿರಲಿ, ಹಸುವಿನ ಕೋಪ ಪ್ರಕೋಪಿಸಿ ಹಾಲಿನ ಪಾತ್ರೆ ಆಳಿನ ಕೈಯಿಂದ ಆರು ಮಾರು ಆಚೆ ಉರುಳಿತು ! "ಕೋರೆಯ ಮೊಸಗೀ ಕೊಸರಿಕೊಂಡರೂ ಬಿಡೆ............" ಕೊಂಬಿನಿಂದ ಆಳನ್ನು ತಿವಿದದೊಂದೇ ಅಲ್ಲ, ಹಗ್ಗ ಹರಿದು ಉದ್ರೇಕಗೊಂಡ ಹಸು ಹಾರಿ ಓಡಿದ ರಭಸದಲ್ಲಿ ಹಾರ್ಮೋನಿಯಂ ಮೇಲೆ ಸರಿಯಾಗಿ ನಾಲ್ಕು ಪಾದಗಳೂ ನೆಟ್ಟುಹೋದವು! ಬಡಪಾಯಿ ಹಾರ್ಮೋನಿಯಂ ಒಂದೇ ಬಾರಿ ಸಪ್ತಸ್ವರಗಳಲ್ಲೂ ನರಳಿ ಲಟಲಟನೆ ತಣ್ಣಗಾಯಿತು.

1967ರಲ್ಲಿ ಕೊರವಂಜಿಯನ್ನು ರಾಶಿ ಕಾಡಿಗೆ ಕಳಿಸಿದ ನಂತರ ಅದೇ ಸಮಯಕ್ಕೆ ಪ್ರಾರಂಭವಾಗಿದ್ದ ಸುಧಾ, ಮಲ್ಲಿಗೆ, ಪ್ರಜಾಮತ ಮುಂತಾದ ಪತ್ರಿಕೆಗಳು ಸುನಂದಮ್ಮನವರ ಲೇಖನಗಳನ್ನು ಪ್ರಕಟಿಸತೊಡಗಿದವು. ಸುನಂದಮ್ಮನವರಿಗೆ ಆಕಾಶವಾಣಿಯ ಜೊತೆಗೂ ಗಾಢವಾದ ನಂಟಿತ್ತು. ಮೈಸೂರು ಬೆಂಗಳೂರು ಆಕಾಶವಾಣಿಗಳು, ಸುನಂದಮ್ಮನವರಿಂದ ಅನೇಕ ನಾಟಕ, ಭಾಷಣ ಪ್ರಹಸನ, ಮಹಿಳಾ ಕಾರ್ಯಕ್ರಮಗಳನ್ನು ಬರೆಸಿದವು. ನೃತ್ಯ ರೂಪಕಗಳು, ಮಾಸ್ತಿ ಅವರ ಕತೆಗಳ ರೇಡಿಯೋ ರೂಪಾಂತರ, ಇವೆಲ್ಲವನ್ನು ಆಕಾಶವಾಣಿಗಾಗಿ ಸುನಂದಮ್ಮನವರು ಬರೆದರು.

ತುಂಬು ಬಾಳನ್ನು ಸಾರ್ಥಕತೆಯಿಂದ ನಿರ್ವಹಿಸಿ 2006 ನೇ ಇಸವಿಯ ಜನವರಿ ತಿಂಗಳಲ್ಲಿ ಸುನಂದಮ್ಮನವರು ನಮ್ಮನ್ನಗಲಿದರು.

ಅವರು ಕನ್ನಡ ಜನತೆಗೆ ಧಾರಾಳವಾಗಿ ಹಂಚಿಕೊಂಡ ಹಾಸ್ಯಪ್ರಜ್ಞೆ, ಜೀವನ ಪ್ರೀತಿ ಬಹುಕಾಲ ಜನಮಾನಸದಲ್ಲಿರುವುದು ಖಂಡಿತ. ■



**ಅಪರಂಜಿ ಬಳಗದ ಎಲ್ಲರಿಗೂ**
**ಹೊಸ ವರ್ಷದ**
**ಶುಭಾಶಯಗಳು**



# ಟ್ವಿನ್ ಸ್ಟೋರ್ಸ್ !

✍ತುರುವೇಕೆರೆ ಪ್ರಸಾದ್

ಅದೊಂದು ಸಿಟಿಗೇ ಅಪರೂಪವಾದ ಮತ್ತು ವಿಶಿಷ್ಟವಾದ ಟ್ವಿನ್ ಸ್ಟೋರ್! ಜೋಡಿ ವಸ್ತುಗಳೆಲ್ಲಾ ಅಲ್ಲಿ ಸಿಗುತ್ತವೆ. ಟ್ವಿನ್ಸ್‌ಗಳಿಗಂತೂ ಅದು ಅಚ್ಚುಮೆಚ್ಚಿನ ಯೂನಿಕ್ ಸ್ಟೋರ್! ಕಿಡ್‌ವೇರ್ಸ್‌ನಿಂದ ಹಿಡಿದು ಯೂತ್ ಫ್ಯಾಷನ್ ಕಲೆಕ್ಷನ್‌ವರೆಗೆ ಅಲ್ಲಿ ಟ್ವಿನ್ಸ್‌ಗಳಿಗೆ ಅಗತ್ಯವಾದ ಎಲ್ಲಾ ಡ್ರೆಸ್ ವೇರ್ಸ್, ಮೇಕಪ್ ಕಿಟ್ಸ್, ಹ್ಯಾಂಡ್‌ಬ್ಯಾಗ್ಸ್, ಡೆಕೋರೇಟೀವ್ ಐಟಮ್ಸ್, ಆಂಟಿಕ್ ಪೀಸ್‌ಗಳು, ಡಾಲ್ಸ್ ಇತರೆ ಎಲ್ಲಾ ವಸ್ತುಗಳೂ ಈ ಸ್ಟೋರ್ಸ್‌ನಲ್ಲಿ ಗ್ಯಾರೆಂಟಿ ಸಿಗುತ್ತವೆ.

ಒಂದು ಚೈತ್ರಮಾಸದ ಆಹ್ಲಾದಕರ ಬೆಳಿಗ್ಗೆ. ಮೋಹಿತ್ ಆಗಿನ್ನೂ ಅಂಗಡಿ ತೆರೆದು ಪೂಜೆ ಮುಗಿಸಿ ಎಲ್ಲವನ್ನೂ ಒಪ್ಪವಾಗಿ ಜೋಡಿಸಿಡುತ್ತಿದ್ದ.ಆ ವೇಳೆಗೆ ಮಿಂಚುಗಣ್ಣಿನ ಐಸ್‌ಕ್ರೀಂ ಸುಂದರಿಯೊಬ್ಬಳು ಅಂಗಡಿ ಪ್ರವೇಶಿಸಿದಳು. ಮೋಹಿತ್ ಮಾಡುತ್ತಿದ್ದ ಕೆಲಸ ಬಿಟ್ಟು ಅವಳನ್ನು ಅಟೆಂಡ್ ಮಾಡಲು ಕ್ಯಾಶ್ ಟೇಬಲ್ ಬಳಿ ಬಂದ.

'ಗುಡ್ ಮಾರ್ನಿಂಗ್, ಏನು ಬೇಕಿತ್ತು?'

'ವೆರಿ ಗುಡ್ ಮಾರ್ನಿಂಗ್' ಅವಳು ಹಾಲು ಚೆಲ್ಲಿದಂತೆ ನಕ್ಕಳು. 'ನನಗೆ ಇದಕ್ಕೊಂದು ಜೋಡಿ ಬೇಕಿತ್ತು' ಒಂದು ಚಿಕ್ಕ ಕೆತ್ತನೆಯ ಆಂಟಿಕ್ ಹೆಣ್ಣು ಬೊಂಬೆಯೊಂದನ್ನು ಮೇಜಿನ ಮೇಲಿರಿಸಿದಳು. ಮೋಹಿತ್ ಅದನ್ನೇ ನೋಡಿದ. ನಿಟ್ಟುಸಿರಿಟ್ಟು ಅಡ್ಡಡ್ಡ ತಲೆಯಾಡಿಸಿದ.

'ಸಾರಿ ಟು ಡಿಸಪಾಯಿಂಟ್ ಯೂ..ಇದರ ಎಕ್ಸಾಕ್ಟ್ ಮ್ಯಾಚ್ ನನ್ ಹತ್ರ ಇಲ್ಲ. ಬೇಕಾದ್ರೆ ತರಿಸಿಕೊಡ್ತೀನಿ'

'ಪ್ಲೀಸ್ ತರಿಸಿಕೊಡಿ..ಇದು ನಿಮ್ಮಲ್ಲೇ ಇರಲಿ' ಅವಳು ನಿರಾಳರಾದಂತೆ ಖುಷಿಯಿಂದ ಅಲ್ಲಿಂದ ಹೊರಟಳು.

'ಎಕ್ಸ್ ಕ್ಯೂಸ್‌ಮಿ, ನಿಮ್ಮ ಹೆಸರು..'

ಅವಳು ಹಾಗೇ ನಿಂತಳು. ಅವನತ್ತ ನೋಡಿದಳು. 'ಈ ಆರ್ಡರ್ ರೆಫರೆನ್ಸ್‌ಗೆ ನಿಮ್ ಹೆಸರು ಬೇಕು!

'ಅಮೃತಾ' ಎಂದಳು ಹುಡುಗಿ

'ಇಫ್ ಯು ಡೋಂಟ್ ಮೈಂಡ್, ಇದರ ಜೋಡಿ ಹೇಗೆ ಕಳೆದು ಹೋಯಿತು ಅಂತ ಕೇಳಬಹುದಾ?'

'ಓಹ್! ನೋ, ಅದು ಕಳೆದು ಹೋಗಿಲ್ಲ. ನಾನು, ನನ್ನ ತಂಗಿ ಟ್ವಿನ್ಸ್..ಅವಳು ಓದಕ್ಕೆ ಚೆನ್ನೈಗೆ ಹೊರಟು ಹೋದ್ಲು. ನಾವಿಬ್ರೂ ಒಬ್ರನ್ನೊಬ್ರು ಬಿಟ್ಟಿದ್ದೇ ಇಲ್ಲ. ಈ ಡಾಲ್ ಪೈರ್ ನಮ್ಮಿಬ್ರಿಗೂ ತುಂಬಾ ಫೇವರೈಟ್..ಅದಕ್ಕೇ ಇಬ್ರೂ ಒಂದೊಂದು ಇಟ್ಕೊಂಡ್ವಿ. ನಾನು ಇದಕ್ಕೊಂದು ಜೊತೆ ಸಿಗ್ಬಹುದಾ ಅಂತ ಹುಡುಕ್ತಿದೀನಿ'

'ಓಹ್! ಗ್ರೇಟ್, ಖಂಡಿತಾ ನಾನು ಅದನ್ನ ತರಿಸಿಕೊಡ್ತೀನಿ' ಅವನು ಪ್ರಾಮಿಸ್ ಮಾಡುವವನಂತೆ ಹೇಳಿದ.

'ಥ್ಯಾಂಕ್ಸ್ ಎ ಲಾಟ್, ಇಟ್ ವಿಲ್ ಬಿ ಎ ಗ್ರೇಟ್ ಫೇವರ್' ಎಂದು ನಕ್ಕಳು.

ರ್ಯಾಕ್ ಒಂದಕ್ಕೆ ಹೊಂದಿಕೊಂಡಂತಿದ್ದ ನಿಲುವು ಕನ್ನಡಿಯಲ್ಲೊಮ್ಮೆ ತನ್ನನ್ನು ನೋಡಿಕೊಂಡಳು. ಹಿಂದೆ ನಿಂತ ಮೋಹಿತ್ ತನ್ನನ್ನೇ ನೋಡುತ್ತಿರುವುದು ಕನ್ನಡಿಯಲ್ಲಿ ಕಾಣಿಸಿತು. ಹಾಗೆ ಹೋಗುವಾಗ  ಕನ್ನಡಿಯ ಹಿಂಭಾಗದಲ್ಲಿ ಜೋಡಿಸಿಟ್ಟ ವಸ್ತುಗಳ ರ್ಯಾಕ್ ಹಿಂದಿನಿಂದ ಜೋಡಿ ಕಂಗಳೊಂದು ಅವಳನ್ನು ನೋಡುವುದನ್ನು ಗಮನಿಸಿದಳು. ಆ ಕಣ್ಣುಗಳನ್ನು ಎಲ್ಲೋ ನೋಡಿದೆನಲ್ಲ ಎನಿಸಿತು. ಮತ್ತೆ ನೋಡಿದಳು. ಅಲ್ಲೇನೂ ಕಾಣಲಿಲ್ಲ, ಭ್ರಮೆಯಿರಬೇಕೆಂದು ಹಾಗೇ ಹೊರಟು ಹೋದಳು.

ಇದಾಗಿ ವಾರದ ನಂತರ ಮತ್ತೆ ಆ ಹುಡುಗಿ ಟ್ವಿನ್ ಸ್ಟೋರ್ಸ್ಗೆ ಬಂದಳು. ಮೋಹಿತ್ ಮುಗುಳ್ನಗುತ್ತಾ ಆಹ್ವಾನಿಸಿದ. ತನ್ನ ಐಟಮ್ ಬಂತಾ ಎಂದು ವಿಚಾರಿಸಿದಳು.

'ಸಾರಿ ಮೇಡಂ. ಅದು ಎಷ್ಟು ಹುಡುಕುದ್ರೂ ಸಿಕ್ಲಿಲ್ಲ, ನೆಕ್ಸ್ಟ್ ವೀಕ್ ಖಂಡಿತಾ ತರಿಸಿ ಕೊಡ್ತೀನಿ ಅಂದ ಮೋಹಿತ್. ಆಗಲಿ ಎಂದು ಅವಳು ತಲೆಯಾಡಿಸಿದಳು. ಅವಳಿಗೇ ಅರಿವಿಲ್ಲದಂತೆ ರ್ಯಾಕ್ ಕಡೆ ಹಿಂದಿನ ಬಾರಿ ನೋಡಿದ್ದ ಜೋಡಿ ಕಂಗಳಿಗಾಗಿ ಹುಡುಕಿದಳು. ಅವಳಿಗೆ ಅಲ್ಲಿ ಏನೂ ಕಾಣಲಿಲ್ಲ. ಮೋಹಿತ್ ಅಂಗಡಿಗೇ ಜ್ಯೂಸ್ ತರಿಸಿ ಕೂರಿಸಿ ಉಪಚರಿಸಿದ. ಅವಳು ಅಂಗಡಿಯನ್ನೆಲ್ಲಾ ನೋಡಿದಳು. ಅಲ್ಲಿನ ಕಲೆಕ್ಷನ್ ನೋಡಿ ನಿಬ್ಬೆರಗಾದಳು. ಮೋಹಿತ್ಗೆ ಥ್ಯಾಂಕ್ಸ್ ಹೇಳಿ ಏನೋ ಯೋಚಿಸುತ್ತಾ ಹೊರಬಂದಳು.



ಅವಳು ಅಲ್ಲಿಗೆ ಮತ್ತೆ ಮತ್ತೆ ಬಂದಳು. ಮೋಹಿತ್ ಇನ್ನೂ ನಿಮ್ಮ ಐಟಂ ಸಿಕ್ಕಿಲ್ಲ ಎಂದು ಹೇಳುತ್ತಿದ್ದ. ಹಾಗೇ ಅವರ ಮಧ್ಯೆ ಸಲುಗೆ ಬೆಳೆಯಿತು. ಇಬ್ಬರೂ ನಗುತ್ತಾ, ಚಿಟ್ ಚಾಟ್ ಮಾಡುತ್ತಿದ್ದರು. ಮೋಹಿತ್ಗೆ ಅವಳ ಮೇಲಿದ್ದ ಆಕರ್ಷಣೆ ಪ್ರೀತಿಯಾಗಿ ಬೆಳೆಯಿತು. ಅವಳಿಗಾಗಿ ಅವನು ಚಾತಕ ಪಕ್ಷಿಯಂತೆ ಕಾದು ಕೂರುತ್ತಿದ್ದ. ಅವಳೂ ಅದಕ್ಕೆ ಸ್ಪಂದಿಸುತ್ತಾ ಹೋದಳು.

ಒಂದಿನ ಹುಡುಗಿ ಬಂದು ಮೌನವಾಗಿ ನಿಂತಳು. ಮಾತಿಲ್ಲ, ಕತೆಯಿಲ್ಲ. ಮೋಹಿತ್ ಮಾತಾಡುತ್ತಲೇ ಹೋದ. ಯಾವುದಕ್ಕೂ ಉತ್ತರವಿಲ್ಲ,

'ಓಹ್, ನಿನಗೆ ನನ್ ಮೇಲೆ ಸಿಟ್ಟು ಬಂದಿದೆ. ನಾನು ಆ ಡಾಲ್ ಪೈರ್ ತಂದ್ಕೊಡ್ಲಿಲ್ಲ ಅಂತಾನಾ? 'ಎಂದ ಮೋಹಿತ್ ಸ್ವಲ್ಪ ಅಪ್‌ಸೆಟ್ ಆದ. ಹುಡುಗಿ ಮೌನವಾಗೇ ಇದ್ದಳು.

'ರೋಹಿತ್' ಎಂದು ಕೂಗಿದ. ಒಳಗಿನಿಂದ ಒಬ್ಬ ಯುವಕ ಈಚೆ ಬಂದ: 'ಇವನು ನನ್ನ ಎಂಗರ್ ಬ್ರದರ್ ರೋಹಿತ್'. ಹುಡುಗಿಗೆ ಪರಿಚಯಿಸಿದ. ಹುಡುಗಿ ಅವನ ಕಡೆ ನೋಡಿದಳು. ಎಲ್ಲಾ ಮೋಹಿತ್ ತದ್ರೂಪೇ!

'ರೋಹಿತ್, ನೀನು ನನಗೋಸ್ಕರ ಒಂದು ಸಣ್ಣ ಕೆಲಸ ಕೂಡ ಮಾಡ್ಲಿಲ್ಲ, ಆ

ಡಾಲ್ ಪೈರ್ ಹುಡುಕಿ ತರೋಕೆ ಹೇಳಿದ್ದೆ. ಕೊನೆಗೂ ನೀನು ತರ್ಲಿಲ್ಲ, ಇಷ್ಟೇನಾ ನಿಂಗೆ ಈ ಅಣ್ಣನ್ ಮೇಲಿರೋ ಪ್ರೀತಿ, ಗೌರವ?' ಎಂದು ಸಿಟ್ಟಿನಿಂದಲೇ ಕೇಳಿದ.

'ಸಾರಿ ಬ್ರದರ್, ಒನ್ ಮಿನಿಟ್'

ರೋಹಿತ್ ಒಳಗೆ ಹೋಗಿ ಒಂದು ಬಾಕ್ಸ್‌ನೊಂದಿಗೆ ಈಚೆ ಬಂದ. ಅದನ್ನು ಬಿಡಿಸಿದ. ಅದರಲ್ಲಿ ಎರಡು ಪುಟ್ಟ ಬೊಂಬೆಗಳಿದ್ದವು

'ಬ್ರದರ್, ಇವರು ತಮ್ಮ ಹತ್ರ ಇದ್ದ ಒಂಟಿ ಡಾಲ್ಗೆ ಪೈರ್ ಹುಡುಕ್ತಿದ್ರು. ಇವರ ಸಿಸ್ಟರ್ರೂ ಹಾಗೇ ಹುಡುಕ್ತಿರಬಹುದು ಅನಿಸ್ತು. ಅಥವಾ ಹಾಗೆ ಹುಡುಕದೇ ಇದ್ರೂ ಯಾವಾಗ್ಲಾದರೂ ಅಕ್ಕನ ಹತ್ರ ಡಾಲ್ ಪೈರ್ ಇರೋದು ನೋಡಿದಾಗ ಅಕ್ಕ ನನ್ನ ಡಾಲ್‌ನ ಒಂಟಿ ಮಾಡ್ಬಿಟ್ಳು ಅಂತ ಬೇಜಾರ್ ಮಾಡ್ಕೊತಿದ್ರೇನೋ? ಸೋ ಒಂದು ಸಿಕ್ಕಿದ್ರೂ ನಾನು ಇನ್ನೊಂದು ಸಿಕ್ಮೇಲೆ ಕೊಡೋಣ ಅಂತ ಸುಮ್ನಿದ್ದೆ. ನಿನ್ನೆ ಬೆಂಗಳೂರಲ್ಲಿ ಇನ್ನೊಂದು ಮ್ಯಾಚಿಂಗ್ ಡಾಲ್ ಸಿಕ್ತು' ಮಾತು ನಿಲ್ಲಿಸಿ ಹುಡುಗಿ ಕಡೆ ನೋಡಿದ: 'ಸಾರಿ, ಲೇಟಾಗಿದ್ದಕ್ಕೆ ಕ್ಷಮಿಸಿ.ಅದು ನನ್ ಮಿಸ್ಟೇಕ್, ಬ್ರದರ್‌ದು ಅಲ್ಲ' ಎಂದು ಅಲ್ಲಿಂದ ಒಳಗೆ ಹೊರಟು ಹೋದ.

ಹುಡುಗಿ ಕಣ್ಣುಗಳು ಮಿಂಚಿದವು. ಮಾತಾಡದೆ ಡಾಲ್‌ಗಳೊಂದಿಗೆ ಮೇಲೆದ್ದಳು. ಮೋಹಿತ್ ಅವಳತ್ತಲೇ ನೋಡುತ್ತಿದ್ದ. ಹುಡುಗಿ ರ್‍ಯಾಕ್ ಕಡೆ ನೋಡಿದಳು. ರ್‍ಯಾಕ್ ಹಿಂದಿನಿಂದ ಎರಡು ಕಣ್ಣುಗಳು ಹೊಳೆಯುತ್ತಿದ್ದವು. ಹುಡುಗಿ ನಿಧಾನವಾಗಿ ರ್‍ಯಾಕ್ ಕಡೆ ಮೂವ್ ಆದಳು. ಕನ್ನಡಿಯ ಮುಂದೆ ನಿಂತಳು. ಮೆಲ್ಲಗೆ ಪಿಸುಗುಟ್ಟಿದಳು: 'ನಾನು ಅಮೃತಾ ಅಲ್ಲ, ಅವಳ ಸಿಸ್ಟರ್ ಅರ್ಪಿತಾ, ಈ ಡಾಲ್ಗೆ ಪೈರ್ ಹುಡುಕಿ ಕೊಟ್ಟಿದ್ದಕ್ಕೆ ಥ್ಯಾಂಕ್ಸ್ ಎ ಲಾಟ್!' ರ್‍ಯಾಕ್ ಹಿಂದಿನ ಕಂಗಳು ಅರ್ಪಿತಾಳ ಬಿಂಬವನ್ನು ತಮ್ಮೊಳಗೆ ತುಂಬಿಕೊಂಡವು. ■



# ರುಕ್ಕು ಇದ್ದಮೇಲೆ....

✍ ಚಿತ್ರಾ ರಾಮಚಂದ್ರನ್

ಆಗಷ್ಟೇ ರವಾನೆಯಾಗಿದ್ದ ವಿಮಾನದಿಂದ ಮರದಿಂದ ಉದುರಿದ ಹಣ್ಣುಗಳಂತೆ ಹೊರಬಿದ್ದ ಪಯಣಿಗರಿಂದ ಗಿಜಿಗುಡುತ್ತಿತ್ತು ವಿಮಾನ ನಿಲ್ದಾಣ. ವೈವಿಧ್ಯಮಯ ಚಹರೆಗಳು ! ವೈವಿಧ್ಯಮಯ ಭಾಷೆಗಳು ! ಮಕ್ಕಳ ಆರ್ಭಟ ! ಎಲ್ಲೆಡೆ ಪಸರಿಸಿದ್ದ ಕಾಫಿಯ ಪರಿಮಳ ! ಗಡಿಬಿಡಿಯಿಂದ ಓಡಾಡುತ್ತಿದ್ದ ಇಮಿಗ್ರೇಷನ್ ಅಧಿಕಾರಿಗಳು ! ಪ್ರತಿಯೊಂದು ಲಗ್ಗೇಜನ್ನೂ ಮೂಸುತ್ತಿದ್ದ ಪೊಲೀಸ್ ಶ್ವಾನಗಳು !

ಸುತ್ತಲಿನ ವಾತಾವರಣವನ್ನು ವೀಕ್ಷಿಸುತ್ತ ಕುಳಿತಿದ್ದ ಲಕ್ಷ್ಮಿಗೆ ಎದ್ದು ನಿಂತು ಮೈಕೈ ಮುರಿಯಬೇಕೆನ್ನಿಸಿತು. ಕಸ್ಟಮ್ಸ್ ಪರಿಶೀಲನೆ ಮುಗಿಸಿ ವಿಮಾನ ನಿಲ್ದಾಣದಿಂದ ಬೇಗನೆ ಹೊರಗೆ ಹೋದರೆ ಸಾಕೆನ್ನಿಸಿತು. ಆದಷ್ಟು ಬೇಗ ಸಿಯಾಳನ್ನು ಕಾಣುವ ತವಕವೇರ್ಪಟ್ಟಿತು. 'ಇಗೋ ಬಂದೆ' ಎಂದು ಹೋಗಿದ್ದ ರುಕ್ಕು ಇನ್ನೂ ಕಾಣಿಸಿಕೊಂಡಿಲ್ಲವಲ್ಲ ಎಂಬ ಚಡಪಡಿಕೆ ಶುರುವಾಯಿತು.

ಹೆಸರಾಂತ ವಿಶ್ವವಿದ್ಯಾಲಯ ಒಂದರಲ್ಲಿ ಪ್ರವೇಶ ಪಡೆದಿದ್ದ ಸಿಯಾಳನ್ನು ಅಲ್ಲಿಯ ಹಾಸ್ಟೆಲ್ಗೆ ಸೇರಿಸಿ ಬಂದು ಮೂರು ವರ್ಷಗಳು ಕಳೆದು ಹೋಗಿದ್ದವು. ಅದೇ ಕಾಲೇಜಿಗೆ ತಮ್ಮ ಮಗ ಸಾತ್ವಿಕನನ್ನು ಸೇರಿಸುವುದರ ಸಲುವಾಗಿ ಆಗಮಿಸಿದ್ದ ರುಕ್ಕು ಮತ್ತು ಮಧು ದಂಪತಿಗಳ ಪರಿಚಯವೇರ್ಪಟ್ಟಿತ್ತು. ಮಧು ಬಂದರೂ ಬಿಟ್ಟರೂ, ಪ್ರತಿ ವರುಷವೂ ಥ್ಯಾಂಕ್ಸ್ ಗಿವಿಂಗ್ ಸಂಧರ್ಭದಲ್ಲಿ ವಿದೇಶಕ್ಕೆ ಹೋಗಿ 'ಮದರ್ & ಸನ್ ಟೈಮ್' ಎನ್ನುತ್ತ ಸಾತ್ವಿಕನೊಂದಿಗೆ ಸಮಯ ಕಳೆದು ಬರುತ್ತಿದ್ದಳು ರುಕ್ಕು.

ಕೆಲಸದ ಸಲುವಾಗಿ ಆಗಿಂದಾಗ್ಯೆ ವಿದೇಶ ಪಯಣ ಕೈಗೊಳ್ಳುತ್ತಿದ್ದ ದುಷ್ಯಂತ್ ಸಮಯಸಾಧಿಸಿ ಸಿಯಾಳ ಮುಖ ದರ್ಶನ ಮಾಡಿಕೊಂಡೇ ಹಿಂದಿರುಗುತ್ತಿದ್ದ. ಲಕ್ಷ್ಮಿಗೆ ಮಾತ್ರ ಮುದ್ದು ಮಗಳನ್ನು ಮತ್ತೆ ಭೇಟಿಯಾಗುವ ಅವಕಾಶ ಇಲ್ಲಿಯವರೆಗೆ ಲಭಿಸಿಯೇ ಇರಲಿಲ್ಲ. ಅದರ ಬಗ್ಗೆ ಮಾತೆತ್ತಿದಾಗ ಬ್ಯುಸಿನೆಸ್ ಟ್ರಿಪ್ ಜೊತೆ ಫ್ಯಾಮಿಲಿ ಟ್ರಿಪ್ ಸೇರಿಸುವುದು ಕಷ್ಟ. ಮತ್ತೆ ಇನ್ಯಾವಾಗಲಾದರೂ ಪ್ಲಾನ್ ಮಾಡಿಕೊಂಡು ಹೋಗಿ ಬರೋಣ ಎಂದಿದ್ದ ದುಷ್ಯಂತ್. ಆ ಸಮಯವಂತೂ ಇನ್ನೂ ದೂರವೇ ಉಳಿದಂತಿತ್ತು.

ಮಡದಿಯ ಬಾಡಿದ ಮುಖ ಕಂಡು 'ಈ ಬಾರಿ ಥ್ಯಾಂಕ್ಸ್ ಗಿವಿಂಗ್ ಸಮಯ ರುಕ್ಕು ಒಬ್ಬಳೇ ಹೋಗುತ್ತಿದ್ದಾಳೆ. ನೀನೂ ಅವಳ ಜೊತೆ ಹೋಗಬಾರದೇಕೆ ?' ಎಂದು ದುಷ್ಯಂತ್ ಸಲಹೆ ನೀಡಿದ. ಅವನ ಮಾತು ಕೇಳಿ ಲಕ್ಷ್ಮಿಗೆ ಸ್ವರ್ಗಕ್ಕೆ ಮೂರು, ಅಲ್ಲ ಒಂದೇ ಗೇಣು ಇದ್ದಂತೆ ಅನ್ನಿಸಿತು. ಈ ವಿಷಯವನ್ನು ತುಸು ಸಂಕೋಚದಿಂದ ಪ್ರಸ್ತಾಪಿಸಿದಾಗ 'ರುಕ್ಕು ಇದ್ದಮೇಲೆ ಚಿಂತೆ ಏಕೆ ? ಇಬ್ಬರಿಗೂ ಒಟ್ಟಿಗೇ ಟಿಕೆಟ್ ಬುಕ್ ಮಾಡುತ್ತೇನೆ. ಐ ವಿಲ್ ಟೇಕ್ ಕೇರ್ ಆಫ್ ಎವ್ರಿಥಿಂಗ್.' ಎಂದು ಸಂತೋಷದಿಂದ ಭರವಸೆ ನೀಡಿದ್ದಳು ರುಕ್ಕು.

ಹೇಳಿದಂತೆ ಪಯಣಕ್ಕೆ ಬೇಕಾದ ಎಲ್ಲ ಏರ್ಪಾಡುಗಳನ್ನೂ ಅವಳೇ ಮಾಡಿದ್ದಳು. ಇಗೋ ದೂರದ ಪಯಣವನ್ನು ಕ್ಷೇಮವಾಗಿ ಮುಗಿಸಿ ಗಮ್ಯ ತಲುಪಿದ್ದೂ ಆಯಿತು. ಹಸಿರು ಚಾನೆಲ್ ಮೂಲಕ ಹೊರಗೆ ಹೋಗಲು ಕಾದಿದ್ದ ಪಯಣಿಗರ ಸಾಲಿನಲ್ಲಿ ಸೇರಿಕೊಂಡಾಗ, ಅಧಿಕಾರಿಯೋರ್ವ ರುಕ್ಕುವಿನ ಬಳಿ ಬಂದು ಅದೇನೋ ಮಣಮಣ ಮಾತನಾಡಿದ.

'ಇಗೋ ಬಂದೆ' ಎನ್ನುತ್ತ ಅವನೊಂದಿಗೆ ನಡೆದಿದ್ದಳು ರುಕ್ಕು. ಅರ್ಧ ಗಂಟೆಯ ಮೇಲಾಗಿದ್ದರೂ ಇನ್ನೂ ಅವಳ ಸುಳಿವೇ ಇಲ್ಲ. ಮನಸ್ಸು ಆತಂಕದಿಂದ ಚಡಪಡಿಸ

ತೊಡಗಿತು. ಕೂತು ಕೂತು ಕೈಕಾಲು ಬೆನ್ನು ಎಲ್ಲವೂ ಮರಗಟ್ಟಿಹೋಗಿದ್ದವು. ಈ ಕ್ಷಣ ಲಕ್ಷ್ಮಿಗೆ ಬೇಕಾಗಿದ್ದದ್ದು ಈ ಗಾಲಿ ಕುರ್ಚಿಯಿಂದ ಬಿಡುಗಡೆ.

ಬೆಂಗಳೂರಿನ ವಿಮಾನ ನಿಲ್ದಾಣದ ಸೇವಕ ಗಾಲಿ ಕುರ್ಚಿಯನ್ನು ತಂದು 'ಕುಳಿತುಕೊಳ್ಳಿ ಮೇಡಂ' ಎಂದು ಭವ್ಯವಾಗಿ ನುಡಿದಾಗ ಲಕ್ಷ್ಮಿ ಆಘಾತಗೊಂಡಳು. ಬೋರ್ಡಿಂಗ್ ಪಾಸ್ ಮಾಡಿಸಿಕೊಂಡು ಓಡೋಡಿ ಬಂದ ರುಕ್ಕು 'ಟಿಕೆಟ್ ಬುಕ್ ಮಾಡುವಾಗ ನಿಮಗಾಗಿ ನಾನೇ ಕೇಳಿಕೊಂಡಿದ್ದೆ. ಎಸ್ಕಲೇಟರ್ ಉಪಯೋಗಿಸಿದರೆ ನಿಮಗೆ ತಲೆಸುತ್ತು ಬರುತ್ತದಂತಲ್ಲಾ ? ನಿಮ್ಮ ಹಬ್ಬಿ ಹೇಳಿದ್ದರು. ಈ ರುಕ್ಕು ಇದ್ದಮೇಲೆ ಚಿಂತೆ ಏಕೆ? ನಾನು ನಿಮ್ಮ ವೈಫನ್ನು ಹುಷಾರಾಗಿ ನೋಡಿಕೊಳ್ಳುತ್ತೇನೆ ಎಂದು ಅವರಿಗೆ ಮಾತು ಕೊಟ್ಟಿದ್ದೆ. ಬನ್ನಿ, ಕುಳಿತುಕೊಳ್ಳಿ.' ಎಂದಾಗ ಲಕ್ಷ್ಮಿಗೆ ಗಂಡನಮೇಲೆ ಎಲ್ಲಿಲ್ಲದ ಕೋಪ ಉಕ್ಕಿ ಬಂದಿತು. ಹೊರಗಿನವರಿಗೆ ಕಾಣಿಸದಂತೆ ಹಲ್ಲು ಮಸೆದಳು.




ವಯೋವೃದ್ಧರ ಸೌಲಭ್ಯವನ್ನು ತಾನು ಕಸಿದುಕೊಳ್ಳುವುದು ಅನ್ಯಾಯವಲ್ಲವೇ ? ನಿಧಾನವಾಗಿ ನಡೆದರೆ ಆಗದೆ ? ಲಿಫ್ಟ್ ಉಪಯೋಗಿಸಿಕೊಂಡರೆ ಆಗದೆ ? ಎಂಬ ಅವಳ ವಾದಕ್ಕೆ ರುಕ್ಕು ಮಣಿಯುವ ಹಾಗೆ ಕಾಣಲಿಲ್ಲ .

'ಲಕ್ಷ್ಮಿ ! ನಿಮಗೆ ವರ್ಟಿಗೊ ಸಮಸ್ಯೆ ಇರುವುದು ಸುಳ್ಳಲ್ಲ. ನಿಮ್ಮ ಬಲಗಾಲಿನ ಕಿರುಬೆರಳಲ್ಲಿ ಸಣ್ಣ ಮೂಳೆ ಬಿರುಕು ಏರ್ಪಟ್ಟಿರುವುದೂ ಸುಳ್ಳಲ್ಲ. ಈ ವೇಗವಾದ ಜಗತ್ತಿನಲ್ಲಿ ನಿಧಾನ ಎಂಬ ಪದಕ್ಕೆ ಸಹ ಸ್ಥಾನವಿಲ್ಲ. ನಾವು ವೇಗವನ್ನು ಅನುಸರಿಸದಿದ್ದರೆ ಎಲ್ಲರೂ ನಮ್ಮನ್ನು ತುಳಿದುಕೊಂಡು ಮುಂದೆಹೋಗುವವರೇ. ಯೋಚಿಸ ಬೇಡಿ, ಕುಳಿತುಕೊಳ್ಳಿ, ಹೊರಡೋಣ.' ಎಂದು ಸಮಜಾಯಿಷಿ ನೀಡಿದ್ದಳು ರುಕ್ಕು.

'ಗಾಲಿ ಕುರ್ಚಿ ಪಯಣಿಗರಿಗೆ ಎಲ್ಲೆಡೆ ಮೊದಲ ಆಧ್ಯತೆ. ನಿಮ್ಮಿಂದ ನಿಮ್ಮ ಸಹಾಯಕಳಾದ ನಾನೂ ಸಹ ಆ ಅನುಕೂಲಗಳನ್ನು ಉಪಯೋಗಿಸಿಕೊಳ್ಳಬಹುದಲ್ಲ !' ಎನ್ನುತ್ತ ಕಣ್ಣು ಹೊಡೆದು ನಕ್ಕಿದ್ದಳು ರುಕ್ಕು. ಅಂತೂ ಎಂತೆಂತಹ ಸಂದರ್ಭವನ್ನಾಗಲಿ ತನ್ನ ಅನುಕೂಲಕ್ಕೆ ತಕ್ಕಂತೆ ಬಗ್ಗಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದ ರುಕ್ಕುವಿನ ಮಾತಿಗೆ ಮರುಮಾತನಾಡದೆ ಗಾಲಿ ಕುರ್ಚಿಯಲ್ಲಿ ಕುಳಿತಿದ್ದಳು ಲಕ್ಷ್ಮಿ.

ಕಸ್ಟಮ್ಸ್ ವಿಚಾರಣೆಯ ಕೊಠಡಿಗೆ ಹೋಗಿದ್ದ ರುಕ್ಕು ಅಲ್ಲಿ ಅದೇನು ಅವಾಂತರ ಮಾಡಿಕೊಂಡಿದ್ದಳೋ ಏನೋ ? ಬೇಡಬೇಡವೆಂದರೂ ಕುರುಕಲು ತಿಂಡಿ ತಿನಿಸುಗಳನ್ನು ತಯಾರಿಸಿ, ತನ್ನ ಸೂಟ್ ಕೇಸಲ್ಲಿ ಮಾತ್ರವಲ್ಲದೆ ಲಕ್ಷ್ಮಿಯ ಸೂಟ್ ಕೇಸಿನಲ್ಲೂ ತುಂಬಿದ್ದಳು ರುಕ್ಕು. 'ಮಕ್ಕಳಿಗೆ ನಮ್ಮೂರ ತಿಂಡಿಗಳನ್ನು ತಿನ್ನಬೇಕೆನ್ನಿಸುವುದಿಲ್ಲವೇ ? ನಿಯಮದ ಪ್ರಕಾರ ಎಲ್ಲವನ್ನೂ ಪ್ಯಾಕ್ ಮಾಡಿ ಸೀಲ್ ಮಾಡಿಯೇ ಇಟ್ಟಿರುವೆ. ಡೋಂಟ್ ವರಿ ಮಾಡ್ಕೋಬೇಡಿ ! ಈ ರುಕ್ಕು ಇದ್ದಮೇಲೆ ಚಿಂತೆ ಏಕೆ ?' ಎಂಬ ವಾಡಿಕೆಯಾದ ತಮಾಷೆ ಡೈಲಾಗನ್ನೇ ಹೇಳಿ ಕಿಲ ಕಿಲ ನಕ್ಕಿದ್ದಳು.

ಈಗ ಕಸ್ಟಮ್ಸ್ ವಿಚಾರಣೆಗೆ ಒಳಗಾಗಿ ತಿಂಡಿ ಪ್ಯಾಕೆಟ್ಗಳೊಂದಿಗೆ ಆತ್ಮ ಗೌರವವನ್ನೂ ಕಳೆದುಕೊಂಡು ತಲೆ ಬಾಗಿ ನಿಂತಿರುವಳೋ ಏನೋ ? ವಿಚಾರಣೆಗಾಗಿ ಶೀಘ್ರದಲ್ಲೇ

ಲಕ್ಷ್ಮಿಗೂ ಬುಲಾವ್ ಬಂದಿತು. ಗಾಲಿ ಕುರ್ಚಿಯಾರೂಢಳಾಗಿ ಅಳುಕುತ್ತಲೇ ವಿಚಾರಣೆ ಕೋಣೆಯನ್ನು ಪ್ರವೇಶಿಸಿದಳು ಲಕ್ಷ್ಮಿ. ಅಲ್ಲಿಯ ದೃಶ್ಯ ಅವಳು ಕಲ್ಪನೆ ಮಾಡಿಕೊಂಡಿದ್ದಕ್ಕೆ ತದ್ವಿರುದ್ಧವಾಗಿದ್ದದ್ದು ಕಂಡು ದಿಗ್ಭ್ರಮೆಗೊಂಡಳು.

ಪಾಸ್ಪೋರ್ಟ್ ಮೊದಲಾದ ಎಲ್ಲ ದಾಖಲೆಗಳನ್ನೂ ಪರಿಶೀಲಿಸಲಾಗಿತ್ತು. ಅವರುಗಳ ಸೂಟ್ ಕೇಸ್ಗಳು ತಲಾಶೆಗೊಳಗಾಗುತ್ತಿದ್ದ ಹಾಗೆಯೇ ದಿಟ್ಟತನದಿಂದ ಅಧಿಕಾರಿಯೊಂದಿಗೆ ವಿವಾದಕ್ಕಿಳಿದಿದ್ದಳು ರುಕ್ಕು.

'ನೋಡಿ ! ಮಕ್ಕಳಿಗಾಗಿ ತಂದಿರುವ ನಮ್ಮೂರಿನ ತಿಂಡಿಗಳನ್ನು ನಿಮ್ಮ ನಿಯಮಗಳನ್ನು ಉಲ್ಲಂಘಿಸದೆ ಪ್ಯಾಕ್ ಅಂಡ್ ಸೀಲ್ ಮಾಡಿ ತಂದಿದ್ದೇವೆ. ಎಲ್ಲವನ್ನೂ ಡಿಕ್ಲೇರ್ ಮಾಡಿದ್ದೇವೆ. ಹಾಗಾಗಿ ಹಸಿರು ಚಾನೆಲ್ ಮೂಲಕ ಹೊರಗೆ ಹೋಗಲು ಏಕೆ ಅಡ್ಡಿ ಮಾಡುತ್ತಿರುವಿರಿ?'

'ಸಾರಿ ಮೇಡಮ್ ! ನಮ್ಮ ಡ್ಯೂಟಿ ನಾವು ಮಾಡಲೇ ಬೇಕಲ್ಲ. ನಿಮ್ಮ ಕೈಯಲ್ಲಿರುವುದು ನಿಷೇಧಿಸಲ್ಪಟ್ಟಿರುವ ವಸ್ತು. ಅದನ್ನು ಇಲ್ಲೇ ಬಿಸುಡಿ ನೀವು ಹೋಗಬಹುದು.' ಸಹನೆಯಿಂದ ನುಡಿದಳು ಕಸ್ಟಮ್ಸ್ ಹುಡುಗಿ.

'ರುಕ್ಕು ! ಈ ಸಣ್ಣ ವಿಷಯಕ್ಕೆ ರಗಳೆ ಎಲ್ಲ ಏಕೆ ? ಅದನ್ನ ಬಿಸಾಕಿ ಬನ್ನಿ. ಹೋಗೋಣ. '

ಲಕ್ಷ್ಮಿಯ  ನಯವಾದ ಮಾತು ಕೇಳಿಸಲೇ ಇಲ್ಲವೇನೋ ಎಂಬಂತೆ ಕಸ್ಟಮ್ಸ್ ಹುಡುಗಿಯನ್ನು ಸತಾಯಿಸುತ್ತಿದ್ದಳು ರುಕ್ಕು .

'ನಾನೇನೂ ಇದನ್ನು ನಮ್ಮ ಮನೆಯಿಂದ ಹೊತ್ತು ತಂದಿಲ್ಲ. ನಿಮ್ಮ ಫ್ಲೈಟ್ ಪಯಣಿಗರಿಗೆ ನೀವೇ ಕೊಟ್ಟಿರುವುದು. ನಮಗೆ ಟಿಕೆಟ್ ಮಾಡಿಸುವಾಗ ಇದಕ್ಕೂ ಸೇರಿಸಿಯೇ ನಾವು ಹಣ ತೆತ್ತಿರುವುದು. ಹಾಗಾಗಿ ಇದನ್ನು ಇಟ್ಟುಕೊಳ್ಳುವ ಸಂಪೂರ್ಣ ಹಕ್ಕು ನನಗಿದೆ ಅಂದುಕೊಂಡಿರುವೆ. ಬೇಗ ನಮ್ಮನ್ನು ಹೊರಗೆ ಹೋಗಲು ಬಿಡಿ.'

'ಪ್ಲೀಸ್ ಅಂಡಸ್ಟ್ಯಾಂಡ್ ಮೇಡಮ್. ನಿಷೇಧಿಸಲ್ಪಟ್ಟ ಯಾವುದೇ ವಸ್ತುವೊಂದಿಗೆ ನಮ್ಮ ದೇಶವನ್ನು ಪ್ರವೇಶ ಮಾಡುವ ಹಾಗಿಲ್ಲ.' ಕಸ್ಟಮ್ಸ್ ಹುಡುಗಿಯ ಸಹನೆ ಮೀರುವುದರಲ್ಲಿತ್ತು. ಶೀಘ್ರದಲ್ಲೇ ಕಟ್ಟೆಯೊಡೆದು ಅವಳ ಕಣ್ಣುಗಳಿಂದ ನಯಾಗರಾ ಜಲಪಾತ ಉಕ್ಕಿ ಹರಿಯುವ ಸಾಧ್ಯತೆ ಕಂಡು ಬಂದಿತು.

'ಯು ಪ್ಲೀಸ್ ಅಂಡಸ್ಟ್ಯಾಂಡ್ ಮೈ ಗರ್ಲ್ ! ನಿಷೇದಿಸಲ್ಪಟ್ಟ ವಸ್ತುವನ್ನು ನಿಮ್ಮ ಪಯಣಿಗರಿಗೆ ನೀವು ಕೊಡುವುದೇಕೆ ? ನಂತರ ಕಸಿದುಕೊಳ್ಳುವುದು ಏಕೆ?'

ರುಕ್ಕುವಿನ ನ್ಯಾಯವಾದಕ್ಕೆ ಉತ್ತರಿಸಲಾರದೆ ತತ್ತರಿಸಿದ ಹುಡುಗಿ ತನ್ನ ಮೇಲಧಿಕಾರಿಗೆ ಕರೆ ಮಾಡಿದಳು.

ಈ ರಗಳೆ ದೊಡ್ಡದಾಗಿ ತಾವು ದಂಡ ಕಟ್ಟ ಬೇಕಾಗುತ್ತದೋ ಇಲ್ಲ, ಜೈಲು ಸೇರಬೇಕಾಗುತ್ತದೋ ಎಂದು ಯೋಚಿಸಿದ  ಲಕ್ಷ್ಮಿಯ ದೇಹ ಭಯದಿಂದ ಕಂಪಿಸುತ್ತಿರಲು, ಮೇಲಧಿಕಾರಿ ಇವರನ್ನು ಕುರಿತು ತುರ್ತಾಗಿ ಹೆಜ್ಜೆ ಹಾಕುತ್ತಿರಲು, ಕಸ್ಟಮ್ಸ್ ಹುಡುಗಿ ಪೆಚ್ಚು ಮೋರೆ ಹಾಕಿ ನೋಡುತ್ತಿರಲು, ಕೈಯಲ್ಲಿದ್ದ ವಸ್ತುವನ್ನು ಕ್ಷಣಮಾತ್ರ ನೋಡಿದ ರುಕ್ಕು ಮರುಕ್ಷಣವೇ ಅದನ್ನು ಸುಲಿದು ಬಾಯಿಗೆ ಹಾಕಿ ಗುಳುಮ್ ಮಾಡಿಬಿಟ್ಟಳು. ನಂತರ ಲಕ್ಷ್ಮಿಯನ್ನು ಕುರಿತು ಕಿರುನಗೆ ಬೀರಿ 'ಜೀರ್ಣೋ ಭವ' ಎಂದಳು.

ಸಮಸ್ಯೆಯೇ ಇಲ್ಲದ ಸಮಸ್ಯೆಯನ್ನು ಬಗೆಹರಿಸಿದ ರುಕ್ಕು, ಮತ್ತು ಲಕ್ಷ್ಮಿ ಮತ್ತೊಮ್ಮೆ ಹಸಿರು ಚಾನೆಲ್ ಮೂಲಕ ಹೊರ ನಡೆಯುತ್ತಿರಲು, ರುಕ್ಕು ಗುಳುಮ್ ಮಾಡಿದ್ದ ಬಾಳೆ ಹಣ್ಣಿನ ಸಿಪ್ಪೆ ಕಸದ ಬಿನ್ ಸೇರಿಕೊಂಡಿತ್ತು !

■

# ಪಿಂಗಾಣಿ ಪಾಕ ಪ್ರಸಂಗಗಳು

**ಸಂಜಯ ಹಾವನೂರ,** ಕ್ಯಾಲಿಫೋರ್ನಿಯಾ

1970ರ ದಶಕದ ಮಧ್ಯಕಾಲ. ನಾನಾಗ ಇಂಜನಿಯರಿಂಗ್ ವಿದ್ಯಾರ್ಥಿ. ಕಾಲೇಜಿನ ನಿಯಮಗಳ ಪ್ರಕಾರ ಮುಂಬಯಿಯ ಪವಯಿ ಸರೋವರದ ತಟದಲ್ಲಿ ವಸತಿ, ಊಟ ಎರಡೂ ಕಡ್ಡಾಯವಾಗಿದ್ದವು. ವಸತಿ ತಕ್ಕ ಮಟ್ಟಿಗಿದ್ದರೆ ಊಟ ಅಧ್ವಾನವಾಗಿತ್ತು. ಹಾಸ್ಟೆಲಿನ ಆಡಳಿತ ವರ್ಗಕ್ಕೆ ನಮ್ಮ ಆರೋಗ್ಯದ ಬಗ್ಗೆ ವಿಶೇಷ ಮುತುವರ್ಜಿಯಿತ್ತು. ಯಾರೂ ಅತಿಯಾಗಿ ತಿಂದು ಹೊಟ್ಟೆ ಕೆಡಿಸಿಕೊಳ್ಳಬಾರದೆಂದು, ಹೆಚ್ಚು ತಿನ್ನಲಾಗದ ಪದಾರ್ಥಗಳನ್ನೇ ದಿನಕ್ಕೆ ಮೂರು ಹೊತ್ತು ಮಾಡಿಸುತ್ತಿದ್ದರು. ತಿಂಗಳಿಗೆ ಒಂದು ದಿನ ನಾವುಗಳು ಊರೊಳಗೆ ಯಾತ್ರೆ ಮಾಡಿ ಊಟದ ತೀಟೆ ತೀರಿಸಿಕೊಳ್ಳಬೇಕಿತ್ತು. ಹದಿನೈದರಿಂದ ಇಪ್ಪತ್ತು ಜನರ ನಮ್ಮ ಭೋಜನ ಮಂಡಳಿಯಲ್ಲಿ ನಾವು ಒಂದಿಬ್ಬರು ಶಾಕಾಹಾರಿಗಳು. ಉಳಿದವರು ಅವಶೇಷಾಹಾರಿಗಳು. ಅಂದರೆ ಸತ್ತ ಪ್ರಾಣಿಗಳ ಅವಶೇಷಗಳ ಭಕ್ಷಕರು. ಅವರ ಚಪಲಕ್ಕಾಗಿ ಹೆಚ್ಚಾಗಿ ಉತ್ತರ ಭಾರತದ ಹೊಟಲುಗಳಿಗೆ ನಮ್ಮ ಭೆಟ್ಟಿ

ಅದೇ ಕಾಲಕ್ಕೆ ಮುಂಬಯಿಯಲ್ಲಿ ಚೈನೀಸ್ ಹೋಟಲುಗಳ ಭರಾಟೆ ಆರಂಭವಾಗಿತ್ತು. ಎಲ್ಲ ವಾರ ಪತ್ರಿಕೆಗಳಲ್ಲಿ ಅಲ್ಲಿನ ಊಟದ ವೈಶಿಷ್ಟ್ಯಗಳ ವರ್ಣನೆ. ಭಕ್ಷ್ಯಗಳಿಗಿಂತ ನಮ್ಮನ್ನು ಆಕರ್ಷಿಸುತ್ತಿದ್ದದ್ದು ಒಳಗಿನ ಅಲಂಕಾರ. ಗೋಡೆಗಳ ಮೇಲೆ ರಾರಾಜಿಸುತ್ತಿದ್ದ ಬಣ್ಣ ಬಣ್ಣದ ಪೆಡಂಭೂತಗಳ ಪಟಗಳು, ಮಾಣಿಗಳು ಧರಿಸುತ್ತಿದ್ದ ಜರ್ಬಾದ ಸಮವಸ್ತ್ರಗಳು. ಅದಕ್ಕೂ ಮುಖ್ಯವಾಗಿ ಮೇಜಿನ ಮೇಲೆ ಕೆಂಪು ನೀಲಿ ಚಿತ್ತಾರಗಳಿಂದ ತುಂಬಿದ್ದ ಪಿಂಗಾಣಿ ಬೋಗುಣಿಗಳು, ಮ್ಯಾಚಿಂಗ್ ಚಮಚೆಗಳು. ಊಟ ಏನಾದರೂ ಇರಲಿ ಆ ಸೌಟು ಸಟ್ಟುಗಗಳನ್ನು ಸ್ಟೈಲಾಗಿ ಬಳಸುವ ಚಪಲ ನಮ್ಮಗಳಿಗೆ ಉಕ್ಕೇರಿತ್ತು. ಸಮಸ್ಯೆ ಎಂದರೆ ನಾವೆಲ್ಲ ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದವರು. ಯಾರಿಗೂ ಹೇಳಿಕೊಳ್ಳುವಂಥ ಲಕ್ಷ್ಮೀ ಕಟಾಕ್ಷವಿರಲಿಲ್ಲ. (ಸರಸ್ವತೀ ಕಟಾಕ್ಷವನ್ನು ಕೇಳುವಂತೆಯೇ ಇರಲಿಲ್ಲ!) ತಿಂಗಳಿಗೊಮ್ಮೆ ಮನೆಯಿಂದ ಬರುತ್ತಿದ್ದ ಪಾಕೆಟ್ ಮನಿ ಎಂಬ ನಿರ್ದಿಷ್ಟ ಮೊತ್ತದಲ್ಲಿ ಚಂಗಿಭಂಗಿಗಳನ್ನು ಪೂರೈಸಿಕೊಳ್ಳಬೇಕಿತ್ತು. ಈ ಮಧ್ಯ ಬಾಂದ್ರಾದ ಹಳೇ ಗಲ್ಲಿಯಲ್ಲಿ ಸಣ್ಣದೊಂದು ಚೈನೀಸ್ ಹೋಟಲನ್ನು ನಮ್ಮಲ್ಲೊಬ್ಬ ಪತ್ತೆ ಮಾಡಿದ. ಅದರ ಎದುರಿಗೆ ಸಾಗುವಾಗಲೇ ಘಮ್ಮೆಂದು ವಾಸನೆ ಮೂಗಿಗೆ ಹೊಡೆಯುತ್ತದಂತೆ, ಅಥೆಂಟಿಕ್ಕೇ ಇರಬೇಕು ಎಂದು ಬಲ್ಲವರಾರೋ ಹೇಳಿದರಂತೆ. ನಮಗೆ ಅಷ್ಟೇ ಸಾಕಾಗಿತ್ತು. ಆ ವಾರವೇ ದಂಡಯಾತ್ರೆ ಹೊರಟೆವು. ಕಷ್ಟ ಪಟ್ಟು ಹೋಟಲನ್ನು ಹುಡುಕಿ ಒಳಗೆ ಹೋಗುತ್ತಿದ್ದಂತೆಯೇ ಗಬ್ಬೆಂದು ವಾಸನೆ ಮೂಗಿಗೆ ಆಥೆಂಟಿಕ್ಕಾಗಿ ಅಪ್ಪಳಿಸಿತು. ನಿಜಕ್ಕೂ ಚಿಕ್ಕ ಹೋಟಲೇ. ಒಳಗೆ ಅಬ್ಬಬ್ಬಾ ಎಂದರೆ ಇಪ್ಪತ್ತು ಜನ ಕೂಡಬಹುದು, ಒಂದೂವರೆ ಡಜನ್ ಹುಡುಗರ ಹಿಂಡನ್ನು ನೋಡಿ ಸಂಭ್ರಮದಿಂದ ಎದ್ದು ಬಂದ ಮ್ಯಾನೇಜರ್ ಮಹಾಶಯ. ಇದ್ದ ಬಿದ್ದ ಟೇಬಲ್ಲುಗಳನ್ನು ಉದ್ದಕ್ಕೆ ಸೇರಿಸಿ ಕೂಡಿಸಿದರು. ಒಬ್ಬೊಬ್ಬರ ಕೈಗೂ ಒಂದು ಬಣ್ಣದ ಮೆನು ಪುಸ್ತಕ ಕೊಟ್ಟು ಮಾಣಿಗಳು ಕೈ ಕಟ್ಟಿ ನಿಂತಾಗ ಅದೇನು ಸಂಭ್ರಮ! "ಅಹಹಾ!" ಎಂದು ಮೊದಲ ಪುಟವನ್ನು ನೋಡಿದವರಿಗೆ ಎದೆ ಧಸಕ್ಕೆಂದಿತು. ಒಂದೊಂದು ಪದಾರ್ಥದ ಬೆಲೆ ನಾವು ಎಣಿಸಿದ್ದಕ್ಕಿಂತ 2–3 ಪಟ್ಟು. ಶಾಕಾಹಾರಿಗಳಿಗೆ ಬಹಳವೆಂದರೆ ಸಣ್ಣ ಬಟ್ಟಲು ಮೆಕ್ಕೆ ಜೋಳದ ಗಂಜಿಯೇ ಗತಿ. ಮೊದಲಿನಿಂದ ಕೊನೆಯ ವರೆಗೆ ಪುಟಗಳನ್ನು ಮತ್ತೆ ಮತ್ತೆ ತಿರುವಿ ಹಾಕಿದ ಮಾಂಸಭಕ್ಷಕರಿಗೆ ಅವರ ಕಾಸಿನ ಮಿತಿಯಲ್ಲಿ ಒಂದೇ ಒಂದು ಪದಾರ್ಥವೂ ಕಾಣಲಿಲ್ಲ. ಹಾಗೆಂದು ನಿಜ ಹೇಳಿ ಏನೂ ತಿನ್ನದೇ ಎದ್ದು ಬರಲಿಕ್ಕಾಗುತ್ತದೆಯೇ? ಇಜ್ಜತ್ ಕಾ

ಸವಾಲ್! ಎಲ್ಲರೂ ಒಬ್ಬರದೊಬ್ಬರ ಮುಖ ನೋಡುತ್ತ ಐದು ನಿಮಿಷ ಕಳೆದೆವು. ಕೊನೆಗೊಬ್ಬ ಮುಖ ಕಿವಿಚಿ "ಇವತ್ತು ನನಗೆ ಅಂಥ ಹಸಿವೆಯೇನೂ ಇಲ್ಲ. ಇದೋ ಈ ಏಡಿ (ಅಥವಾ ಆಮೆ ಅಥವಾ ಟುವ್ವತಾರ, ಯಾವುದೋ ನೆನಪಿಲ್ಲ) ಮಾಂಸದ ಸೂಪು ಚೆನ್ನಾಗಿರುತ್ತದೆ ಎಂದು ಕೇಳಿದ್ದೇನೆ. ಒಂದರ್ಧ ಬೋಗುಣಿ ಸಾಕು" ಎಂದು ಗಿಂಜಿದ.

"ಸರ್ ಅದು ಇವತ್ತು ಇಲ್ಲ, ಸಾರೀ" ಎಂದ ಮ್ಯಾನೇಜರು. ಸೂಪು ಕೇಳಿದವನಿಗೆ ಸಡನ್ನಾಗಿ ಸ್ಫೂರ್ತಿ ಉಕ್ಕಿತು. ದಿಢೀರನೇ ಎದ್ದು ನಿಂತು "ಕೇಳಿದಿರೇನ್ರೋ. ಏಡಿಯ ಸೂಪು ಇಲ್ಲವಂತೆ ಇವತ್ತು" ಎಂದು ಅರಚಿದ. ಎಷ್ಟೆಂದರೂ ನಾವು ಭಾವೀ ಅಭಿಯಂತರು. ಸಮಸ್ಯೆಗಳಿಗೆ ಸೃಜನಶೀಲ ಪರಿಹಾರಗಳನ್ನು ಕ್ಷಣಾರ್ಧದಲ್ಲಿ ರೂಪಿಸುವ ಶಿಕ್ಷಣ ಪಡೆಯುತ್ತಿದ್ದವರು. ನಾನೂ ಸೇರಿದಂತೆ ಎಲ್ಲರೂ ಲೊಚಗುಟ್ಟಿ "ಛೇ ಏನನ್ಯಾಯ! ಸೂಪು ಕುಡಿಯಲಿಕ್ಕೆಂದೇ ಇಷ್ಟು ದೂರ ಬಂದಿದ್ದು ಹೀಗಾಯಿತಲ್ಲ. ಪರವಾಗಿಲ್ಲ ಡೋಂಟ್ ವರಿ ಮಾಡಿಕೋಬೇಡಿ. ಮುಂದಿನ ವಾರ ಇದೇ ದಿನ ಮತ್ತೆ ಬರುತ್ತೇವೆ. ಕಂಠಪೂರ್ತಿ ಏಡಿ ಮಾತ್ರವಲ್ಲ ತಿಮಿಂಗಿಲದ ಸೂಪನ್ನೂ ಕುಡಿದು ಹೋಗುತ್ತೇವೆ ಆಯಿತೆ?" ಎಂದು ಹೇಳುತ್ತ, ಮ್ಯಾನೇಜರು ಮತ್ತು ಮಾಂಧಾತರ ಮುಖ ನೋಡಲಿಕ್ಕೆ ಸಹ ಧೈರ್ಯ ಮಾಡದೇ ಹೊರಗೆ ದೌಡಾಯಿಸಿದೆವು. ದಾರಿಯಲ್ಲಿ ಮೊದಲು ಕಂಡ ಭೈಯ್ಯಾನ ಅಂಗಡಿಯಲ್ಲಿ ಹೊಟ್ಟೆಬಿರಿ ಪೂರಿ ಪರಾಠಗಳನ್ನು ಮೇದು ಲಸ್ಸಿಯ ಆಪೋಷಣ ತೆಗೆದುಕೊಂಡು ಬಂದದ್ದಾಯಿತು.

ನಮ್ಮ ಚೈನೀಸ್ ಚಪಲ ಇಷ್ಟಕ್ಕೆ ಮುಗಿಯಲಿಲ್ಲ. ಇನ್ನೊಂದು ಹೋಟಲನ್ನು ಪತ್ತೆ ಮಾಡಿದೆವು. ಅವರಿವರನ್ನು ಕೇಳಿ ಬೆಲೆಗಳು ನಮಗೆ ನಿಲುಕುವಂತಿವೆ ಎಂದು ಖಾತರಿ ಮಾಡಿಕೊಂಡೆವು. ದೊಡ್ಡ ಹೋಟಲು, ವಿಶಾಲವಾಗಿತ್ತು. ಈ ಸಲದ ದರಪಟ್ಟಿಯಲ್ಲಿ ಕನಿಷ್ಠ ಅಂಕಿಗಳನ್ನು ನೋಡಿ ಮೊದಲು ಸಂಭ್ರಮವಾದರೂ ಗೊಂದಲ ಶುರುವಾಯಿತು. ಅದರಲ್ಲಿನ ಹೆಸರುಗಳು ಒಂದಕ್ಕಿಂತ ಒಂದು ವಿಚಿತ್ರವಾಗಿದ್ದವು. "ನಾವು ಹುನಾನ್ ಪ್ರಾಂತದ ಪ್ರಾಚೀನ ಪಾಕ ಪರಂಪರೆಯ ಪರಿಪಾಲಕರು" ಎಂದು ಮೊದಲ ಪುಟದಲ್ಲಿ ದೊಡ್ಡದಾಗಿ ಬರೆದುಕೊಂಡಿದ್ದರು. ಹುನಾನ್ ಯಾವ ಪಾಳ್ಯದ ಹೆಸರೆಂದು ಯಾರೊಬ್ಬನಿಗಾದರೂ ಗೊತ್ತಿದ್ದರೆ ತಾನೆ. ಭಾರತೀಯ ಭೋಜನವೆಂದರೆ ತಂದೂರಿ ಮಾತ್ರ ಎಂದು ತಿಳಿದವರು ಮೊದಲ ಬಾರಿಗೆ ಇಡ್ಲಿ ವಡೆ ಚೌಚೌ ಬಾತಿನ ಮೆನು ನೋಡಿದಂತೆ ನಮ್ಮ ಗತಿ. ಕೊನೆಗೆ ಯಾವುದು ಹೆಚ್ಚು ನಿಗೂಢ ಅಥವಾ ಆಕರ್ಷಕವಾಗಿ ಕಾಣುತ್ತದೋ ಅಂಥ ಹೆಸರುಗಳನ್ನು ಬೊಟ್ಟಿಟ್ಟು ತೋರಿಸಿ ಆರ್ಡರು ಮಾಡಿದೆವು.

ಬಡಿಸುವ ಸಂಭ್ರಮ ಆರಂಭವಾಯಿತು. ಮೊದಲಿಗೆ ಬಣ್ಣ ಬಣ್ಣದ ಶೀಸೆಗಳಲ್ಲಿ ದ್ರಾವಣಗಳನ್ನು ತಂದಿಟ್ಟರು. ಪುಟ್ಟ ಬಟ್ಟಲುಗಳಲ್ಲಿ ನೀಲಿ ಹಳದಿ ವರ್ಣದ "ಚಟ್ನಿಗಳು" ಸುಮಾರು ಹೊತ್ತಾದ ಮೇಲೆ ಕೊನೆಯಲ್ಲಿ ಕವಳ. ಕಾಸಿಗೆ ತಕ್ಕ ಕಜ್ಜಾಯ ಎಂಬ ಸೂಕ್ತಿ ಚೀನದಲ್ಲಿಯೂ ಇದೆ ಎಂದು ಅವತ್ತು ಮೊದಲ ಬಾರಿಗೆ ಗೊತ್ತಾಯಿತು! ನಾವು ಶಾಕಾಹಾರಿಗಳಿಗೆ ಅರ್ಧ ಹೊಟ್ಟೆಗಾಗುವಷ್ಟು ಗಂಜಿಯಾದರೂ ಸಿಕ್ಕಿತು, ಮಾಂಸಭಕ್ಷಕರಿಗೆ ಅದೂ ಇಲ್ಲ. ಯಾವುದೋ ಕುಕ್ಕುಟ ಭಕ್ಷದ ಮಿಸ್ಟೀರಿಯಸ್ ಹೆಸರಿಗೆ ಮರುಳಾಗಿ ಹೆಚ್ಚಿನವರು ಅದನ್ನು ಕೇಳಿದ್ದರು. ಬಂದದ್ದು ಚಂದದ ಬೋಗುಣಿಯಲ್ಲಿ ಅರ್ಧದಷ್ಟು ಕುಚಲಕ್ಕಿಯ ಗಂಜಿ, ಅದರಲ್ಲಿ ತೇಲುತ್ತಿದ್ದ ಅರ್ಧ ಡಜನ್ ಕೋಳಿಯ ಅವಶೇಷಗಳು. ಹುರಿದದ್ದೂ ಅಲ್ಲ, ಕುದಿಸಿದ್ದು. ಪೆಚ್ಚಾಗಿ ಒಂದು ಚಮಚ ರುಚಿ ನೋಡಿದರೆ ಉಪ್ಪು ಸಹ ಹಾಕಿರಲಿಲ್ಲ! ಊಟಕ್ಕೆ ಹೇಗಾದರೂ ಒಂದು ಗತಿ ಕಾಣಿಸಬೇಕೆಂದು ಮೇಜಿನ ಮೇಲೆ

ಇಟ್ಟಿದ್ದ ಬಾಟಲಿಗಳನ್ನೆಲ್ಲ ಸುರಿದುಕೊಂಡದ್ದು ಪ್ರಯೋಜನವಾಗಲಿಲ್ಲ. ಇವರುಗಳ ಪರದಾಟವನ್ನು ಉತ್ಸಾಹವೆಂದು ಭ್ರಾಂತಿಸಿದ ಮಾಣಿಗಳು ಇನ್ನಷ್ಟು ಸೀಸೆಗಳನ್ನು ತಂದಿಟ್ಟರು. ಹಿಂದೆ ಮುಂದೆ ನೋಡದೇ ಸುರಿದುಕೊಂಡ ಮೇಲೆ ಅದರಲ್ಲಿ ಯಾವುದೋ ಘಾಟು ವಾಸನೆಯ ಕರಿಯ ಕಷಾಯವಿದ್ದದ್ದು ಲಕ್ಷ್ಯಕ್ಕೆ ಬಂತು. ಚಿತ್ತಾರದ ಚಮಚದಿಂದ ತಿರುವಿ ಹಾಕಿದರೇನಾದರೂ ಅದರ ಬಣ್ಣ ಬದಲಾದೀತೆಂಬ ಭ್ರಾಂತಿಯಲ್ಲಿ ಮತ್ತೆ ಮತ್ತೆ ಕೈಯಾಡಿಸಿದ್ದೇ ಬಂತು. ತಿಳಿಯಾಗುವ ಬದಲಿಗೆ ಇನ್ನಷ್ಟು ಘೋರವಾಗಿ, ಶಾಲಾ ದಿನಗಳಲ್ಲಿ ಪೆನ್ನಿಗೆ ಹಾಕಲು ಬಳಸುತ್ತಿದ್ದ ಕಪ್ಪು ಮಸಿಯಂತೆ ಕಂಗೊಳಿಸುತ್ತಿತ್ತು. ಮಾಡಿದ್ದುಣ್ಣೋ ಮಹರಾಯ ಎಂದು ಬೇರೆ ದಾರಿ ಕಾಣದೇ ಒಂದು ಸಲಕ್ಕೆ ಅರ್ಧವೇ ಸಟ್ಟುಗದಷ್ಟು ಕಪ್ಪು ಕಲಗಚ್ಚನ್ನು ಸವಿಯುತ್ತಿದ್ದವರ ದುರಂತ, ಶಾಕಾಹಾರಿಗಳಲ್ಲಿ ಕನಿಕರ ಅಪಹಾಸ್ಯಗಳನ್ನು ಒಟ್ಟೊಟ್ಟಿಗೆ ಉಕ್ಕಿಸುತ್ತಿತ್ತು.

ಕುಕ್ಕುಟಾಹಾರದ ಕರ್ಮಕಾಂಡ ಮುಗಿಸಿ ಹೊರಗೆ ಬಂದ ಮೇಲೆ ಊಟ ಎಲ್ಲಿ ಮಾಡುವುದೆಂಬ ಸಮಸ್ಯೆ ಎದುರಾಯಿತು. ಅಳಿದುಳಿದ ಪುಡಿಗಾಸಿನಲ್ಲಿ ಏನು ತಿನ್ನಬಹುದೆಂಬ ಚರ್ಚೆ ನಡೆಯಲಿಕ್ಕೆ ಹತ್ತು ನಿಮಿಷ ಕೊಟ್ಟು  ಹೇಳಿದೆ "ಅಯ್ಯಾ ಮಂಕು ಮಿತ್ರರೇ ಹೋಟಲಿನಲ್ಲಿ ನಿಮ್ಮ ಗೋಳನ್ನು ನೋಡಿ ತಾಳಲಾರದೇ ಮೆಲ್ಲಗೆ ಹೊರಗೆ ಹೋಗಿದ್ದೆ. ಹಾಸ್ಟೆಲಿನ ಮ್ಯಾನೇಜರಿಗೆ ಫೋನು ಮಾಡಿ, ಸ್ವಲ್ಪ ಎಡವಟ್ಟಾಗಿ ನಾವು ಹದಿನೈದು ಜನ ಇಲ್ಲಿ ಸಿಕ್ಕಿ ಕೊಂಡಿದ್ದೇವೆ. ಬರುವುದು ತಡವಾಗುತ್ತದೆ. ನಮ್ಮ ಊಟಗಳನ್ನು ತೆಗೆದಿರಿಸಿ ಎಂದು ವಿನಂತಿ ಮಾಡಿಕೊಂಡೆ. ಆಯಿತು ಎಂದು ಒಪ್ಪಿದ್ದಾರೆ. ನಿಮ್ಮಗಳ ಮುಂಡ ಮೋಚಿತು ನಡೀರಿ ವಾಪಸ್ಸು"

ತಾಯಿ ಅನ್ನಪೂರ್ಣೇಶ್ವರಿಯ ಅನುಗ್ರಹ ನಿನ್ನ ಮೇಲೆ ಶಾಶ್ವತವಾಗಿರಲಿ ಎಂದು ಹಾರೈಸಿ ಎಲ್ಲರೂ ಬಸ್ಸು ಹತ್ತಿದರು

***

ಅಂತೂ ಇಂತೂ ಇಂಜನಿಯರಿಂಗ್ ಮುಗಿಸಿ, ಹತ್ತು ವರ್ಷಗಳ ನಂತರ ನಾನು ಬೆಂಗಳೂರು ಸೇರಿಕೊಂಡಿದ್ದೆ. ಕಂಪನಿಯ ಕೆಲಸಕ್ಕೆ ಆಗಾಗ ಮುಂಬಯಿಗೂ ಹೊಗಬೇಕಿತ್ತು. ಆಗ ಕೆಲವು ಕಾಲ ನನ್ನ ಪೂಜ್ಯ ತಂದೆ ದಿವಂಗತ ಶ್ರೀನಿವಾಸ ಹಾವನೂರರೂ ಮುಂಬಯಿಯಲ್ಲೇ ಇದ್ದರು. ಹೊಸತಾಗಿ ಆರಂಭವಾಗಿದ್ದ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ನಿರ್ದೇಶಕರಾಗಿ. ಕ್ಯಾಂಪಸ್ಸಿನ ಮನೆಯಲ್ಲಿ ಅವರ ವಾಸ, ರಾತ್ರಿ ಮರಾಠೀ ಖಾನಾವಳಿಯಲ್ಲಿ ಸಾದಾ ಊಟ. ಅಷ್ಟು ಹೊತ್ತಿಗೆ ಚೈನೀಸು ಹೊಟೇಲುಗಳು ಸರ್ವವ್ಯಾಪಿಯಾಗಿದ್ದವು. ಸಾಲದೆಂದು ಇಂಡೋ ಚೈನೀಸ್ ಎಂಬ ಅಸಡ್ಡಾಳ ಅಡುಗೆಯೂ ಆರಂಭವಾಗಿತ್ತು. ಅದೇಕೋ ಅಪ್ಪನಿಗೆ ಒಂದು ಸಲ ಚೈನೀಸು ಭೋಜನ ಮಾಡಿಸಬೇಕೆಂಬ ಮಹತ್ವಾಕಾಂಕ್ಷೆ ಉಕ್ಕತೊಡಗಿತ್ತು. ಒಮ್ಮೆ ಪ್ರಸ್ತಾಪ ಮಾಡಿದೆ

"ಹೇ ಅಲ್ಲಿ ಬಂದು ಹಾವು ಕಪ್ಪೆ ತಿನ್ನಬೇಕೇನೋ ನಾನು? ನೀ ಯಾವಾಗ ಸುರು ಮಾಡಿದಿ ಇದನ್ನೆಲ್ಲ?" ನನ್ನ ಮೇಲೆ ಗುರಾಯಿಸಿದರು.

"ನಿನ್ನಂಥಾ ಸದ್ಬ್ರಾಹ್ಮಣನಿಗೆ ಸರ್ಪಹತ್ಯಾ ದೋಷ ಅಂಟಿಸಿ ನಾ ಯಾವ ನರಕಕ್ಕ ಹೋಗಲಿ? ಚೀನಾದವರೆಲ್ಲ ಬರೇ ಹಾವು ಇಲಿ ತಿನ್ನುವವರಲ್ಲ. ಶಾಕಾಹಾರಿಗಳೂ ಸಾಕಷ್ಟಿದ್ದಾರೆ. (ಇದು ನಿಜ). ಮೆಕ್ಕೆ ಜೋಳದ ಗಂಜಿ, ಅಕ್ಕಿ ಸೇವಿಗೆ, ಚಿತ್ರಾನ್ನ ಎಲ್ಲಾ ಸಿಗತದ. ರುಚಿಯೂ ವಿಶಿಷ್ಟವಾದದ್ದು. ಒಮ್ಮೆ ತಿಂದು ನೋಡಿದರ ನಿನಗ ಗೊತ್ತಾಗತದ. ಇಷ್ಟಕ್ಕೂ ಅದರ ಬಿಲ್ಲು ನಮ್ಮ ಕಂಪನಿಯವರು ಕೊಡತಾರ. (ಇದು ಶುದ್ಧಾಂಗ

ಸುಳ್ಳು)" ಎಂದು ಸಮಜಾಯಿಷಿ ಹೇಳಿದೆ. ಮಂಗಳೂರಿನಿಂದ ತಮ್ಮ ಭೇಟಿಗೆ ಇನ್ನೊಬ್ಬ ಮಹನೀಯರು ಬಂದಿದ್ದಾರೆ, ಅವರನ್ನೂ ಕರೆದುಕೊಂಡು ಬರಬೇಕು. ನಿನ್ನ ಕಂಪನಿಯವರು ತಕರಾರು ಮಾಡುವುದಿಲ್ಲ ತಾನೇ ಎಂದು ಎರಡು ಸಲ ಕೇಳಿ ಖಾತ್ರಿ ಮಾಡಿಕೊಂಡು ತಯಾರಾದರು.

ಹೊಸತಾಗಿ ಆರಂಭವಾಗಿದ್ದ ಭರ್ಜರಿ ಹೋಟಲಿಗೆ ಸಾಯಂಕಾಲ ಆಟೋದಲ್ಲಿ ಹೊರಟೆವು. ದಾರಿಯುದ್ದಕ್ಕೂ ಅವರಿಬ್ಬರದೂ ಕುಮಾರವ್ಯಾಸ ರಾಘವಾಂಕ ಎಂದೇನೋ ಸಂಭಾಷಣೆ ನಡೆದೇ ಇತ್ತು. ಒಳಗೆ ಹೋಗುತ್ತಿದ್ದಂತೆ ಅಲ್ಲಿನ ಮ್ಯಾನೇಜರು ಸ್ವಲ್ಪ ಗಾಬರಿಯಿಂದಲೇ ಸ್ವಾಗತಿಸಿದ. ಖಾದಿ ಜುಬ್ಬಾ, ಪಾಯಿಜಾಮ ಧೋತಿ ಧರಿಸಿದ ಹಿರಿಯ ಯಜಮಾನರುಗಳು ಮೊದಲ ಬಾರಿಗೆ ಅವನ ಅಂಗಡಿಗೆ ಕಾಲಿಟ್ಟಿರಬೇಕೆಂದು ಕಾಣುತ್ತದೆ! ಸೋಫಾದಲ್ಲಿ ಕೂತು ಗೋಡೆಯ ಮೇಲೆ ಬೆಂಕಿ ಕಾರುತ್ತಿದ್ದ ಪೆಡಂಭೂತಗಳು, ಮಿಂಗ್, ಕ್ವಿಂಗ್ ಅರಸರ ಅರಮನೆಗಳು, ಇಲೆಕ್ಟ್ರಿಕ್ ದೀಪಗಳನ್ನು ಹೊತ್ತು ತೂಗುತ್ತಿದ್ದ ಕಂದೀಲುಗಳ ಸೊಗಡನ್ನು ಸವಿಯುತ್ತಿದ್ದಂತೆ ಮಾಣಿಯೊಬ್ಬ ಹಾಜರಾದ. ಕಡುಗೆಂಪಿನ ನಿಲುವಂಗಿ, ಬಂಗಾರದ ಗೊಂಡೆಗಳು, ದುಂಡನೆಯ ಜರದ ಟೊಪ್ಪಿಯ ಸಮವಸ್ತ್ರ. ಡಿಂಗ್ ಆಗಿ ಮಿಂಗ್ ಕಾಲದ ದಂಡನಾಯಕನಂತೆ ಕಾಣುತ್ತಿದ್ದ. ಮೂವರಿಗೂ ಒಂದೊಂದು ಬೈಂಡು ಹಾಕಿಸಿದ ಮೆನು ಗ್ರಂಥವನ್ನು ಒಪ್ಪಿಸಿ ಕೈ ಕಟ್ಟಿ ನಿಂತುಕೊಂಡ. ಒಂದೊಂದು ಐಟಮ್ಮಿನ ಹೆಸರು ನೋಡುತ್ತಿದ್ದಂತೆ ಇಬ್ಬರೂ ವಿದ್ವಾಂಸರಲ್ಲಿ ಅವುಗಳ ವ್ಯುತ್ಪತ್ತಿಯ ಜಿಜ್ಞಾಸೆ ಆರಂಭವಾಯಿತು. "ಇದು ಹಳಗನ್ನಡದ  ವನ್ನು ಹೋಲುತ್ತದಲ್ಲ. ಅದೂ ಒಂದು ಪಾಕದ ಹೆಸರೇ ಅಲ್ಲವೇ? ಅಥವಾ ಇನ್ನೊಂದು ಕಾವ್ಯದಲ್ಲಿ ಬರುತ್ತದಲ್ಲ  ಅದರ ಅಪಭ್ರಂಶವಾಗಿರಬಹುದೇ?" ಐದು ನಿಮಿಷವಾದರೂ ಇತ್ಯರ್ಥದ ಲಕ್ಷಣ ಕಾಣಲಿಲ್ಲ.

"ನೀವು ಮೊದಲು ಏನು ಬೇಕೋ ಆರ್ಡರು ಮಾಡಿ ಚರ್ಚೆ ಮುಂದುವರಿಸಬಹುದಲ್ಲ?" ಸಲಹೆ ಮಾಡಿದೆ.

"ಹಾಂ ಹಾಂ ಹೌದು. ಮರೆತೇ ಬಿಟ್ಟಿದ್ದೆನಲ್ಲ. ಆದರ ಇದರಾಗ ವೆಜಿಟೇರಿಯನ್ನು ಯಾವದು ಅಂತ ಹ್ಯಾಂಗ ಗೊತ್ತಾಗಬೇಕು"

"ನಿಮಗೆ ಬೇಕಾದ್ದು ಏಳನೆ ಪುಟದಲ್ಲಿ ಉಂಟು" ಹೇಳಿದವನು ನಾನಲ್ಲ. ಅಷ್ಟು ಹೊತ್ತು ತೆಪ್ಪಗೆ ನಿಂತಿದ್ದ ಮಾಂಧಾತ!

"ಅರೆ! ನೀನೂ ಕನ್ನಡದವನೆ?" ಬೆಂಗಳೂರು ಸೇರಿದಂತೆ ಯಾವ ಊರಿನಲ್ಲಿಯಾದರೂ ಕನ್ನಡ ಕೇಳಿದರೆ ಅಪ್ಪನಿಗೆ ಖುಷಿಯಾಗುತ್ತಿತ್ತು.

"ಒಬ್ಬನೇ ಅಲ್ಲ ಮಾರಾಯರೇ, ಇಲ್ಲಿ ಎಲ್ಲ ನಮ್ಮವರೇ. ಅಡುಗೆ ಮಾಡಲಿಕ್ಕೆ ನೇಪಾಳದಿಂದ ಬಂದಿಷ್ಟು ಜನ ಉಂಟು. ಮತ್ತೆಲ್ಲ ನಾವು ಊರ ಕಡೆಯವರು"

"ಎಲಾ ಇವನ, ನನಗ ಕಲ್ಪನಾನೇ ಬರಲಿಲ್ಲ. ಈ ಅಲಂಕಾರ, ನಿನ್ನ ವೇಷ ಅಂತೂ ಅಗದಿ"

"ಅವತಾರ, ಅಲಂಕಾರ ಎಲ್ಲ ಬಿಸಿನೆಸ್ಸಿಗೆ ಬೇಕಲ್ಲವೋ. ಅದು ಇಲ್ಲದೇ ಜನ ಬರುವುದು ಎಂತಕ್ಕೆ?"


"ತಮ್ಮಾ, ಒಂದು ಕೆಲಸಾ ಮಾಡು. ನಮಗಂತೂ ಏನೂ ಗೊತ್ತಿಲ್ಲ. ಛೊಲೋದು ಏನದ ಒಂದೆರಡು ಪದಾರ್ಥ ನೀನೇ ಆರಿಸಿ ತೊಗೊಂಡು ಬಾ" ಒತ್ತಾಯ ಮಾಡಿ

ಅಲ್ಲಿಯ ತನಕ ಕರೆದುಕೊಂಡು ಬಂದ ಮಗನ ಮಧ್ಯಸ್ತಿಕೆ ಇಲ್ಲದೇ ಹಿರಿಯರಿಬ್ಬರೂ ಪಟ್ಟಾಗಿ ತಮ್ಮ ಮೊದಲ ಚೀನೀ ಮೇಜವಾನಿಯನ್ನು ಮುಗಿಸಿಕೊಂಡರು.

ಶ್ರೀನಿವಾಸ ಹಾವನೂರರು ಜನ್ಮಜಾತ ಸಂಶೋಧಕರು. ವಿಷಯ ಎಷ್ಟೇ ಗೌಣವಾಗಿರಲಿ, ಅದರಲ್ಲಿ ಹೊಸತೇನಾದರೂ ತಿಳಿದಾಗ ಅವರಿಗೆ ಅದೇನೋ ಅಪರಿಮಿತ ಆನಂದ. ಅದನ್ನು ಎಲ್ಲರೊಡನೆ ಹಂಚಿಕೊಳ್ಳದ ಹೊರತು ಅವರಿಗೆ ಸಮಾಧಾನವಿರುತ್ತಿರಲಿಲ್ಲ. ಮುಂದಿನ ಹಲವು ತಿಂಗಳು ಬಂಧು ಮಿತ್ರರಿಗೆಲ್ಲ "ನಿಮಗೊಂದು ಮೋಜಿನ ವಿಷಯ ಹೇಳಬೇಕು. ಈ ಮುಂಬಯಿದಾಗಿನ ಚೈನೀಸು ಹೋಟೇಲು ನಡೆಸುವವರು ಹೊರಗಿನವರಲ್ಲ. ನಮ್ಮ ಉಡುಪಿ ಬ್ರಾಹ್ಮಣರು. ಬರೇ ಇಡ್ಲಿ ದೋಸೆ, ನಾರ್ತ್ ಇಂಡಿಯನ್ ತಂದೂರಿ ಮಾತ್ರ ಅಂತ ತಿಳೀಬ್ಯಾಡರಿ, ಎಲ್ಲಾ ಥರದ ಹೊಟೇಲುಗಳನ್ನೂ ನಮ್ಮ ಉಡುಪಿ ಮಂದಿ ನಡಸತಾರ ಅಂದರ ಆಶ್ಚರ್ಯ ಆಗಬೇಕು" ಎಂದು ಮತ್ತೆ ಮತ್ತೆ ಕಥೆ ಹೇಳಿ, ಯಾಕಯ್ಯ ಅವರನ್ನು ಆ ಚೈನೀಸು ಊಟಕ್ಕೆ ಕರೆದುಕೊಂಡು ಹೋಗಬೇಕಿತ್ತು ಎಂದು ನಾನು ಎಲ್ಲರಿಂದ ಬೈಸಿಕೊಳ್ಳುವಂತೆ ಮಾಡಿದರು. ■



ಪಾಪ ಬಡವ, ದಿನಾ ಮುಂಬೈಗೆ ಭಿಕ್ಷೆ ಬೇಡುಕ್ಕೆ ಹೋಗ್ತಾ ಇದ್ದ.
ಈ ಹಾಳು ಇಂಡಿಗೋದಿಂದ ಅದಕ್ಕೂ ಕಲ್ಲು ಬಿತ್ತು !!


ಐವತ್ತು ಪರ್ಸೆಂಟ್
ತೋಚಿದ್ದು - ಗೀಚಿದ್ದು :
ರಾಂಕಿ ಬೆಳ್ಳೂರು
ನ್ಯಾಷನಲ್ ಸ್ಕೂಲ್-ನ ಹತ್ತನೇ ತರಗತಿ ವಿದ್ಯಾರ್ಥಿಗಳು ದಿನದ ಕಡೆಯ ಪಿರಿಯಡ್ ಎಂದು ಆರಾಮವಾಗಿದ್ರು...
ಆಹ್ ! ಇವಾಗ ಕೆಮಿಸ್ಟ್ರಿ ಕ್ಲಾಸ್ !
ನೋಟ್ಸ್ ಬರೀಬೇಕು!
ಆದ್ರೆ ಕೆಮಿಸ್ಟ್ರಿ ಮೇಷ್ಟ್ರು ಕೊಟ್ಟರು ಒಂದು ಸಡನ್ ಶಾಕ್ !
ಆಗಿರೋ ಪಾಠದ ಕುರಿತು ಸರ್‌ಪ್ರೈಸ್ ಟೆಸ್ಟ್ ಇವಾಗ !
ಸರ್, ಪಾಠ ನೆನಪಿಲ್ಲ! ನಾವ್ ಓದಿಲ್ಲ! ಸರ್ !
ಆಯ್ಯೋ ಸರ್, ಓದಿಲ್ಲ!


ಮಾರನೇ ದಿವಸ...
ಏನು ಉತ್ತರಗಳು ಬರೆದಿದ್ದೀರೋ... ಈ ಕ್ಲಾಸಲ್ಲಿ ಐವತ್ತು ಪರ್ಸೆಂಟ್ ದಡ್ಡ ಶಿಖಾಮಣಿಗಳೇ !
ಸರ್, ಹಾಗನ್ನಬೇಡಿ! ಸಂಕಟ ಆಗತ್ತೆ !
ಹೋಗಲಿ, ಬೇಜಾರು ಮಾಡ್ಕೋಬೇಡಿ... ನಿಮ್ಮಲ್ಲಿ ಐವತ್ತು ಪರ್ಸೆಂಟ್ ಜಾಣರು ! ಸಮಾಧಾನನಾ ?!
ಯೇ ಯ್ !
ನೀತಿ :
ಸತ್ಯವನ್ನು ಮಾತನಾಡಿ.
ಪ್ರಿಯವಾದ ಮಾತುಗಳನ್ನು ಹೇಳಿ.
ಹಿತಕರವಲ್ಲದ ಸತ್ಯವನ್ನು ಹೇಳಬೇಡಿ.
ಪ್ರಿಯವಾದರೂ ಸುಳ್ಳನ್ನು ಹೇಳಬೇಡಿ.

**ದಂಡಿಗೆ**

- ✓ 2026 2025ಕ್ಕಿಂತ ಇನ್ನಷ್ಟು ಸಾಕಷ್ಟು ಚೆನ್ನಾಗಿರಲಿ.
- ✓ ನಾವು 'ಆಕ್ಷೀ' ಎಂದಾಗ 'ನಾರಾಯಣ ನಾರಾಯಣ' ಎನ್ನುತ್ತೇವೆ. ಆದರೆ ಆ ನಾರಾಯಣನೇ 'ಆಕ್ಷೀ' ಎಂದಾಗ..?
- ✓ ಮನೆಯಲ್ಲಿ ಎಲ್ಲ ದೇವರುಗಳ ಫೋಟೊ ಇಟ್ಟರೂ ಕೂಡ ಕೊನೆಗೆ ನಾವು ನಂಬುವುದು ನಮ್ಮ ಮನೆಯ ಬಾಗಿಲಿನ ಬೀಗ ಮಾತ್ರ.
- ✓ ದುಡ್ಡು ಜಾಸ್ತಿ ಇದ್ದಾಗ ಊಟ ಆದ ಮೇಲೆ 'ಎಷ್ಟು ಆಯ್ತು?' ಎಂದು ಕೇಳುತ್ತೇವೆ. ದುಡ್ಡು ಕಡಿಮೆ ಇದ್ದಾಗ 'ಒಂದು ಊಟಕ್ಕೆ ಎಷ್ಟು?' ಎಂದು ಮೊದಲು ಕೇಳುತ್ತೇವೆ.
- ✓ ವೆನ್ ಎವೆರ್ ಯು ಆರ್ ಹೆಲ್ತಿ ಯು ಡೋಂಟ್ ನೊ ಎನಿಥಿಂಗ್ ಅಬೌಟ್ ಯುವರ್ ಬಾಡಿ ದಿ ಬಾಡಿ ಈಸ್ ಫಾರ್‌ಗಾಟನ್. ವೆನ್ ದಿ ಶೂ ಫಿಟ್ಸ್ ದಿ ಫುಟ್ ಈಸ್ ಫಾರ್‌ಗಾಟನ್. ವೆನ್ ದಿ ಬೆಲ್ಟ್ ಫಿಟ್ಸ್ ದಿ ಬೆಲ್ಲಿ ಈಸ್ ಫಾರ್‌ಗಾಟನ್.
- ✓ ಸಂತೋಷಗಳಿಂದ ಬರುವ ಅನುಭವಕ್ಕಿಂತ ಕಷ್ಟಗಳಿಂದ ಬರುವ ಅನುಭವ ಹೆಚ್ಚು ಪರಿಪಕ್ವವಾಗಿರುತ್ತದೆ.
- ✓ ಪ್ರ: ಪ್ರಯಾಣದಲ್ಲಿ ಅತಿ ಭಾರವಾದ ಲಗೇಜ್?
  ಉತ್ತರ: ಖಾಲಿ ಪರ್ಸ್. ?
- ✓ ಲೈಫ್ ಈಸ್ ದಿ ಆರ್ಟ್ ಆಫ್ ಡ್ರಾಯಿಂಗ್ ವಿಥೌಟ್ ಅನ್ ಎರೇಸರ್.
- ✓ ಎಲ್ಲಿ ಬಯಕೆಗಳು ಮುಗಿಯುತ್ತವೊ ಅಲ್ಲಿಂದ ನೆಮ್ಮದಿ ಪ್ರಾರಂಭವಾಗುತ್ತದೆ.
- ✓ ರೈತ ಎಷ್ಟೊ ಬೆಳೆಗಳನ್ನು ಬೆಳೆಯುತ್ತಾನೆ. ಆದರೆ ಅವನು ಬೆಳೆಯುವುದೇ ಇಲ್ಲ.
- ✓ ದಿ ಡೈಸ್ ಆರ್ ಬ್ಲೈಂಡ್ ಬಟ್ ಒನ್ಸ್ ದಿ ಥ್ರೊ ಲ್ಯಾಂಡ್ಸ್ ವಿ ರೀಡ್ ಪರ್‌ಪಸ್ ಇನ್‌ಟು ಇಟ್.
- ✓ ನಾವು ಸತ್ಯವನ್ನು ಹೇಳಲು ಬಯಸುವ ಸುಳ್ಳೇ ಕತೆ ಕಾದಂಬರಿ.
- ✓ ಯಶಸ್ವಿ ರಾಜಕಾರಣಿ ಅಥವಾ ಪ್ರಧಾನಿ ಆಗುವದಕ್ಕಿಂತ ಒಳ್ಳೆಯ ಮನುಷ್ಯನಾಗುವುದು ಕಠಿಣ.
- ✓ ಮೂರ್ತಿ ಚಿಕ್ಕದಾದರೂ ಮ್ಯಾಟರ್ ದೊಡ್ಡದು.
- ✓ ಎ ಕ್ಯಾಟ್ ದಟ್ ಡ್ರೀಂಸ್ ಆಫ್ ಬಿಕಮಿಂಗ್ ಎ ಲಯನ್ ಮಸ್ಟ್ ಲೂಸ್ ಇಟ್ಸ್ ಅಪಟೈಟ್ ಫಾರ್ ರ್‍ಯಾಟ್ಸ್.
- ✓ ಛೇ! ನಾವು ಕಣ್ಣು ಮುಚ್ಚಿಕೊಳ್ಳುವಷ್ಟು ಸುಲಭವಾಗಿ ಕಿವಿ ಮುಚ್ಚಿಕೊಳ್ಳಲು ಆಗದು.
- ✓ ಸೋಲದೆ ಏನನ್ನೂ ಗಳಿಸಲು ಸಾಧ್ಯವಿಲ್ಲ. ಸ್ವರ್ಗ ಕೂಡ ಸಾವನ್ನು ಬೇಡುತ್ತದೆ.

■

# ಮೀಮ್ಸ್ ಮೀಮಾಂಸೆ

ಕವಿತಾ ಹೆಗಡೆ ಅಭಯಂ

ಎಲ್ಲ ಕಡೆ ಜೆನ್ ಝೀ ಕಿಡ್ಸ್ ಬಗ್ಗೆ ಅತಿ ಹೆಚ್ಚು ಚರ್ಚೆ ನಡೆಯುತ್ತಿರುವಾಗ ನನಗಂತೂ ಅವರ ಹಾಸ್ಯ ಪ್ರಜ್ಞೆಯನ್ನು ಮೆಚ್ಚಿಕೊಳ್ಳದೆ ಇರಲು ಸಾಧ್ಯವೇ ಇಲ್ಲ. ಹಳೆಯ ಕಾಲದ ಖ್ಯಾತ ವಿದೂಷಕರು, ಹಾಸ್ಯ ಲೇಖಕರು, ಕಾಮಿಡಿ ಆರ್ಟಿಸ್ಟ್ ಗಳು, ಕಾರ್ಟೂನಿಸ್ಟ್ ಗಳು ಎಲ್ಲರಿಗೂ ಸವಾಲು ಎಸೆಯುವ ಜೆನ್ ಝೀ ಕಿಡ್ಸ್ ಅಪ್ಲೋಡ್ ಮಾಡುವ ಮೀಮ್ಸ್, ರೀಲ್ಸ್, ಸ್ಟ್ಯಾಂಡಪ್ ಕಾಮಿಡಿ ಎಲ್ಲವೂ ನೆಕ್ಸ್ಟ್ ಲೆವೆಲ್ಲಿನವೇ.

ಡಿಜಿಟಲ್ ಜಗತ್ತಿನ ಈ ಸೂಪರ್ ಸ್ಟಾರ್ಗಳಿಗೆ "ತಂಗೀ, ನಿನ್ನ ತವರು ಯಾವುದೇ?" ಅಂತ ಕೇಳಿ. ಬಗ್ಗಿಸದ ತಲೆ ಎತ್ತದೆ "ಇಂಟರ್ನೆಟ್" ಅಂತಲೇ ಹೇಳುತ್ತಾರೆ. ತಾಯಿ ಇದ್ದ ಊರು ಹೇಗೆ ಹಳೆಯ ಕಾಲದವರಿಗೆ ಹೊಂಗೆ ಮರದ ನೆರಳ ಹಾಗೆ ತಂಪು ನೀಡುತ್ತಿತ್ತೋ ಹಾಗೆ ಇಂಟರ್ನೆಟ್ಟಿನ ಮಡಿಲಲ್ಲೇ ಹುಟ್ಟಿ ಬೆಳೆದ ಈ ಕೂಸುಗಳಿಗೆ ನೆಟ್ಟಮ್ಮನ ಹೊಟ್ಟೆಯಲ್ಲಿ ಹೊಕ್ಕಿಕೊಂಡಾಗಲೇ ಜೀವಂತವಾಗಿದ್ದೇವೆ ಅನಿಸೋದು.

"ನರಕ ಎಂದರೆ ಯಾವುದು?" ಅಂತ ಅವರನ್ನು ಕೇಳಿ ನೋಡಿ.

"ನೆಟ್ವರ್ಕ್ ಇಲ್ಲದ ಊರು" ಅಂತಲೇ ಅವರು ಹೇಳೋದು.

ನಿನ್ನೆ ಒಬ್ಬ ಹುಡುಗ ಫೋನಲ್ಲಿ ಹೇಳ್ತಾ ಇದ್ದ,

"ಬ್ರೋ... ಲಾಸ್ಟ್ ವೀಕ್ ಮಮ್ಮಿ ಫೋರ್ಸ್ ಮಾಡಿ ಊರಿಗೆ ಕರ್ಕೊಂಡು ಹೋಗಿದ್ರಲ್ಲ, ಆ ಊರಲ್ಲಿ ನೆಟ್ವರ್ಕ್ ಇರ್ಲೇ ಇಲ್ಲ ಗೊತ್ತಾ ಬ್ರೋ? ನಂಗೆ ಉಸಿರು ಕಟ್ಟಿದ ಹಾಗಾಗಿ ಅಯ್ಯೋ ಸತ್ತೋಗ್ತೀನಿ ಅಂತ ಅಂತ ಕೂಕ್ಕೊಂಡು ಓಡಿ ಬಂದ್ಬಿಟ್ಟೆ ಯು ನೋ!"

ಈ ಮಕ್ಕಳಂತೂ ಅಲ್ಟಿಮೇಟ್ ಮೀಮ್ ಕ್ರಿಯೇಟರ್ಸ್ ಅಂತಲೇ ಫೇಮಸ್ಸು. ಏನು ಕಂಡರೂ ಅದನ್ನು ಮೀಮ್ಸ್ ಆಗಿಸದೇ ಬಿಡೋರಲ್ಲ ಇವರು. ಬಾತು ಕೋಳಿಯನ್ನು ಅಮೇರಿಕದ ಪ್ರೆಸಿಡೆಂಟ್ ಆಗಿಸೋ ಇವರು ಯಾವುದೋ ಪ್ರಧಾನಿಗೆ ಎಲ್ಲಿಯದೋ ಹೆಣ್ಣು ಹುಡುಕಿ ಅವಳು ನಮ್ಮ ಸೊಸೆ ಎಂದು ವೈರಲ್ ಮಾಡುವವರು. ವರದಕ್ಷಿಣೆಗೆ ಇಡೀ ದೇಶ ಬರೆದು ಕೊಡ್ತಾಳೆ ಅಂತ ನಕ್ಕು ನಗಿಸುವವರು. ಒಂದಿಷ್ಟು ಜನರಂತೂ ಮೀಮ್ಸೋಲಜಿಯಲ್ಲಿ ಪಿಎಚ್ಡಿ ಮಾಡಿದ ಪ್ರಕಾಂಡ ಪಂಡಿತರೂ ದೊಡ್ಡ ಸೆಲೆಬ್ರಿಟಿಗಳೂ ಹೌದು. ಅವರ ಪ್ರತಿಯೊಂದು ಪೋಸ್ಟುಗಳನ್ನು ಅಚ್ಚುಕಟ್ಟಾಗಿ ಫಾಲೋ ಮಾಡುತ್ತ ಹಾಡಿ ಹೊಗಳುವ ಭಟರನ್ನೂ ಕೆಟ್ಟದಾಗಿ ಕಮೆಂಟು ಹಾಕಿ ತೆಗಳುವ ಭ್ರಷ್ಟರನ್ನೂ ಏಕಕಾಲಕ್ಕೆ ಪಡೆದ ಸು(ದುರ್)ದೈವಿಗಳು.

ಯಾವುದೇ ಝೆನ್ ಝೀ ಮಗುವನ್ನು ಹತ್ತು ಸಾರಿ ಕರೆದರೂ ಕಿವುಡರ ಹಾಗೂ ಮೂಕರ ಅಧಿಕೃತ ಪ್ರತಿನಿಧಿಗಳ ಹಾಗೆಯೇ ಗಪ್ ಕೂತಿರುತ್ತಾರೆ. ಅತ್ಯಂತ ವಿಧೇಯ ವಿದ್ಯಾರ್ಥಿಗಳ ಹಾಗೆ ತಲೆ ತಗ್ಗಿಸಿ ಕುಳಿತ ಈ ಕಂದಮ್ಮಗಳನ್ನು ನೋಡಿದರೆ, ಆ ಶೈಲಿ

"ಆಹಾ! ಎಂಥಾ ಸಂಸ್ಕಾರ" ಎಂದು ಮೆಚ್ಚುವಂತಹದು.

ಆದರೆ ಅವರಿಗೆ ನೀವು ಹೇಳಿದ ಒಂದಕ್ಷರವೂ ಕೇಳಿರೋದಿಲ್ಲ.

"ಮಗಾ, ಊಟಕ್ಕೆ ಬಾರೋ" ಎಂದು ಕೂಗಿ ಧ್ವನಿ ದಂಡ ಮಾಡುವ ಬದಲು

ಒಂದು ಮೆಸೇಜ್ ಮಾಡಿ ನೋಡಿ, ತಕ್ಷಣವೇ ರಿಪ್ಲೈ ಬರಲಿ ಬಿಡಲಿ ಬ್ಲೂ ಟಿಕ್ ಆದರೂ ಬಂದೀತು.

ಗುಂಪಿನಲ್ಲಿ ಗೋವಿಂದ ಅನ್ನುವ ಕಾಲ ಯಾವತ್ತೋ ಮುಗಿದು ಈಗ ಎಲ್ಲೆಲ್ಲೂ ಒಂಟಿ ಭೂತಗಳದೇ ಸಾಮ್ರಾಜ್ಯ. ಎಂಥಾ ಗುಂಪೇ ಇರಲಿ, ಜನ ಜಂಗುಳಿಯೇ ಇರಲಿ, ಈ ಅಕ್ಕ ಅಣ್ಣ ಒಂಟಿಯಾಗಿ ತಲೆ ತಗ್ಗಿಸಿ ಇನ್ಸ್ಟಾ, ಟಿಕ್ ಟಾಕ್, ಸ್ನ್ಯಾಪ್ ಚಾಟ್ ಅದು ಇದು ಅಂತ ಬೆರಳ ಬಲದ ಮೇಲೆ ಕುಳಿತರೆ ಭೀಕರ ಬಿರುಗಾಳಿ, ಸುನಾಮಿ, ಭೂಕಂಪ, ಜ್ವಾಲಾಮುಖಿ ಯಾವುದಕ್ಕೂ ಜಗ್ಗದ ಬೊಂಬೆಗಳಾಗಿ ಬಿಡುತ್ತಾರೆ. ಕೈಯಿಂದ ಮೊಬೈಲ್ ಮಾಯವಾದರೆ ಮಾತ್ರವೇ ಅವರಿಗೆ ಗಾಬರಿಯಾಗೋದು. ಎಷ್ಟು ಹೊತ್ತು ಬೇಕಾದರೂ ಒಂಟಿಯಾಗಿರೋದು, ಪಕ್ಕದಲ್ಲಿ ಕೂತವರ ಜೊತೆಗೂ ಡಿಜಿಟಲ್ ಕಮ್ಯುನಿಕೇಷನ್ ನಡೆಸೋದು ಇವರ ಎಕ್ಸ್ಟ್ರಾರ್ಡಿನರಿ ಸ್ಕಿಲ್.

ಇವರನ್ನು ದೂರೋದೇನೋ ತುಂಬಾ ಸುಲಭ. ಆದರೆ ಅತಿ ಹೆಚ್ಚು ಮಾನಸಿಕ ಸಮಸ್ಯೆಗಳನ್ನು ಎದುರಿಸೋರು, ಆತ್ಮಹತ್ಯೆಯಂಥ ಗಂಭೀರ ವಿಷಯಗಳನ್ನು ಅತ್ಯಂತ ಓಪನ್ ಆಗಿ ಮಾತನಾಡುವ ಜನಾಂಗ. ತಾನು ಡಿಪ್ರೆಷನ್ನಿಗೆ ಹೋಗಿದ್ದು, ಸುಧಾರಿಸಿಕೊಂಡಿದ್ದನ್ನು, ತಮ್ಮ ಹೊಸ ಹೊಸ ಕ್ರಶ್ಗಳನ್ನು, ಲವರ್ಗಳನ್ನು ಅಟ್ ಅ ಟೈಮ್ ನಿಭಾಯಿಸಿಕೊಂಡು ಹೋಗೋ ಬಗ್ಗೆ ಸುಲಭವಾಗಿ ಹೇಳುವದನ್ನು ಕೇಳಿ ಮಿಲೇನಿಯಲ್ಸ್ ಗಾಬರಿಯಿಂದ ಕಣ್ಣು ಪಿಳುಕಿಸದೆ ನೋಡುವುದು ಇನ್ನೂ ಚೆಂದ.

ಏನೇ ಹೇಳಿ, ಭವಿಷ್ಯತ್ಕಾಲ ಎಂದರೆ ಅದು ಈ ಮೀಮ್ಸ್ ಮಕ್ಕಳದೇ. ತಮ್ಮ ಆತಂಕ, ದುಗುಡ, ನೋವು ಎಲ್ಲವನ್ನೂ ಒಡಲೊಳಗೆ ಬಚ್ಚಿಟ್ಟುಕೊಂಡು ಅವನ್ನೇ ಹಗುರವಾದ ಮೀಮ್ಸ್, ರೀಲ್ಸ್, ಶಾರ್ಟ್ಸ್ ಆಗಿ ತೇಲಿಬಿಟ್ಟು ನೋಡಿದವರ ಮೊಗದಲ್ಲಿ ನಗು ಚಿಮ್ಮಿಸುವ ಹಮ್ಮೀರರಾಗಿದ್ದಾರೆ.

ಶುರುವಿನಲ್ಲಿ ಫಾಲ್ತೂ ಅನ್ನಿಸುವ ಮೀಮ್ಸ್ ಮಾಡುವವವರೂ ಒಂದು ಗ್ರಿಪ್ ಸಿಕ್ಕಿದಾಕ್ಷಣ ಎಕ್ಸ್ಪರ್ಟ್ ಆಗಿಬಿಡೋದು, ಸೀನಿಯರ್ ಲುಕ್ ಕೊಡೋದು ಮಜಾ ಅನಿಸುತ್ತೆ. ತಮ್ಮ ಅಸಾಧಾರಣ ಕ್ರಿಯೇಟಿವ್ ಥಿಂಕಿಂಗ್ ಕೆಪ್ಯಾಸಿಟಿ ಬಳಸಿ ಮೀಮ್ಸ್ ಮೀಮಾಂಸೆಯಲ್ಲಿ ತೊಡಗುವ ಜೆನ್ ಝೀಗಳ ಪ್ರತಿಭೆಗೆ ನಮೋನಮಃ.

■

**ಬೆಳದಿಂಗಳು**

ಹಿಂದೆ ಮಗುವಿಗೆ ಊಟ ಮಾಡಿಸಲು
ತಾಯಿ ತೋರಿಸುತ್ತಿದಳು ಚಂದ್ರನ ಬೆಳದಿಂಗಳು.
ಈಗ ಮಗುವಿಗೆ ಬೇಕು ಮೊಬೈಲು.
ಇಲ್ಲದಿದ್ದರೆ ರಚ್ಚೆ ಹಿಡಿಯುವುದು ಬಡಿಯುತ್ತ ನೆಲಕ್ಕೆ ಕೈ ಕಾಲು.

–ದಿವಾಕವಿ

# ಕೆಲಸದವರ ಕರಾಮತ್ತು

ಧಾರಿಣಿ ಮಾಯಾ

ಅವಳು: ಅಕ್ಕಾ, 'ಕಾಂತಾರ ಪಿಕ್ಚರ್' ಚೆನ್ನಾಗಿದ್ಯಾ?

ನಾನು: ಹ್ಞೂ, ಆದ್ರೂ ಮೊದಲನೇದೇ ನನಗಿಷ್ಟವಾಗಿದ್ದು. 'ಮೇಕಿಂಗ್' ಚೆನ್ನಾಗಿದೆ ಅಂದ್ರೆ ಅವಳಿಗೆ ಗೊತ್ತಾಗಲ್ಲ ಅನ್ಕೊಂಡು, 'ಇದ್ರಲ್ಲಿ ಅವ್ರು ತೆಗೆದಿರೋ ರೀತಿ ಚೆನ್ನಾಗಿದೆ' ಎಂದೆ.

ಅವಳು: ಅದೇ 'ಮೇಕಿಂಗು,' ಅಂದ್ಬು.

****

ಅವಳು: ಅಕ್ಕಾ, ಭಾಗ್ಯದ ಲಕ್ಷ್ಮೀ ಬಾರಮ್ಮಾ ಸೀರಿಯಲ್‌ನಲ್ಲಿ ಕಥೆ ಏನಾಯ್ತು?

ನಾನು: ಗೊತ್ತಿಲ್ಲ ಕಣೇ, ನಾನು ಆ ಸೀರಿಯಲ್ ನೋಡಲ್ಲ.

ಅವಳು: ಅದೇ ಅವಳು, ಮನೆ ಬಿಟ್ಟು ಹೊಂಟೋಯ್ತಳಲ್ವಾ..?

ನಾನು: ಅದೇನೋ ಗೊತ್ತಿಲ್ಲ ಬಿಡು. ನಿನ್ಗೇ ಗೊತ್ತಲ್ಲಾ, ಮತ್ತೆ ನನ್ನನ್ನೇ ಯಾಕೆ ಕೇಳ್ತಿದ್ದೀಯ..?

ಅವಳು: ಅದೇ ಅಕ್ಕಾ, ಇನ್ಸಾಗ್ರಾಮ್ನನಲ್ಲಿ promo ಬತ್ತದಲ್ಲಾ..!!

*****

ಬಹಳ ಹಿಂದೆ ನಮ್ಮ ಮನೇಲಿ ಕೆಲ್ಸ ಮಾಡುತ್ತಿದ್ದ ಮಂಜುಳ ದಾರಿಯಲ್ಲಿ ಸಿಕ್ಕಿ–

ಅವಳು– ಏನ್ ಅಕ್ಕಾ, ಚಂದಾಗಿದ್ದೀರಾ?

ನಾನು: ಹ್ಞೂ ಕಣೇ, ನೀನು ಹೇಗಿದ್ದೀಯಾ. ಸುದ್ದೀನೇ ಇಲ್ಲಾ

ಅವಳು: ನಾನ್ ಮಾತ್ರ, ನಿಮ್ಮುನ್ನ ಆಗಾಗ ನೋಡ್ತಾನೇ ಇರ್ತೀನಿ.

ನಾನು: ಅರೇ ಎಲ್ಲಿ..?

ಅವಳು: ಅದೇ ಅಕ್ಕಾ, ಪೇಸ್‌ಬುಕ್ಕಲ್ಲಿ..

****

ಕೆಲಸದ ರತ್ನಳ ಜೊತೆ ಹೀಗೇ ಮಾತಾಡುತ್ತಾ––

ನಾನು: ಏನೇ ನಿನ್ನ ಮಗಳನ್ನ ಓದಿಸದೆ ಯಾಕೆ ಕೆಲಸಕ್ಕೆ ಹಾಕ್ದೆ

ಅವಳು: ಹ್ಞೂ ಕಣಕ್ಕಾ ಆಗ ಗೊತ್ತಾಗಿಲ್ಲ. ಅದಕ್ಕೆ ಈಗ ನನ್ ಸೊಸೇನೂ ಹಾಗಾಗ್ ಬಾರ್ದು ಅಂತ, ಕಾಲೇಜಿಗೆ ಕಳಿಸ್ತಿದ್ದೀನಿ.

ನಾನು: ಪರ್ವಾಗಿಲ್ಲ ಕಣೇ. ಒಳ್ಳೇದೇ ಮಾಡ್ತಿದ್ದೀಯ

ಅವಳು: ಕಸಮುಸುರೆ ಎಲ್ಲಾ ನನ್ ಕಾಲಕ್ಕೇ ಆಗೋಗ್ಲಿ. ಅವ್ಳಾದ್ರೂ ಓದಿ, ಸರ್ಕಾರಿ ನೌಕರಿ ಮಾಡ್ಲಿ.

––ಇಂದಿನ ಕೆಲಸದವರ ಕರಾಮತ್ತಿಗೆ ನಾ ಮಾತ್ರ ಬೇಸ್ತು.

■

# ಪರಿಪಕ್ವ ಜೀವನಕ್ಕೆ ಪಂಚ ತತ್ವಗಳು

**ಕಾರಕೂನ**

ಅಪರಂಜಿಯ ನವೆಂಬರ್ ಸಂಚಿಕೆಯಲ್ಲಿ ಶ್ರೀಯುತ ರಘುನಂದನ್ ಅವರು ಮರ್ಫಿಯ ನಿಯಮದ ಬಗ್ಗೆ ಬರೆದದ್ದನ್ನು ನೀವು ಗಮನಿಸಿರಬಹುದು. ಈಗ ಅದೇ ಜಾತಿಯ ಇನ್ನೂ ಐದು ನಿಯಮಗಳ ಬಗ್ಗೆ ಹೇಳಹೊರಟಿರುವೆ.

ಚಿಕ್ಕಂದಿನಿಂದ ನಾವು ಕಲಿತ ನೀತಿ ಪಾಠಗಳ ಪ್ರಕಾರ ಬಾಳು ತರ್ಕಬದ್ಧವಾಗಿ ನಡೆದು ಹೋಗಬೇಕು. ಕೈ ಕೆಸರಾದರೆ ಬಾಯಿ ಮೊಸರು, ಹಾಸಿಗೆ ಇದ್ದಷ್ಟು ಕಾಲು ಚಾಚು, ಇತ್ಯಾದಿ ಗಾದೆಗಳು ನಿಜ ಎಂದು ನಂಬಿ ನಾವು ಮುಂದುವರಿಯುತ್ತಿದ್ದವು. ಇವೆಲ್ಲಾ ಆಗಿನ ಕಾಲಕ್ಕೆ ಸರಿಯಾಗಿದ್ದಿರಬಹುದು. ಈಗಿನ ಆಧುನಿಕ ಸಮಾಜ ಬಹುವಾಗಿ ಬದಲಾಗಿ ಹೋಗಿದೆ. ನಮ್ಮ ದೈನಂದಿನ ವ್ಯವಹಾರಗಳು ಸಂಕೀರ್ಣತೆಯಿಂದ ಕೂಡಿರುತ್ತವೆ. ಈ ಬದಲಾದ ಸಮಾಜದಲ್ಲಿ "ಈಸಿ ಜೈಸಬೇಕಾದರೆ" ಅದರದ್ದೇ ಆದ ಹಲವು ಆಧುನಿಕ ತತ್ವಗಳನ್ನು ನಾವು ಮೈಗೂಡಿಸಿಕೊಂಡು ಮುಂದುವರಿಯುವುದು ಅಗತ್ಯ. ಈ ವಿಷಯವನ್ನು ಆಳವಾಗಿ ಅಭ್ಯಸಿಸಿ ಹಲವು ಪರಿಣಿತರು ಐದು ತತ್ವಗಳನ್ನ ಕಂಡು ಹಿಡಿದಿದ್ದಾರೆ. ಜೀವನದ ಸಮರ್ಥ ನಿರ್ವಹಣೆಗೆ ಈ ಪಂಚ ತತ್ವಗಳು ಬಹು ಸಹಾಯಕ. ಈ ನಿಯಮಗಳನ್ನು ನಿಮಗೆ ಪರಿಚಯಿಸುವ ಉದ್ದೇಶದಿಂದ ಈ ಲೇಖನ.

### 1. ಡನ್ನಿಂಗ್ ಕ್ರೂಗರ್ ಎಫೆಕ್ಟ್


ಡೇವಿಡ್ ಡನ್ನಿಂಗ್ ಮತ್ತು ಜಸ್ಟಿನ್ ಕ್ರೂಗರ್ ಎಂಬ ಮನಶ್ಶಾಸ್ತ್ರಜ್ಞರು ಈ ನಿಯಮವನ್ನು 1999ರಲ್ಲಿ ಪ್ರತಿಪಾದಿಸಿದರು. ಈ ತತ್ವದ ಪ್ರಕಾರ ನಿಮಗೆ ತಿಳಿವು ಹೆಚ್ಚಾದಷ್ಟೂ ನಮ್ರತೆ ಹೆಚ್ಚುತ್ತದೆ. ಅಂತೆಯೇ ಅಜ್ಞಾನ ಹೆಚ್ಚಿದಷ್ಟೂ ನೀವು ಹೇಳಿದ್ದೇ ಸರಿ ಎಂಬ ದೃಢನಂಬಿಕೆ ಏರುತ್ತಾ ಹೋಗುತ್ತದೆ. ಖ್ಯಾತ ವಿಜ್ಞಾನಿ ಐಸಾಕ್ ನ್ಯೂಟನ್‌ನ ನ, "ಜಗತ್ತಿನ ಜ್ಞಾನ ಭಂಡಾರ ಒಂದು ಸಾಗರದಷ್ಟು ವಿಶಾಲ. ನಾನು ಗಳಿಸಿರುವ ಜ್ಞಾನ ಆ ಸಾಗರದ ತೀರದಲ್ಲಿನ ಒಂದು ಹಿಡಿ ಮರಳಿಗೆ ಸಮಾನ" ಎಂಬ ಹೇಳಿಕೆಯನ್ನು ಇತ್ತೀಚೆಗೆ ಟ್ರಂಪ್ "ಗ್ಲೋಬಲ್ ವಾರ್ಮಿಂಗ್ ಎಲ್ಲಾ ಶುದ್ಧ ಬೊಗಳೆ. ಇನ್ನೂ ಹೆಚ್ಚು ಕಲ್ಲಿದ್ದಲನ್ನು ಅಗೆದು ತೆಗೆದು ಸುಖ ಸಮೃದ್ಧಿಯಿಂದ ಜೀವಿಸೋಣ". ಎಂಬ ಕೂಗಾಟದೊಂದಿಗೆ ಹೋಲಿಸಿನೋಡಿ.

### 2. ಪಾರ್ಕಿನ್‌ಸನ್ ಲಾ

ನಾರ್ತ್ಕೋಟ್ ಪಾರ್ಕಿನ್‌ಸನ್ ಎಂಬ ಪಂಡಿತನೊಬ್ಬ 1955ರಲ್ಲಿ ಈ ನಿಯಮವನ್ನು ಮೊದಲ ಬಾರಿಗೆ ಸೃಷ್ಟಿಸಿದ. ಇದರ ಪ್ರಕಾರ ಯಾವುದೇ ಕೆಲಸವನ್ನು ಮಾಡಿ ಮುಗಿಸಲು ಬೇಕಾದ ಸಮಯ, ಲಭ್ಯವಿರುವ ಎಲ್ಲ ಕಾಲಾವಕಾಶವನ್ನು ಸಂಪೂರ್ಣವಾಗಿ ಬಳಸುತ್ತದೆ. ಇದಕ್ಕೊಂದು ದೃಷ್ಟಾಂತ. ನಮ್ಮ ಚಿಕ್ಕಂದಿನಲ್ಲಿ ನಮ್ಮಮ್ಮ ನನ್ನನ್ನು ಮತ್ತು ನನ್ನ ತಮ್ಮನನ್ನು ಕರೆದು "ಆಚೆ ಬೀದಿಯಲ್ಲಿರೋ ದರ್ಜಿ ಹತ್ತಿರ ಈ ಬಟ್ಟೆ ಪ್ಯಾಕೆಟ್ ಕೊಟ್ಟು, ನಿಮ್ಮಿಬ್ಬರಿಗೂ ಒಂದೊಂದು ಪೈಜಾಮ ಹೊಲಿಯಲು ಹೇಳಿ ಬನ್ನಿ" ಅಂತ ಹೇಳಿ ಕಳಿಸಿದರು. ನಾವು ಮೂಳೆ ಅಂಗಡಿಗೆ ಹೋಗಿ (ಆ ದರ್ಜಿಯ ಹೆಸರು ಮೂಳೆ!) ಬಟ್ಟೆ ಕೊಟ್ಟು ಬಂದೆವು. "ಮುಂದಿನ ಶುಕ್ರವಾರ ಬನ್ನಿ" ಅಂತ ಮೂಳೆ ನಮಗೆ ಹೇಳಿದ್ದ. ಮುಂದಿನ ಶುಕ್ರವಾರ ನಾವಿಬ್ಬರೂ ಹೊಸ ಪೈಜಾಮದ ಕನಸು ಕಾಣುತ್ತಾ ಅವನ ಅಂಗಡಿಗೆ ಹೋದೆವು. ನಮ್ಮನ್ನು ನೋಡಿದ ಕೂಡಲೇ ಆತ ಮೇಲಿನ ಬಡುವಿನ ಮೇಲೆ ಕೈ ಹಾಕಿ ಒಂದು

ಪ್ಯಾಕೆಟ್ ತೆಗೆದ. ನಾವು ಕೊಟ್ಟ ಪ್ಯಾಕೆಟ್ಟೇ ಅದಾಗಿತ್ತು. ಪ್ಯಾಕೆಟ್ಟನ್ನು ಬಿಚ್ಚಿಯೂ ಸಹ ಇರಲಿಲ್ಲ ಆ ಮಹರಾಯ. ಆಮೇಲೆ ಒಂದು ದಿನದಲ್ಲಿ ನಮ್ಮ ಪೈಜಾಮಾಗಳು ರೆಡಿಯಾದವು. ಅಂದು ನಮಗೆ ಪಾರ್ಕಿನ್‌ಸನ್ ಲಾದ ಮೊದಲ ಪರಿಚಯವಾಯಿತು.

### 3. ದ ಪೀಟರ್ ಪ್ರಿನ್ಸಿಪಲ್




ಡಾ. ಲಾರೆನ್ಸ್ ಜೆ ಪೀಟರ್ ಮತ್ತು ರೇಮಂಡ್ ಹಾಲ್ ಜೊತೆಗೂಡಿ 1969ರಲ್ಲಿ ಕಂಡುಹಿಡಿದ ನಿಯಮವಿದು. ಕೆಲಸಮಾಡುತ್ತಿರುವ ಉದ್ಯೋಗಿಗಳೆಲ್ಲರೂ ತಮ್ಮ ನಿಷ್ಪ್ರಯೋಜಕ (ಇನ್‌ಕಾಂಪಿಟೆನ್ಸ್) ಮಟ್ಟಕ್ಕೆ ಏರಿ ಅಲ್ಲಿ ನೆಲಸುತ್ತಾರೆ ಎಂಬುದೇ ಈ ನಿಯಮದ ತಿರುಳು. ಯಾವುದೇ ಸಂಸ್ಥೆ ಅಥವಾ ಕಾರ್ಯಾಗಾರವನ್ನೇ ತೆಗೆದುಕೊಳ್ಳಿ. ದಕ್ಷ ಕೆಲಸಗಾರರೆಲ್ಲಾ ಬೇಗ ಬೇಗ ಬಡ್ತಿ ಪಡೆದು ಮುಂದಿನ ಹುದ್ದೆಯನ್ನು ಅಲಂಕರಿಸುವುದು ಸ್ವಾಭಾವಿಕ. ಹಾಗಾಗಿ ಯಾವನಾದರೊಬ್ಬ ಇದ್ದ ಹುದ್ದೆಯಲ್ಲೇ ಇದ್ದರೆ ಆತ ತರ್ಕಬದ್ಧವಾಗಿ ನಿಷ್ಪ್ರಯೋಜಕನೇ ಆಗಿರಬೇಕು. ಹುದ್ದೆಯ ಏಣಿಯಲ್ಲಿನ ಎಲ್ಲ ಹಂತಗಳಿಗೂ ಈ ಮಾತು ಅನ್ವಯಿಸುವುದರಿಂದ ಎಲ್ಲ ಹುದ್ದೆಗಳೂ ಬಹುಮಟ್ಟಿಗೆ ನಿಷ್ಪ್ರಯೋಜಕರಿಂದಲೇ ತುಂಬಿರುವುದು ಸಹಜ.ಇದೇ ಈ ನಿಯಮದ ತಿರುಳು.

ನಾನು ನನ್ನ ಪೂರ್ವಾಶ್ರಮದಲ್ಲಿ ಒಂದು ಪಬ್ಲಿಕ್ ಸೆಕ್ಟರ್ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದೆ. ಅಲ್ಲಿನ ಹೀಟ್ ಟ್ರೀಟ್ಮೆಂಟ್ ವಿಭಾಗವನ್ನು ಮುಸುರೇಕರ್ ಎಂಬ ಸಜ್ಜನರು ನಿರ್ವಹಿಸುತ್ತಿದ್ದರು. ನಾನು ನನ್ನ ಸಹೋದ್ಯೋಗಿ ಶ್ರೀನಿಯೊಡನೆ ಒಂದು ಸಂಜೆ ಕಾಲೋನಿಯಲ್ಲಿ ನಡೆದಾಡುತ್ತಿದ್ದಾಗ ಮುಸುರೇಕರ್ ಇದಿರಾದರು. ಕುಶಲ ಪ್ರಶ್ನೆಗಳ ನಂತರ ಅವರು ಮುಂದೆ ಸಾಗಿದರು. ಶ್ರೀನಿ ನನ್ನನ್ನು ಕುರಿತು, "ಆತ ಕೆಲಸಮಾಡುವುದನ್ನು ನಿಲ್ಲಿಸಿ ಐದು ವರ್ಷವಾಯಿತು" ಅಂದ. ನನಗೋ ಆಶ್ಚರ್ಯ "ಹಾಗೆಂದರೇನು ಶ್ರೀನಿ, ನಿನ್ನ ತಾನೆ ಅವರನ್ನು ಅವರ ಡಿಪಾರ್ಟ್‌ಮೆಂಟಿನಲ್ಲೇ ಭೇಟಿ ಮಾಡಿದ್ದೆ. ಅವರೇನು ನಿವೃತ್ತಿಯಾಗಿಲ್ಲವಲ್ಲಾ ?" ಅಂತ ಹುಬ್ಬೇರಿಸಿ ಕೇಳಿದೆ. "ಅವರು ನಿವೃತ್ತಿಯಾಗಿದ್ದಾರೆ ಅಂತ ಹೇಳಲಿಲ್ಲ. ಕೆಲಸ ನಿಲ್ಲಿಸಿದ್ದಾರೆ ಅಂದೆ. ವಿವರಿಸಿ ಹೇಳ್ತೇನೆ ಕೇಳು. ಐದು ವರ್ಷದ ಹಿಂದೆ ಅವರು ಚೆನ್ನಾಗಿಯೇ ಕೆಲಸ ಮಾಡುತ್ತಿದ್ದರು. ಅದಕ್ಕೇ ಅವರಿಗೆ ಅಸಿಸ್ಟೆಂಟ್ ಮ್ಯಾನೇಜರಿಂದ ಮ್ಯಾನೇಜರ್ ಪದವಿಗೆ ಬಡ್ತಿಯೂ ಸಿಕ್ಕಿತು. ಈಗ ಅವರಿಗೊಬ್ಬ ಸರ್ದಾರ್ಜಿ ಅಸಿಸ್ಟೆಂಟ್ ಇದ್ದಾನೆ . ಬಹು ದಕ್ಷ . ಇವರ ಎಲ್ಲ ಕೆಲಸಗಳನ್ನೂ ಅವನೇ ನಿಭಾಯಿಸ್ತಾನೆ. ಇವರು ಕೇವಲ ಸಹಿ ಹಾಕೋದು ಅಷ್ಟೆ. ಇವರಿಗೆ ಇನ್ನು ಮುಂದೆ ಬಡ್ತಿಗೆ ಯಾವ ಹುದ್ದೆಯೂ ಇಲ್ಲ. ನಿವೃತ್ತಿಗೆ ಕ್ಷಣಗಣನೆ ನಡೆಸ್ತಾ ಇದ್ದಾರೆ. ಕೆಲಸ ಯಾಕೆ ಬೇಕು ಅವರಿಗೆ.

ಯಾವುದೇ ಕಾರ್ಖಾನೆಯಲ್ಲಿ ಬಡ್ತಿ, ಪ್ರಮೋಷನ್ ಅವಕಾಶಗಳು ಇರುವುದು ಇಪ್ಪತ್ತು ಪರ್ಸೆಂಟ್ ಮಾತ್ರ. ಅಷ್ಟು ಜನ ಬಡ್ತಿ ಪಡ್ಕೊಂಡು ಮುಂದೆ ಮುಂದೆ

ಸಾಗ್ತಿರ್ತಾರೆ. ಎಂಭತ್ತು ಪರ್ಸೆಂಟ್ ಉದ್ಯೋಗಿಗಳು ನಿಷ್ಪ್ರಯೋಜಕರಾಗಿರ್ತಾರೆ ಎಂದು ಶ್ರೀನಿ ನಗುತ್ತಾ ಹೇಳಿದ. ಇದೇ ಪೀಟರ್ ಪ್ರಿನ್ಸಿಪಲ್.

**4. ದ ಪರೇಟೊ ಪ್ರಿನ್‌ಸಿಪಲ್**

ಇದು ಮೇಲಿನ ಪೀಟರ್ ಪ್ರಿನ್‌ಸಿಪಲ್‌ನ ಕರಾಲರಿ. 1941 ರಲ್ಲಿ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆಂಟ್ ಆಗಿದ್ದ ಜೋಸೆಫ್ ಎಮ್ ಜುಆನ್ ಎಂಬಾತ ಅರ್ಥ ಶಾಸ್ತ್ರಜ್ಞರಾಗಿದ್ದ ವಿಲ್‌ಫ್ರೆಡೋ ಪರೇಟೋ ರೊಂದಿಗೆ ಸಹಕರಿಸಿ ಪ್ರತಿಪಾದಿಸಿದ ತತ್ವವಿದು. ಯಾವುದೇ ಸಂಸ್ಥೆಯಲ್ಲಿ ಶೇಕಡ ಎಂಭತ್ತರಷ್ಟು ಕೆಲಸ ಶೇಕಡ ಇಪ್ಪತ್ತರಷ್ಟು ಜನಗಳಿಂದ ನಡೆಯುತ್ತದೆ. ಎಂದು ಹೇಳುತ್ತದೆ ಈ ನಿಯಮ. ಇದನ್ನು 80/20ರೂಲ್ ಅಂತಲೂ ಕರೆಯುತ್ತಾರೆ. ಇದನ್ನ ಉದಹರಿಸೋಕ್ಕೆ ಹೊಸ ದೃಷ್ಟಾಂತವೇನೂ ಅಗತ್ಯವಿಲ್ಲ. ಹಿಂದಿನ ನಿಯಮದಲ್ಲಿ ಉದಹರಿಸಿದ ಕಾರ್ಖಾನೆಯಲ್ಲಿ ಶೇಕಡ ಇಪ್ಪತ್ತರಷ್ಟು "ಪ್ರಮೋಷನ್ ಹಂಗ್ರಿ" ದಕ್ಷ ಉದ್ಯೋಗಿಗಳು ಭಡ್ತಿಯ ಸಲುವಾಗಿ ಕಾರ್ಖಾನೆಯ ಎಂಭತ್ತು ಪರ್ಸೆಂಟ್ ಕೆಲಸಗಳನ್ನು ಮಾಡಿ ಮುಗಿಸಿಬಿಡುತ್ತಿದ್ದರು. ಈ ನಿಯಮ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ. ಇಂಗ್ಲೆಂಡಿನಲ್ಲಿ ಇಪ್ಪತ್ತು ಪರ್ಸೆಂಟ್ ಜನ ಎಂಭತ್ತು ಪರ್ಸೆಂಟ್ ಭೂಮಿಯ ಒಡೆಯರಾಗಿದ್ದಾರೆಂತೆ. ಅನೇಕ ದೇಶಗಳಲ್ಲಿ ಟಾಪ್ ಇಪ್ಪತ್ತು ಪರ್ಸೆಂಟ್ ಜನ ದೇಶದ ಎಂಭತ್ತು ಪರ್ಸೆಂಟ್ ಸ್ವತ್ತಿನ ಒಡೆಯರಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ...

**5. ಹಾನ್‌ಲಾನ್ಸ್ ರೇಜರ್**

ಯಾರಾದರೂ ಮಾಡಿದ ಕೆಲಸ ನಿಮಗೆ ಬೇಜಾರು ತರಿಸಿದ್ದರೆ, ಅವರು ನಿಮ್ಮ ಮೇಲಿನ ದ್ವೇಷದಿಂದಲೇ ಹಾಗೆ ಮಾಡಿದ್ದು ಎಂಬ ನಿರ್ಣಯಕ್ಕೆ ಹಾರಿಬಿಡಬೇಡಿ. ಸಣ್ಣಪುಟ್ಟ ವಿಷಯಗಳಿಗೆಲ್ಲಾ ಜನ ನಿಮ್ಮ ಮೇಲಿನ ಮತ್ಸರದಿಂದಲೇ ನಡೆದುಕೊಳ್ಳುತ್ತಾರೆ ಎಂಬ ಭಾವನೆ ತಪ್ಪು ಎಂದು ಈ ನಿಯಮ ಹೇಳುತ್ತದೆ. ಇದಕ್ಕೆ ಅನೇಕ ಉದಾಹರಣೆಗಳುಂಟು

ನೀವು ಯಾವುದೋ ಒಂದು ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಹೋಗಿರುತ್ತೀರ. ಸಮಾರಂಭದ ಕೊನೆಯಲ್ಲಿ ವಂದನಾರ್ಪಣೆ ಮಾಡುವಾತ ಎಲ್ಲರನ್ನೂ ನೆನಪಿಕೊಂಡು ನಿಮ್ಮ ಹೆಸರನ್ನೇ ಮರೆತುಬಿಡುತ್ತಾನೆ ಎಂದುಕೊಳ್ಳಿ. "ನನ್ನ ಕಂಡರೆ ಅವನಿಗೆ ಆಗದು. ಅದಕ್ಕೇ ಹಾಗೆ ನನಗೆ ಅವಮಾನ ಮಾಡಿದ್ದು" ಅಂದುಕೊಳ್ಳುವುದರ ಬದಲಿಗೆ "ಪಾಪ ಅವನಿಗೂ ಮರೆವು. ವಯಸ್ಸಾಗಿದೆಯಲ್ಲಾ" ಎಂದುಕೊಂಡು ಅವನನ್ನು ಕ್ಷಮಿಸಿಬಿಡುವುದು ಸರಿಯಾದ ಪ್ರತಿಕ್ರಿಯೆ.

ಮದುವೆ ಮನೆಯಲ್ಲಿ ಊಟಕ್ಕೆ ಕುಳಿತಿರುತ್ತೀರ. ಲಕ್ಷಣವಾಗಿ ಬಾಳೇ ಎಲೆ ಊಟ. ಭಕ್ಷ್ಯ ಬಡಿಸುವಾಗ ಚಿರೋಟಿ ನಿಮ್ಮ ಪಕ್ಕದವನ ಬಳಿ ಬರುವ ಹೊತ್ತಿಗೆ ಖಾಲಿಯಾಗಿರುತ್ತದೆ. ಬಡಿಸಲು ಖಾಲಿ ಬುಟ್ಟಿ ಹಿಡಿದುಕೊಂಡು ಇನ್ನೊಂದು ಒಬ್ಬೆ ಚಿರೋಟಿ ತರಲು ಹೋಗುತ್ತಾನೆ. ಮತ್ತೆ ಬಡಿಸಲು ಬಂದಾಗ ನಿಮ್ಮನ್ನು ಮರೆತು ನಿಮ್ಮ ಪಕ್ಕದವರಿಂದ ಬಡಿಸಲು ಪ್ರಾರಂಭಿಸಿದಾಗ ನಿಮಗೆ ಸಹಜವಾಗಿ ಕೋಪ ಬಂದರೂ, ಅವನ ನಡವಳಿಕೆಗೆ ಅವನ ಮರೆವಿನ ಕಾರಣವನ್ನು ಕೊಡಬೇಕೆ ವಿನಃ ಅವನಿಗೆ ನಿಮ್ಮ ಮೇಲೆ ವೈಷಮ್ಯವಿದೆಯೆಂದು ಭಾವಿಸಬಾರದು.

ಒಟ್ಟಿನಲ್ಲಿ ಈ ಐದು ತತ್ವಗಳು ಜೀವನದ ಏರುಪೇರುಗಳನ್ನು ನಗುಮುಖದಿಂದ ಇದಿರಿಸುವ ಬಗೆಯನ್ನು ಸೂಚಿಸುವುದಂತೂ ಖಂಡಿತ. ■

# ಗುಂಡನ ಹೊಸ ವರ್ಷದ 2026 ರೆಸೊಲ್ಯೂಷನ್

ಸುಮನಾ

**ಬಂಧಮುಕ್ತ**

ಬಂಧಮುಕ್ತ ವೆಂದರೆ ಸಂಸಾರ ಸರಪಳಿಯಿಂದ ಬಿಡುಗಡೆಯೆಂದರ್ಥ..ಅದಕ್ಕಾಗಿ ದೃಢ ನಿರ್ಧಾರ ಮಾಡಬೇಕೆಂದು..ನೀತಿಬೋಧ ತರಗತಿಯಲ್ಲಿ ಹೇಳಿದ ಮೇಡಂಗೆ..ಗುಂಡ ಅಂದ..ಹಾಗಾದ್ರೆ ಯಾವುದೇ ಬಂಧನ ಬಿಡುಗಡೆ ಯಾಗುತ್ತಾ ಮೇಡಂ..ಹೌದು, ನೀನು ದೃಢ ನಿರ್ಧಾರ ಮಾಡಿದ್ರೆ ಯಾವುದೂ ಅಸಾಧ್ಯ ವಲ್ಲ..ಅಂದ್ರು ಮೇಡಂ..

ಹಾಗಾದ್ರೆ ನಾನು ನಾಳೆಯಿಂದ ತರಗತಿಗೆ ಬರೋಲ್ಲ, ಯಾಕೆಂದ್ರೆ ಈ ತರಗತಿ, ಶಾಲೆ, ಪಾಠ ಎಲ್ಲಾ ಒಂದು ಬಂಧನ..ಇದರಿಂದ ಬಂಧಮುಕ್ತ ನಾಗಬೇಕೆಂದು ಧೃಢ ನಿರ್ಧಾರ ಮಾಡಿದೀನಿ,

ಇದು ಹೊಸ ವರ್ಷ 2026 ರ ನನ್ನ ರೆಸೊಲ್ಯೂಶನ್ ಮೇಡಂ ಅಂದಾಗ ಮಕ್ಕಳೆಲ್ಲ..ವಾವ್ ಗುಂಡಾ.ಸರಿಯಾದ ಐಡಿಯಾ, ಕಣೋ,ನಾವೂ ಇದೇ ರೆಸೊಲ್ಯೂಷನ್. ಮಾಡ್ತೀವಿ..ನೋಡು.. ಅಂತ ನಕ್ಕರು..

**ಪರಿ–ಪೂರ್ಣ**

ಬಹಳ ದಿನಗಳಿಂದ ಕಾಣೆಯಾಗಿದ್ದ ಬಂಟಿ ಇದ್ದಕ್ಕಿದ್ದಂತೆ ಇಬ್ಬರು ಲಲನೆಯರ ಕೈ ಹಿಡಿದು ಅಪ್ಪ, ಅಮ್ಮನ ಮುಂದೆ ಪ್ರತ್ಯಕ್ಷ ನಾದ..

ಏನೋ, ಇದೂ..ಎಲ್ಲಿ ನಾಪತ್ತೆ ಯಾಗಿದ್ದೆ.?? ನಾವೂ ಹುಡುಕಿ, ಹುಡುಕಿ ಸಾಕಾಯ್ತು., ನಿನ್ನ ಗೆಳೆಯರನ್ನು ವಿಚಾರಿಸಿದೆವು,ಏನೂ ಯೋಚನೆ ಮಾಡಬೇಡಿ ಬರ್ತಾನೆ ಅಂದಿದ್ರು ಅಂದ್ರು ಅಮ್ಮ..

ಹೌದಮ್ಮ, ನನಗೆ ಈ ಜೀವನದ ಬಗ್ಗೆ ತುಂಬಾ ತಿಳಿಯಬೇಕೆನಿಸಿ..ದೂರದ ಊರಿನ ಬೆಟ್ಟದಲ್ಲಿ ತಪಸ್ಸು ಮಾಡ್ತಾ ಕೂತಿದ್ದೆ.. ಈಗ ನನ್ನ ಜೀವನ ಪರಿ–ಪೂರ್ಣ ಆಯ್ತಮ್ಮ..ಅದ್ಹೇಗೋ, ಇವರಿಬ್ರೂ ಯಾರು?? ಅದೇ ಇವರಿಬ್ರಿಂದ್ಲೇ ನಂಜೀವ್ನ "ಕಂಪ್ಲೀಟ್" ಆಯ್ತಮ್ಮ. "ನೋಡು, ಇವಳು ಪರಿ, ಇವಳು ಪೂರ್ಣ..ನಿನ್ನ ಪ್ರೀತಿಯ ಸೊಸೇರು" ಕಣಮ್ಮ ಅಂದಾಗ..ಒಂಟಿಯಾಗಿ ಹೋಗಿ, ಡಬ್ಬಲ್ ಜಂಟಿ ಯಾಗಿ ಬಂದನೇ ಬಂಟಿ ಅಂತ ಅಪ್ಪ, ಅಮ್ಮ ಇಬ್ರೂ ಶಾಕ್,ಆಗಿ ತಲೆಮೇಲೆ ಕೈ ಹೊತ್ತು ಕುಳಿತರು.

**ಏಲಕ್ಕಿ ಬಾಳೆ ಹಣ್ಣು**

ಅಮ್ಮ ಅಂದ್ರು ...ಏನೋ ಗುಂಡಾ, ಪೂಜೆಗೆ ಏಲಕ್ಕಿ ಬಾಳೆ ಹಣ್ಣು ತೊಗೊಂಡು ಬಾ ಅಂದ್ರೆ, ಇದೇನೋ??

ಯಾಕಮ್ಮ ?? ಏನಾಯ್ತು?? ಏಲಕ್ಕಿ, ಬಾಳೆ ಹಣ್ಣು ಎರಡೂ ತಂದಿದೀಯಲ್ಲ??

ಹ್ಞೂ..ನೀನೇ ಹೇಳಿದ್ಯಲ್ಲಮ್ಮ.. ಅಯ್ಯೋ, ..ಏಲಕ್ಕಿ ಬಾಳೆ ಹಣ್ಣು ಅಂದ್ರೆ ಆ ವೆರೈಟಿ..ಅಂತ ಹೇಳಿದ್ದು.. ಗುಂಡ ಅಂದ::

ಅಯ್ಯೋ, ದೇವ್ರಿಗೂ ದಿನಾ ಅದೇ ವೆರೈಟಿ ಬೇಜಾರಾಗಿರುತ್ತೆ ಬಿಡಮ್ಮ..

ಅದಕ್ಕೇ ಇವತ್ತು ಹೊಸವರ್ಷದ ಸ್ಪೆಷಲ್ ನೈವೇದ್ಯ ಅಂತ ದೇವ್ರಿಗೆ ಹೇಳ್ಬಿಡಮ್ಮ ಅಂತ. ನಗೆ. ಚಟಾಕಿ ಹಾರಿಸಿದ..ಗುಂಡ..

■

# ರಾಶಿ ಫಲ

**ನಳಿನಿ ಟಿ. ಭೀಮಪ್ಪ, ಧಾರವಾಡ**

ನಾನು ಪತ್ರಿಕೆ ತೆರೆಯುತ್ತಿದ್ದಂತೆ, ಮಗಳು ನನ್ನ ಮೇಲೆ ಒಂದು ಕಣ್ಣನ್ನು ಕೀಲಿಸಿಯೇ ಇರುತ್ತಾಳೆ. ಆಕೆಗೆ ಹೆದರಿ ಮೊದಲನೆಯ ಪುಟದಿಂದಲೇ ಓದುವುದನ್ನು ಶುರುಮಾಡಿದರೂ, ನನಗಿಷ್ಟವಾದ ಪುಟಕ್ಕೆ ಬರುತ್ತಿದ್ದಂತೆ, ನನ್ನ 'ಐ' ಎಂಜಿನ್ ಸ್ವಲ್ಪ ಹೆಚ್ಚೇ ಸಮಯ ಅಲ್ಲಿ ಸ್ಥಿರವಾಗಿ ನಿಲ್ಲುವುದು ಆಕೆಗೆ ತಟ್ಟನೆ ತಿಳಿದುಬಿಡುತ್ತದೆ. ಆಗಾಗ ಹಿಗ್ಗುವ ಕುಗ್ಗುವ ಕಣ್ಣುಗಳು, ಬಿಟ್ಟ ಬಾಯಿ, ಗಂಟುಹಾಕುವ ಹಣೆ, ನಗುವ ತುಟಿ ಹೀಗೆ ಕ್ಷಣಕ್ಕೊಂದು ಭಾವನೆ ಮುಖದ ಮೇಲೆ ಮೂಡುತ್ತಿದ್ದಂತೆ, 'ಮಮ್ಮೀ, ಫ್ಯೂಚರ್ 'ಟೆನ್ಸ್'(ನ್) ಮಾಡಿಕೊಂಡಿದ್ದು ಸಾಕು, ಪ್ರೆಸೆಂಟ್‌ಗೆ ಬಾರವ್ವಾ' ಎನ್ನುವ ವಾರ್ನಿಂಗ್ ತಟ್ಟನೆ ಬರುತ್ತದೆ. ಇಷ್ಟು ಆಸಕ್ತಿಯಿಂದ ಕಾಲೇಜಿನ ಪುಸ್ತಕಗಳನ್ನು ಓದಿದ್ದರೆ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಬಹುದಿತ್ತು, ಎಂದು ಯಜಮಾನರ ಒಗ್ಗರಣೆ ಬೇರೆ. ಯಾವುದೇ ಪತ್ರಿಕೆ ಹೊಸದಾಗಿ ಹಿಡಿಯುತ್ತಿದ್ದಂತೆ ನನ್ನದು ಇದೇ ಹಣೆಬರಹವೇ ಎಂದು ಮನೆಯವರೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಕಾಫಿಯ ಜೊತೆಗೆ ಪತ್ರಿಕೆಯ ಹಾರ್ಡ್‌ಕಾಪಿ ಮುಗಿಸಿ, ನಂತರ ಮೊಬೈಲ್‌ನಲ್ಲಿ ಸಬ್ಸ್ಕ್ರಿಪ್ಷನ್ ಆದ ಆನ್ಲೈನ್ ಪತ್ರಿಕೆಗಳ ಸಾಫ್ಟ್‌ಕಾಪಿಯನ್ನು ಸ್ಕ್ರೋಲ್ ಮಾಡುವ ಕೆಲಸ.

ಅದೇನೋ ಗೊತ್ತಿಲ್ಲ, ನನಗಂತೂ ಈ ರಾಶಿಫಲ ಓದುವುದೆಂದರೆ ರಾಶಿ ರಾಶಿ ಖುಷಿ. ನಂಬ್ತೀನೋ, ಬಿಡ್ತೀನೋ ಅದು ಬೇರೆ ಮಾತು. ಓದುವ ಕುತೂಹಲವಂತೂ ಹತ್ತಿಕ್ಕಿಕೊಳ್ಳಲಾಗದು. ಹಾಗಾಗಿ ಪತ್ರಿಕೆ ಬರುತ್ತಿದ್ದಂತೆ, ಮೊದಲು ತೆರೆಯುವುದೇ ರಾಶಿಫಲದ ಪುಟ. ನಾವು ತೆಗೆಸಿಕೊಂಡ ಫೋಟೋ ನೋಡುವಾಗ, ಮೊದಲು ನಾವು ಚೆನ್ನಾಗಿ ಬಂದಿದ್ದೀವಾ ಎಂದು ಝೂಮ್ ಝೂಮ್ ಮಾಡಿ ಹತ್ತಿರದಿಂದ ನೋಡಿ, ಚೆನ್ನಾಗಿ ಬಂದಿದ್ದರೆ ಖುಷಿಯಿಂದ ನಕ್ಕು ನಿರಾಳರಾಗಿ, ಅಕಸ್ಮಾತ್ ಕಣ್ಣುಮುಚ್ಚಿಯೋ, ಅರೆಗಣ್ಣು ತೆರೆದಂತೆಯೋ ಅಥವಾ ಬೇರೆಲ್ಲರಿಗಿಂತ ಬ್ಲರ್ ಆಗಿದ್ದರೆ ಛೇ! ಎಂದು ಫೋಟೋ ತೆಗೆದವರನ್ನೋ, ಮೊಬೈಲನ್ನೋ ಅಥವಾ ಸ್ವತಃ ನಮ್ಮನ್ನೇ ನಾವು ಬೈಯ್ದುಕೊಂಡ ನಂತರವೇ ನಮ್ಮ ಆಜೂಬಾಜೂ ಇರುವವರ ಕಡೆ ಕಣ್ಣಾಯಿಸುವ ಜಾಯಮಾನದಂತೆ, ಹನ್ನೆರಡು ರಾಶಿಗಳಲ್ಲಿ ನಮ್ಮ ರಾಶಿಯನ್ನು ಸರಬರನೆ ಹುಡುಕಿ, ಅದರಲ್ಲಿನ ವಿಷಯವನ್ನು ನಾಲ್ಕೈದು ಬಾರಿ ಓದಿ ಮನದಟ್ಟು ಮಾಡಿಕೊಂಡು, ಹೆಚ್ಚು ಧನಾತ್ಮಕ ಅಂಶಗಳಿದ್ದರೆ ಕಣ್ಣು, ತುಟಿಯರಳಿ, ಋಣಾತ್ಮಕ ಅಂಶಗಳು ಹೆಚ್ಚಿದ್ದರೆ ವಿಷಾದ ಹೊಮ್ಮಿ, ಕೇಡು, ದುಃಖದ ವಿಷಯವಿದ್ದರೆ ಆತಂಕದಿಂದ ಹಣೆಯ ನೆರಿಗೆ ಹೆಚ್ಚಿ, ಅದಕ್ಕೆ ಕೊಟ್ಟಿರುವ ಪರಿಹಾರವನ್ನು ಆಚರಣೆಗೆ ತರದಿದ್ದರೂ, ಪರಿಹಾರ ಇದೆಯಲ್ಲ ಎನ್ನುವುದೇ ಮನಸ್ಸಿಗೆ ಶಾಂತಿ ನೀಡುವುದರಿಂದ ಒಮ್ಮೆ ಗಮನಿಸಿ ಶಾಂತವಾಗುವ ಸರದಿ.

ನಂತರ ಗಂಡನದೋ, ಮಕ್ಕಳದೋ ಅಥವಾ ಆಪ್ತರದನ್ನೋ ಓದುವ ಹುಚ್ಚು. ಹಾಗಾಗಿ ಪ್ರತಿದಿನ ನಾಲ್ಕೈದು ರಾಶಿಫಲವನ್ನು, ನಾಲ್ಕೈದು ಪತ್ರಿಕೆಗಳಿಂದ ತಲೆಗೆ ಡೌನ್‌ಲೋಡ್ ಮಾಡಿಕೊಂಡು, ಅರ್ಧಗಂಟೆ ಅದರ ಬಗ್ಗೆ ಯೋಚಿಸುತ್ತ, ಯಾವುದು ಯಾರ ರಾಶಿಯಲ್ಲಿ ಓದಿದೆ ಎನ್ನುವುದು ಕಲಸುಮೇಲೊಗರವಾಗಿ, ಯಾವುದೂ ತಲೆಯಲ್ಲುಳಿಯದೆ ನೆಮ್ಮದಿಯಿಂದ ಮುಂದಿನ ಕೆಲಸಕ್ಕೆ ತೊಡಗುವುದಾಗುತ್ತದೆ. ಹಾಗೆಯೇ ವಾರಕ್ಕೊಮ್ಮೆ ವಾರಫಲವನ್ನು, ದಿನಫಲದ ಜೊತೆಗೇ ಓದಿ, ಎಲ್ಲವೂ ಎಲ್ಲರದ್ದೂ ಮಲ್ಟಿಪ್ಲೈ ಆಗಿ, ಮತ್ತಷ್ಟು ವೇಗವಾಗಿ ಮರೆತುಹೋಗುತ್ತದೆ. ಹಾಗೆ ನೋಡಿದರೆ ಮಾಸಫಲವನ್ನು ಕೆಲವೇ ಸಾಲುಗಳಲ್ಲಿ ಬರೆದು ಮುಗಿಸಿರುತ್ತಾರಾದ್ದರಿಂದ, ಒಂದೆರಡು

ದಿನ ತಲೆಯಲ್ಲಿ ಬೇರೂರಿ ನಂತರ ಮಾಯವಾಗುವುದಿದೆ. ಇನ್ನು ದೀಪಾವಳಿಗೋ, ಯುಗಾದಿಗೋ, ಹೊಸವರ್ಷಕ್ಕೋ ಬಹುತೇಕ ಪತ್ರಿಕೆಗಳು ವರ್ಷಭವಿಷ್ಯವನ್ನು ಪ್ರಕಟಿಸುವುದಿದೆ. ಪ್ರತಿಯೊಂದೂ ದೊಡ್ಡ ಪೇಜು ತುಂಬುವಷ್ಟು ಕಂಟೆಂಟ್ ಇರುತ್ತಾದ್ದರಿಂದ, ಮಿನಿಕಥೆಗಳಂತೆ ಅದನ್ನು ಓದುವ ಖುಷಿಯೇ ಬೇರೆ. ಜೊತೆಗೆ ಗ್ರಹಣಗಳು ಸಂಭವಿಸಿದಾಗ, ಗ್ರಹಗಳು ತಮ್ಮ ಗೃಹಗಳನ್ನು ಬದಲಾಯಿಸಿದಾಗ ಗೋಚಾರ ಫಲ ಪ್ರಕಟವಾಗುವುದೂ ಇದೆ. ಕೆಲವೊಮ್ಮೆ ಜನ್ಮದಿನಕ್ಕನುಗುಣವಾಗಿ ಒಂದುಕಡೆ, ಜನ್ಮನಕ್ಷತ್ರಕ್ಕನುಗುಣವಾಗಿ ಮತ್ತೊಂದೆಡೆ ಪ್ರಕಟವಾಗುವುದರಿಂದ, ರಾಶಿಗಳು ಸ್ವಲ್ಪ ಆಚೀಚೆ ಆಗಿ, ಒಬ್ಬೊಬ್ಬರದೂ ಎರಡೆರಡು ರಾಶಿಫಲ ಓದಿ ತಾಳೆಹಾಕುವುದಾಗುತ್ತದೆ.

ಕೋಟ್ಯಾನುಕೋಟಿ ಜೀವರಾಶಿಗಳಿಗೂ ಇವೇ ಹನ್ನೆರಡು ರಾಶಿಗಳು ಅನ್ವಯಿಸುತ್ತವೆ ಎನ್ನುವುದು ಸಮಾಧಾನಕರ ಸಂಗತಿ. ಈ ದ್ವಾದಶ ರಾಶಿಗಳ ಹೆಸರುಗಳಲ್ಲಿ ಜಲವಾಸಿ, ನೆಲವಾಸಿ, ಉಭಯವಾಸಿಗಳ ಜೊತೆಗೆ ಕುಂಭ, ತಕ್ಕಡಿಯಂತಹ ವಸ್ತುಗಳೂ ಇವೆ. ಐದೂ ಬೆರಳುಗಳು ಸಮನಾಗಿರುವುದಿಲ್ಲ ಎನ್ನುವ ಉಕ್ತಿಯಂತೆ, ಎಲ್ಲ ಪತ್ರಿಕೆಗಳಲ್ಲಿ ಓದುವ ರಾಶಿಫಲಗಳ ವಿವರ ಒಂದೇ ಆಗಿರದು ಎನ್ನುವುದು ಬಲು ಸಮಾಧಾನವನ್ನು ನೀಡುತ್ತದೆ. ಒಂದೆಡೆ ಎಲ್ಲ ಕೆಲಸಗಳಲ್ಲಿಯೂ ಅಡೆತಡೆ, ನಿಧಾನ ಅಂತೆಲ್ಲ ಓದಿ





ಪಿಚ್ಚೆನಿಸಿ ದೇಹದ ಬಿಪಿಯನ್ನು ಏರಿಸಿಕೊಳ್ಳುವುದಾದರೆ, ಮತ್ತೊಂದೆಡೆ ವೃತ್ತಿಯಲ್ಲಿ ಉನ್ನತಿ, ಧನಯೋಗ ಅಂತೆಲ್ಲ ಖುಷಿಯ ಗ್ರಾಫ್ ಏರಿಸುವಂತಹ ವಿಷಯಗಳೇ ಇರುತ್ತವೆ. ಮತ್ತೊಂದು ಕಡೆ ಯಶಸ್ಸು, ಸೋಲು ಎಲ್ಲವನ್ನೂ ಸರಿಯಾಗಿ ಬ್ಯಾಲನ್ಸ್ ಮಾಡಿರುತ್ತಾರೆ. ಕೆಲವೊಮ್ಮೆ ಶಫಲ್ ಆಗುವುದೂ ಇದೆ. ಅದರಲ್ಲೊಂದು ಸ್ತೋತ್ರ ಪಠಿಸಿ, ಇದರಲ್ಲೊಂದು ಪಾರಾಯಣ ಮಾಡಿ, ಶುಭಬಣ್ಣ, ಶುಭಸಂಖ್ಯೆ, ಶುಭದಿನಗಳು ಹೀಗೆ ನಾಲ್ಕೈದು ಪತ್ರಿಕೆಗಳಲ್ಲಿನ ಎಲ್ಲವನ್ನೂ ತಲೆಗಿಳಿಸಿಕೊಂಡ ನಂತರವೇ ಮುಂದಿನ ಕೆಲಸಕ್ಕೆ ತಯಾರಿ ನಡೆಯುತ್ತದೆ.

ಕೇವಲ ಪತ್ರಿಕೆಗಳು ಮಾತ್ರವಲ್ಲ ಟಿವಿಯಲ್ಲಿಯೂ ಪ್ರತಿದಿನ ಬೆಳಗ್ಗೆ ಆರರಿಂದ ಶುರುವಾದ ಭವಿಷ್ಯವಾಣಿ ಹತ್ತರವರೆಗೂ ಮುಂದುವರೆದಿರುತ್ತದೆ. ನಮ್ಮ ಅತ್ತೆ ಮಾವ ಮುಂಜಾನೆ ಎದ್ದು ದೇವರಿಗೆ ನಮಸ್ಕರಿಸಿ, ಲಗುಬಗೆಯಿಂದ ಪ್ರಾತಃಕರ್ಮಗಳನ್ನು ಮುಗಿಸಿಕೊಂಡು ಟಿವಿಯ ಮುಂದೆ ವಿರಾಜಮಾನರಾಗುವುದಿದೆ. ಈ ಹಿರಿತಲೆಗಳಿಗೆ ಓದುವುದಕ್ಕಿಂತ, ಕೇಳುವುದೇ ಹೆಚ್ಚು ಅನುಕೂಲಕರ ಎನಿಸಿರಬಹುದು. ನೀರಿನ ಗಂಡಾಂತರ, ಬೆಂಕಿಯ ಗಂಡಾಂತರ, ಜಲಗಂಡಾಂತರ, ವಾಹನ ಗಂಡಾಂತರ ಅಂತೆಲ್ಲ ಕೇಳುತ್ತಿದ್ದಂತೆ, ಅವ್ಯಾವುದರ ಬಳಿ ಅಷ್ಟಾಗಿ ಹೋಗದಿದ್ದರೂ ಗಾಬರಿಬೀಳುತ್ತ, ಅವುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸಿ ಒಬ್ಬರಿಗೊಬ್ಬರು ವಿಚಾರ ವಿನಿಮಯ ಮಾಡಿಕೊಳ್ಳುವುದಿದೆ. ತಿಂಡಿಯ ಜೊತೆಗೆ ಅದೇ ವಿಷಯವನ್ನೇ ಬಬಲ್‌ಗಮ್‌ನಂತೆ ಅಗೆದಗೆದು, ನಂತರ ಸೀರಿಯಲ್‌ಗಳಲ್ಲಿ

ಮುಳುಗಿಹೋಗುವುದು ಪ್ರತಿದಿನದ ದಿನಚರಿ. ಸಾಮಾಜಿಕ ಜಾಲತಾಣಗಳ ಪೇಜ್‌ಗಳಿಗೆ ಹಳೆಯ ಆಚರಣೆಗಳನ್ನೂ ಒಪ್ಪುವ, ಆಧುನಿಕತೆಯನ್ನೂ ಅಪ್ಪುವ ಮಧ್ಯಮವಯಸ್ಕರೇ ಟಾರ್ಗೆಟ್. ಎಫ್‌ಬಿ, ಇನ್ಸ್ಟಾಗಳನ್ನು ಸ್ಕ್ರೋಲ್ ಮಾಡುವಾಗ, ಈ ನಾಲ್ಕು ರಾಶಿಯವರಿಗೆ ಧನಯೋಗ, ಆ ಮೂರು ರಾಶಿಯವರಿಗೆ ಗೃಹಯೋಗ, ಈ ರಾಶಿಯವರಿಗೆ ಜೀವನದಲ್ಲಿ ಸೋಲೇ ಇಲ್ಲ, ಆ ರಾಶಿಯವರಿಗೆ ಮುಟ್ಟಿದ್ದೆಲ್ಲಾ ಚಿನ್ನ ಅಂತೆಲ್ಲ, ನಡುನಡುವೆ ಜಾಹೀರಾತಿನಂತೆ ಅಡ್ಡಡ್ಡ ಬರುವ ಪೇಜುಗಳದ್ದೇ ಕಾರುಬಾರು.

ರಾಶಿಭವಿಷ್ಯದಲ್ಲಿ ಬರೆದದ್ದೆಲ್ಲ ನಡೆದೇ ತೀರುತ್ತವೆ ಅಂತಿಲ್ಲ. ದಾಂಪತ್ಯದಲ್ಲಿ ಕಲಹ ಎನ್ನುವ ಅಂಶ ಮಾತ್ರ ಯಾವ ರಾಶಿಯಲ್ಲಿ ಓದಿದರೂ ಬಹುತೇಕ ಎಲ್ಲ ದಂಪತಿಗಳಿಗೂ ಅನ್ವಯವಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ. ಗಂಡಾಂತರ ಎಂದು ಓದಿದಾಗ, ವಾಹನ ಚಲಾಯಿಸುವುದರಲ್ಲೋ, ಬೆಂಕಿಯ ಬಳಿ ಕೆಲಸ ಮಾಡುವಾಗಲೋ ಸ್ವಲ್ಪ ಹುಷಾರಾಗಿರಬೇಕು ಎನ್ನುವ ಜಾಗ್ರತೆ ಮೂಡಿದರೂ ಸಾಕು, ಅವರಿವರೊಡನೆ ಕಲಹ ಎಂದಿದ್ದರೆ, ಕೋಪ ನಿಗ್ರಹಿಸಲು ಪ್ರಯತ್ನಿಸುವುದು ಅಥವಾ ವ್ಯಾಜ್ಯಗಳನ್ನು ತಪ್ಪಿಸಲು ಮೌನಕ್ಕೆ ಶರಣು ಹೋಗುವುದೂ ಪರಿಹಾರವೇ. ಬಂಧುಗಳ ಆಗಮನ ಅಂತೇನಾದರೂ ಇದ್ದರೆ, ಅವಶ್ಯಕ ವಸ್ತುಗಳ ಜೊತೆಗೆ ರೇಷನ್ನು, ತಿಂಡಿ, ತೀರ್ಥಗಳ ಕಡೆ ಒಮ್ಮೆ ಮನಸ್ಸು ಹಾದು ಬರುತ್ತದೆ. 'ಬಾರದು ಬಪ್ಪದು, ಬಪ್ಪದು ತಪ್ಪದು' ಎಂದು ಬಸವೇಶ್ವರರ ವಚನದಲ್ಲಿ ಹೇಳಿದಂತೆ ಭವಿಷ್ಯದಲ್ಲಿ ಬರಬಹುದಾದ ತೊಂದರೆಗಳನ್ನು ತಡೆಯಲು ಸಾಧ್ಯವಾಗದಿದ್ದರೂ, ಆತ್ಮವಿಶ್ವಾಸದಿಂದ ಎದುರಿಸುವ, ಸಹಿಸುವ, ನಿಭಾಯಿಸುವ ಶಕ್ತಿಯನ್ನು ಕ್ರೋಢೀಕರಿಸಿಕೊಳ್ಳಲು ಈ ರಾಶಿಫಲಗಳು ಆಶಾಕಿರಣಗಳಾಗಬಹುದು ಎನ್ನುವ ವಿಶ್ವಾಸ ಬಹುತೇಕರದು. ಭರವಸೆಯೇ ಬದುಕು ಅಲ್ಲವೇ? ■



# ವೈದ್ಯರಿಗೆ...ವೈದ್ಯಾನಾ ?

ಎ. ವಿಜಯೇಂದ್ರ ರಾವ್

ನಿಮ್ಮನ್ನೇ ನಂಬಿ ಬಂದಿದ್ದೇನೆ. ಚೆನ್ನಾಗಿ ಪರಿಶೀಲನೆ ನಡೆಸಿ ಔಷದಿ, ಮಾತ್ರೆಗಳನ್ನು ಬರೆದು ಕೊಡಿ ಡಾಕ್ಟರೇ...ಎಂದು ಅವರ ಹಳೆಯ ರೋಗಿ ರಂಗರಾಯರು ಹೇಳಿದಾಗ.....

ಅಯ್ಯೋ, ನಿಮಗೆ ಮಾತ್ರೆ, ಗೀತ್ರೆ ಬರೆದು ಕೊಡುವಷ್ಟರಲ್ಲಿ ನನಗೆ ಕೈ ಕಾಲಲ್ಲಿ ನಡುಕಾನೇ ಬಂದುಬಿಡುತ್ತಪ್ಪ....!

ನಿಮ್ಮ ನರಗಳಿಗೆ ಸ್ಟ್ರೈನ್ ಆಗಿರುತ್ತೆ, ದಿನಾಲೂ ನ್ಯೂರೋಬಿಯನ್ ಮಾತ್ರೆ ತಪ್ಪದೆ ತೊಗೊಳ್ಳಿ ಡಾಕ್ಟರೇ.

ಇಲ್ಲಿ ನಾನು ಡಾಕ್ಟರೋ, ಅಥವಾ ನೀವು ಡಾಕ್ಟರೋ ?

ನೀವು ತಾನೇ ಡಾಕ್ಟರ್, ಅದರಲ್ಲೇನು ಡೌಟ್ ?

ಹಾಗಾದರೆ, ಸ್ವಲ್ಪ ಸುಮ್ಮನೆ ಇರಿ. ನಿಮ್ಮ ತರಹದ ಪೇಷಂಟ್ಗಳನ್ನು ದಿನಾ ನೋಡಿ, ನೋಡಿ ನನಗೆ ಎದೆ ನೋವು ಬಂದುಬಿಡುತ್ತೆ ಎಂದರು.

ಎದೆ ನೋವು ಅಂತ ಸುಮ್ಮನೆ ಇದ್ದುಬಿಡಬೇಡಿ. ಜೇಬಿನಲ್ಲಿ ಯಾವಾಗಲೂ ರೆಡಿಯಾಗಿ ಎಕ್ಕೋಸ್ಪಿರಿನ್ನ್ ಟ್ಯಾಬ್ಲೆಟ್ ಇಟ್ಟುಕೊಂಡಿರಿ.ನೋವು ಸ್ವಲ್ಪ ಕಾಣಿಸಿಕೊಂಡರು ಸಹ ತಕ್ಷಣವೇ ಅದನ್ನು ಬಾಯಿಗೆ ಹಾಕ್ಕೊಂಡುಬಿಡಿ ಎಂದರು ರಂಗರಾಯರು.

ಈಗ ನಾನು ನಿಮಗೆ ಮಾತ್ರೆಯನ್ನು ಬರೆಯಲೋ ಬೇಡವೋ ಎಂದು ಕೋಪದಿಂದ ಕೇಳಿದಾಗ..

ಬರೀರಿ ಸಾರ್, ಬರೀರಿ ಎಂದರು.

ನೋಡಪ್ಪಾ ನಾನು ಬರೆದಿರೋದೆಲ್ಲಾ ತುಂಬಾ ಪವರ್ ಇರೋ ಮಾತ್ರೆಗಳು ಎಂದಾಗ, ಅವರು– ಹಾಗಾದರೆ ಶಾಕ್ ಹೊಡೆಯುತ್ತಾ ಡಾಕ್ಟರೇ ಎಂದು ರೇಗಿಸಿದರು. ಆಗ ಅವರು .....ಏಯ್ ಎಂದಾಗ

ಅವರು– ಸರಿ, ಸರಿ ಹಾಗೆ ದಿಟ್ಟಿಸಿ ನೋಡ ಬೇಡಿ, ಅದನ್ನು ತೊಗೊಬೇಕಾದಾಗ, ಸ್ಲಿಪ್ಪರ್ ಹಾಕ್ಕೊಂಡು ತೊಗೊತೀನಿ, ಆವಾಗ ನನಗೆ ಶಾಕ್ ಹೊಡೆಯೊಲ್ಲ ಎಂದಾಗ....

ಡಾಕ್ಟರ್–ಹುಸ್ಸಪ್ಪ, ನನ್ನ ಕೈಲಿ ಆಗಲ್ಲಪ್ಪ ನಿಮ್ಮ ಹತ್ತಿರ ಮಾತಾಡಕ್ಕೆ ಎಂದರು.

ಅವರು–ಯಾಕೆ ಡಾಕ್ಟರೇ, ನಿಮಗೆ ಹೀಗೆ ಬೆವರು ಕಿತ್ಕೋತಾ ಇದೆ, ಪ್ರೆಷರ್ ಜಾಸ್ತಿ ಆಗಿರಬೇಕು, ದಿನಾಲೂ ಅಮ್ಲೋಡಿಪೈನ್ ತೊಗೊಳ್ಳಿ ಎಂದರು.

ಡಾಕ್ಟರ್–ನನಗೆ ಸ್ವಲ್ಪ ಬರೆಯಲು ಬಿಡಪ್ಪ ಎಂದಾಗ..

ಅವರು–ಸರಿ, ಬರೀರಿ ಡಾಕ್ಟರೇ ಎಂದರು.

ಡಾಕ್ಟರ್–ಈ ಸಿರಪ್ಪನ್ನು ಸ್ವಲ್ಪ ಮಾತ್ರ ತೊಗೊಬೇಕು ಎಂದರು.

ಅವರು–ಯಾಕೆ ಡಾಕ್ಟರೇ ? ಎಂದಾಗ, ಡಾಕ್ಟರ್ – ಯಾಕೆಂದರೆ, ಸ್ವಲ್ಪ ಆಲ್ಕೊಹಾಲ್ ಅಂಶ ಇದೆ, ಜಾಸ್ತಿ ತೊಗೊಂಡರೆ ತೂರಾಡೋ ಹಂಗೆ ಆಗುತ್ತೆ ಎಂದರು.

ಅವರು–ಆಲ್ಕೋಹಾಲ್ ಅಂದರೆ, ಸರಕ್ಕು ತಾನೇ ಡಾಕ್ಟರ್ ಎಂದು ಕೇಳಿದಾಗ,


ಡಾಕ್ಟರ್ – ಹೌದು ಎಂದರು.

ಅವರು–ನಾನು ಬೇಕಾದರೆ, ಅದರ ಜೊತೆಗೆ ಸೈಡ್ ಡಿಷ್ಷಾಗಿ, ಉಪ್ಪಿನಕಾಯಿ, ಚಿಪ್ಸ್ ತೊಗೊತೀನಿ, ಆವಾಗ ತೂರಾಡಲ್ಲ ಎಂದಾಗ.....



ದೊಪ್......ಅಂತ ಶಬ್ದ ಕೇಳಿಸಿತು. ನೋಡಿದ್ರೆ.. ಡಾಕ್ಟರ್ ಕೆಳಗೆ ಕುಸಿದು ಬಿದ್ದಿದ್ದಾರೆ. ಆಗ ರಂಗರಾಯರು – ಓ ನರ್ಸ್ ಇಲ್ಲಿ ಬಾರಮ್ಮ, ನಿಮ್ಮ ಡಾಕ್ಟರಿಗೆ ಪ್ರಜ್ಞೆ ತಪ್ಪಿದೆ. ಅವರಿಗೆ ಶುಗರ್ ಕಂಪ್ಲೈಟ್ ಇದೆ ಅನ್ಸುತ್ತೆ ಮೆಟ್ಫಿನ್ 10mg ಜೊತೆ ಅವರಿಗೆ ಡ್ರಿಪ್ಸ್ ಹಾಕಿ ಕೊಟ್ಬಿಡು, ಅದರೊಂದಿಗೆ ರೆಸ್ಟೋರಿಲ್ ನಿದ್ರೆಯ ಮಾತ್ರೆಯನ್ನು ಸೇರಿಸು. ಡಾಕ್ಟರ್ ಚೆನ್ನಾಗಿ ರೆಸ್ಟ್ ತೊಗೊಳ್ಳಿ.

ನಾನು ಹೋಗಿಬಿಟ್ಟು ಆಮೇಲೆ ಬರ್ತೀನಿ...ಛೆ, ಛೆ..ಯಾಕೆ ಭಗವಂತನು ಈ ಡಾಕ್ಟರ್ ತರಾ ಒಳ್ಳೆಯ ಮನುಷ್ಯನಿಗೆ ಯಾಕಿಷ್ಟು ಖಾಯಿಲೆಗಳನ್ನು ಕೊಟ್ಟು ಗೋಳು ಹುಯ್ಕೋತಾರೋ ಅಂತ ನನಗಂತೂ ಗೊತ್ತಿಲ್ಲ ಅಂತ ಪೇಚಾಡುತ್ತಾ ಆಚೆಗೆ ಬಂದರು ರಂಗರಾಯರು. ■



# ನಾನು ಮತ್ತು ಕಳ್ಳರು

✍ ಸಿ.ಎ.ವಿಲಾಸ ನಾ ಹುದ್ದಾರ

ಮನೀ ಒಳಗ ಒಬ್ಬ ಇದ್ದೇನಿ. ನನ್ನ ಮನದನ್ನೆ ಮತ್ತ ಮಗಾ ಊರಿಗೆ ಹೋಗ್ಯಾರ. ದೊಡ್ಡ ಮನೀ ಬ್ಯಾರೇ ಕಟ್ಟಿಸೇನಿ. ಕೈ ನಡೀತಿದ್ದಾಗ ಕಟ್ಟಿಸಿಬಿಟ್ಟೆ. ಸಂಜೀಕ ನನ್ನ ಅಂಗಡಿಯೊಳಗ ನನ್ನ ದೋಸ್ತರೆಲ್ಲಾ ಜಮಾಯಿಸಿದ್ರು. ಮಿರ್ಚಿ, ಗಿರ್ಮಿಟ್ ಆಗಿತ್ತ. ಜಾಸ್ತಿ ಹಸಿವಿ ಇದ್ದಿದ್ದಿಲ್ಲಾ. ಸ್ವಲ್ಪ ಹಾಲು ಗುಟುಕರಿಸಿ ಮುಂದಿನ ಬಾಗಲಾ ಘಟ್ಟಿ ಬಂದ ಮಾಡಿ ನನ್ನ ರೂಮಿಗೆ ಬಂದ ಬಾಗಿಲಾ ಹಾಕ್ಕೊಂಡ ಬಿದ್ಕೊಂಡೆ. ಮೊದಲ ನಾ ಅಂಜುಬುರುಕ ಮನುಷ್ಯಾ. ಎರಡೆರಡ ಮೂರು ಮೂರು ಸರ್ತಿ ಬಾಗಲಾ ಹಾಕೇನಿಲ್ಲೋ ಅಂತ ಚೆಕ್ ಮಾಡಿ ನನ್ನ ರೂಮ ಹೊಕ್ಕಿದ್ದೆ. ನನ್ನ ಪುಣ್ಯಾಕ್ಕ ನಾನ 10.00 ಕ್ಕ ಮಲ್ಕೊಂಡೆಂದ್ರ ನಿದ್ದಿ ಹತ್ತಿ ಬಿಡ್ತದ. ಮಲ್ಕೋಳೋದು ಲೇಟ್ ಆದ್ರ ಮಾತ್ರ ತ್ರಾಸ. ಅದಕ್ಕ ಕರೆಕ್ಟ್ ಆಗಿ 10.00ಕ್ಕ ಲೈಟ್ ಆರಿಸಿ ಗಡದ್ದಾಗಿ ಮಲ್ಕೊಂಡ ಬಿಟ್ಟೆ. ನಿದ್ದೀನೂ ಹತ್ತು.

ಒಮ್ಮಿಲೇ ಏನೋ ಸಪ್ಪಳ ಆದಂತಾಗಿ ಎಚ್ಚರ ಆತು. ನಮ್ಮ ಹಾಲಿನೊಳಗ ಯಾರೋ ಓಡಾಡಿದ್ದು, ಹಗುರವಾಗಿ ಮಾತಾಡೋದು ಕೇಳಸಲಿಕ್ಕತ್ತು. ನನ್ನ ಎದಿ ಡವಾ ಡವಾ ಅಂತ ಹೊಡಕೊಳ್ಳಿಕತ್ತು. ಮೊಬೈಲ್ ನೋಡಿದೆ. ಬೆಳಗಿನ 3.00 ಘಂಟೆ ಆಗಿತ್ತು. ಮೂರು, ನಾಲ್ಕು ಮಂದಿ ಮಾತಾಡೋದು ಮತ್ತ ಒಂದೊಂದ ರೂಮಿನ ಬಾಗಿಲಾ ತಗ್ಯೋದು ಹಾಕೋದು ಕೇಳಿಸ್ತು. ಇನ್ನ ಖಾತ್ರಿ ಆತ, ನನ್ನ ರೂಮಿಗೆ ಬರ್‍ತಾರಂತ. ಈಗ ನಾನೇನರೆ ಸಪ್ಪಳಾ ಮಾಡೀದ್ರ ನನ್ನ ಕಥಿ ಮುಗದ್ಹಂಗ ಅಂತ ಅನ್ಕೊಂಡ ಘಟ್ಟೆ ಕಣ್ಣ ಮುಚ್ಕೊಂಡ ನಿದ್ದಿ ಹತ್ತಿದವರಂಗ ಡಬ್ಬ ಬಿದ್ಕೊಂಡೆ. ನನ್ನ ರೂಮೀನ ಬಾಗ್ಲಾ ತಗದದ್ದು ಸಪ್ಪಳಾ ಕೇಳಿಸ್ತು.

"ಎಷ್ಟ ಗಡದ್ದ ಮಲ್ಕೊಂಡಾನ್ಲೇ ಇಂವಾ...ನಸೀಬವಾನ ಇದ್ದಾನ ನೋಡ.."

"ಲೇ,ಮಗನ, ಅವನ ನಸೀಬ ತೊಗೊಂಡ ಏನ ಮಾಡ್ತೀ. ಮೊದ್ಲೇಕ ಅವನ ಬಾಜೂಕ ಇರೋ ಮೊಬೈಲ್ ತೊಗೊಂಡ ಸ್ವಿಚ್ ಆಫ ಮಾಡು."

ನನ್ನ ಗೋದ್ರೇಜ್ ಕಪಾಡಿನ ಬಾಗಿಲಾ ತಗದ, ಅದರೊಳಗೆಲ್ಲಾ ಹುಡುಕಾಡಿದ ಸಪ್ಪಳಾ,

"ಏ ಬರೇ ಮುರುಸಾವಿರಾ ಮತ್ತ ಮ್ಯಾಲೆ ಸ್ವಲ್ಪ ಚಿಲ್ಲರಾ ಅದಲೇ...ಬಂಗಾರ, ಬೆಳ್ಳಿ ಏನೂ ಇಲ್ಲಾ. ನಾವೇನ ಇಂವಾ ದೊಡ್ಡ ಮನುಷ್ಯಾ, ಶ್ರೀಮಂತ ಇದ್ದಾನಂತ ತಿಳ್ಕೊಂಡ್ರ ಚಿಲ್ಲರಾ ಮನುಷ್ಯಾ ಹೊಂಟಾ ಅಲ್ಲಪ ಇಂವಾ...ಬರೇ ಫೈಲ್ಸ ತುಂಬ್ಯಾವ...."

ನನಗ ಒಳಗೊಳಗ ನಗು.

"ಅ ಇರಲಿ ಬಿಡು, ಒಮ್ಮೊಮ್ಮೆ ನಮ್ಮ ಲೆಕ್ಕಾ ತಪ್ಪಾಗತದ...ನೋಡು ಮೊದಲೀನ ಮನ್ಯಾಗ 3–4 ಲಕ್ಷ ಸಿಗಬಹುದೆಂದು ಅಂದಾಜ ಇದ್ರ ನಮಗ ಸಿಕ್ಕದ್ದು 10.00 ಲಕ್ಷ ರೂಪಾಯಿ. ಅದೂ ಬ್ಲ್ಯಾಕ್ ರೊಕ್ಕಾ. ಆ ಮನೀಯಾಂವ ಕಂಪ್ಲೇಂಟೂ ಕೊಡೂದಿಲ್ಲಾ. ಇಲ್ಲಿ ನಡೀರಿ...ಇಂವಾ ಆರಾಮ ಮಲ್ಕೊಳ್ಳಿ...ಮನ್ಯಾಗ ಯಾರೂ ಇದ್ಹಂಗಿಲ್ಲ...ಹಸಿವೆ ಆಗೇದ ..ಏನರೇ ಮಾಡ್ಕೊಂಡ ತಿಂದ್ರಾತ...".

ಅವರು ಮೂರು ಮಂದಿ ಇರಬೇಕು. ಅವರ ಮಾತಾಡೋದ ಸುಮ್ನ ಕೇಳ್ಕೋತ ಬಿದ್ಕೊಂಡಿದ್ದೆ. ನನ್ನ ಮೊಬೈಲ್ ತೊಗೊಂಡ, ರೂಮಿನ ಬಾಗ್ಲಾ ಹಾಕ್ಕೊಂಡ, ಹೊರಗಿಂದ

ಚಿಲಕಾನೂ ಹಾಕೀದ್ರು.

ಸ್ವಲ್ಪ ಹೊತ್ತಿನೊಳಗ ಗ್ಯಾಸ ಹಚ್ಚಿದ್ದು, ಭಾಂಡಿ ಇಟ್ಟದ್ದು ಕೇಳಿಸ್ತು. ಹಂಗ ಕಣ್ಣ ಮುಚ್ಚಿ ಮಲ್ಕೊಂಡಿದ್ದೆ. ಮೂಗು ಚುರುಕಾತು. ಘಮ್ಮಂದ ಉಪ್ಪಿಟ್ಟಿನ ವಾಸನೀ ಬಡೀತ ಅದಕ. ರಾತ್ರಿ ಬರೋಬರಿ ತಿಂದಿದ್ದಿಲ್ಲಾ. ಆ ವಾಸನಿಗೆ ಹಸಿವೀನೂ ಆಗಬೇಕಾ !. ನಾ ಮೋದಲೇನ ತಿನಿಸಬಡಕಾ..ತಡ್ಕೋಳಲಿಕ್ಕೆ ಆಗಲಿಲ್ಲಾ. ಚಿಲಕಾ ಹಾಕಿದ್ದಕ್ಕ ಹೊರಗ ಹೋಗಲಿಕ್ಕೆ ಬರೋಹಂಗ ಇದ್ದಿದ್ದಿಲ್ಲಾ. ಸಾವಕಾಶ ಬಾಗಲಾ ಬಡದೆ, "ಘಂ ಅಂತ ಉಪ್ಪಟ್ಟಿನ ವಾಸನೀ ಬರಲಿಕತ್ತದ, ಏನ್ರಪ್ಪಾ...ರಾತ್ರಿ ಬರೋಬರಿ ಊಟಾ ಆಗಿಲ್ಲಾ... ಹಸಿವೀನೂ ಆಗಲಿಕತ್ತದ....ನನಗೂ ಸ್ವಲ್ಪ ಉಪ್ಪಿಟ್ಟ ಕೊಡ್ರಿ, ಪ್ಲೀಜ್....". ದೀನವಾಗಿ ಬೇಡ್ಕೊಂಡೆ. ನೋಡ್ರಿ ಎಂಥಾ ಪರಿಸ್ಥಿತಿ...ನನ್ನ ಮನ್ಯಾಗ ನಾನೇ ಭಿಕಾರಿ.

"ಏನಲೇ, ಉಪ್ಪಿಟ್ಟ ಬೇಕ ನಿನಗ...ಇಷ್ಟ ದೊಡ್ಡ ಮನೀ ಕಟ್ಟೀಸಿ.. ಬರೇ ಮೂರು ಸಾವಿರ ರೂಪಾಯಿ ಇಟ್ಟಿ ಮನ್ಯಾಗ.....".

"ಇಲ್ಲಾ ಮಾರಾಯಾ...ಮೊದಲೇಕ ಇರ್ತಿತ್ತ...ಈಗ ಒಂದು ವರ್ಷದಿಂದ ವ್ಯಾಪಾರದೊಳಗ ತುಂಬಾ ಲುಕ್ಸಾನ ಆಗೇದ...ಮನೀ ಬೆಳ್ಳಿ, ಬಂಗಾರೂ ಮಾರಬೇಕಾತ ಸಾಲಾ ತೀರಸಲಿಕ್ಕೆ...ಹೇಂಣ್ತಿ ಮೈ ಮ್ಯಾಲೆ ಇದ್ದ ಬಂಗಾರ ಅಷ್ಟ ಉಳದದ...ಮತ್ತ ವ್ಯಾಪರಾನ ಮೊದಲಿನಂಗ ಮಾಡ್ಲಿಕ್ಕೆ ಒದ್ದಾಡಲಿಕತ್ತೀನಿ.....".

"ಏ ಕೊಡ್ರಲೇ ಅವಂಗೂ ಸ್ವಲ್ಪ ಉಪ್ಪಿಟ್ಟ....ಪಾಪಾ ಬೇಡ್ಕೊಳ್ಳಲಿಕತ್ತಾನ...". ಆ ಕಳ್ಳರ ಲೀಡರ್ ಹೇಳಿದ್ದಂತ ಅನಿಸ್ತು.

ಚೀಲಕಾ ತಗದು ಸಾವಕಾಶವಾಗಿ ಉಪ್ಪಿಟ್ಟನ ಪ್ಲೇಟ್ ಒಳಗ ಸರಿಸಿ ಮತ್ತ ಚಿಲಕ ಹಾಕ್ಕೊಂಡ್ರು.

"ಲೈಟ್ ಹಾಕಬ್ಯಾಡಾ...ಕತ್ಲಾಗ ಕೂತ ತಿನ್ನು...".

ಮುಂದಿನ ಅರ್ಧಾ ತಾಸನ್ಯಾಗ ಎಲ್ಲಾ ತಿಂದು ಮುಗಿಸಿ, ಫ್ರಿಜ್‌ನಾಗ ಇದ್ದ ಹಾಲು, ಜ್ಯುಸ್ ಕುಡದ್ರು ಅನಸ್ತದ. ಅವರ ಡೇಕರಿಕಿ ಕೇಳಸ್ತಿತ್ತು. ನಾನೂ ತಿಂದು ಮುಗಿಸಿದೆ. ಹೋಗೋ ತಯ್ಯಾರಿ ನಡಿಸೀದ್ರಂತ ಅನಸ್ತದ. ಆ ಲೀಡರ್ ಬಂದ ನನ್ನ ರೂಮಿನ ಚಿಲಕಾ ತಗದು,

"ಲೇ, ನೀನು ಅರ್ಧಾ ತಾಸು ಹೊರಗ ಬರಬ್ಯಾಡ...ಬಂದ್ರ ನಮ್ಮಲ್ಲೊಂಬ್ಬಾಂವ ಇಲ್ಲೇ ಇರತಾನ..ನಿನ್ನ ಕಾಲ ಮುರೀತಾನ...ಮೊಬೈಲ್ ಗೇಟ್ ಹತ್ರ ಇರ್ತದ....ಇನ್ನೊಂದ ಮಾತು..ಈಗ ನಿನ್ನ ಮನೀಯಿಂದ ಬರೀ ಕೈಲಿ ಹೊಂಟೇವಿ....ಇದನ್ನ ಮರಿಯುವದಿಲ್ಲಾ.... ನೀ ಯಾವಾಗ ಮೊದಲಿನ್ಹಂಗ ಆಗ್ತೀ ಅಂತ ನಮಗ ಗೊತ್ತ ಆಗೇ ಅಗ್ತದ...ನಾವು ಬಂದೇ ಬರ್ತೀವಿ...ನೀ ಪಾರಾದೆ ಅಂತ ತಿಳ್ಕೊಂಡು ಖುಶಿ ಆಗಬ್ಯಾಡಾ...".

ಅರ್ಧಾ ತಾಸ ಬಿಟ್ಟ ಹೊರಗೆ ಬಂದೆ. ಎನ್ಪಾ ಇಂವಾ ಧಮ್ಕಿ ಬ್ಯಾರೆ ಕೊಟ್ಟ ಹೋದಾ ಅಂತ ವಿಚಾರ ಮಾಡ್ಕೋತ ತಲೀ ಮ್ಯಾಲೆ ಕೈ ಹೊತ್ಕೊಂಡ ಸೋಫಾದ ಮ್ಯಾಲೆ ಕುಸದ ಕೂತೆ.

.........ಶ್ರೀ ಕೃಷ್ಣಾರ್ಪಣಮಸ್ತು...... ■

# 38ನೇಯ ಮೈಲಿಕಲ್ಲು !

ಎನ್.ವಿ. ರಘುರಾಮ್

**ಅಂಕ–1:**

**'ವ್ಯಾಕರಣ'** ಎಂದು ಹತ್ತನೇಯ ತರಗತಿಯ ಕನ್ನಡ ಉಪಾಧ್ಯಾಯರು ಬೋರ್ಡ್ ಮೇಲೆ ಬರೆದಾಗ ಸ್ವಲ್ಪ ತಲೆ ಕೆರೆದುಕೊಂಡಿದ್ದು ನೆನಪಿದೆ. ಅವರು "ಈ ದಿನ ಸಂಸ್ಕೃತ ಸಂಧಿ ನೋಡೋಣ" ಎಂದಾಗ ಕಣ್ಣು, ಕಣ್ಣು ಬಿಡಲು ಪ್ರಾರಂಭ ಮಾಡಿದ್ದೆ. ಅವರು ಹಿಂದಿನ ಎರಡು ದಿನಗಳಿಂದ ಮಾಡಿದ ಕನ್ನಡ ಸಂದಿಗಳೇ ಇನ್ನು ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡು ಆ ಕಡೆ ಹೃದಯಕ್ಕೂ ಹೋಗದೆ, ಈ ಕಡೆ ತಲೆಗೂ ಹೋಗದೆ ತ್ರಿಶಂಕು ಸ್ಥಿತಿಯಲ್ಲಿರುವಾಗ, ಈಗ ಸಂಸ್ಕೃತ ಸಂದಿಯೇ? ಎಂದು ಅನಿಸಿದ್ದು ಸ್ವಾಭಾವಿಕ ಅಲ್ಲವೇ?

"ನೀವು ಯಾರ್ಯಾರು ಜೋಡೆತ್ತಿನ ಎತ್ತಿನಗಾಡಿಯಲ್ಲಿ ಹೋಗಿದ್ದೀರಾ?" ಎಂದು ಕನ್ನಡ ಮೇಷ್ಟ್ರು ಆ ದಿನ ಕೇಳಿದಾಗ ಎಲ್ಲರೂ ಸ್ವಲ್ಪ ನಿರಾಳರಾದೆವು. ಹಳ್ಳಿ ಸ್ಕೂಲ್ ಅಲ್ಲವೇ? ತುಂಬಾ ಹುಡುಗರು ಮೇಷ್ಟ್ರ ಪ್ರಶ್ನೆಗೆ ಕೈ ಎತ್ತಿದರು. "ನೋಡಿ ಎರಡು ಎತ್ತುಗಳನ್ನು ನೊಗಕ್ಕೆ ಕಟ್ಟಿ ಬೆನ್ನ ಮೇಲೆ ಕೈ ಆಡಿಸಿ 'ಹೈಯಾ' ಎಂದರೆ ಎತ್ತುಗಳು ಗಾಡಿ ಎಳೆದುಕೊಂಡು ಹೊರಡುತ್ತವೆ. ಅಲ್ಲವೇ?" ನಾವೆಲ್ಲರೂ "ಎಸ್ ಸರ್" ಎಂದು ಒಟ್ಟಿಗೆ ಕಿರುಚಿದ್ದೆವು. ಸಂಧಿಗೂ ಎತ್ತಿನಗಾಡಿಗೂ ಏನು ಸಂಬಂಧ? ನನಗಂತೂ ಅರ್ಥ ಆಗಿರಲಿಲ್ಲ. "ನೋಡಿ ಹುಡುಗ್ರಾ, ಒಂದು ಎತ್ತು ಸ್ವಲ್ಪ ಹಿಂದೆ ಉಳಿದರೂ ಇನ್ನೊಂದು ಎತ್ತು ಎಳೆದುಕೊಂಡು ಹೋಗುತ್ತದೆ. ಹಾಗಾಗಿ ಗಾಡಿ ಮುಂದಕ್ಕೆ ಹೋಗುತ್ತೆ". ನನಗೆ ಒಂದು ತರಹ ಖುಷಿ! ಸಧ್ಯ ಈ ದಿನ ಯಾವ 'ಅ', 'ಆ' ಕಾರಗಳ ಮುಂದೆ ಯಾವ 'ಕಾರವೂ' ಬರುವುದಿಲ್ಲ ಎಂದು! ಅಲ್ಲಿಗೆ ನಿಲ್ಲಿಸದೇ ಮೇಷ್ಟ್ರು ಮುಂದುವರೆಸಿದರು. "ನಿಮ್ಮ ಮನೆಯಲ್ಲಿ ಅಪ್ಪ, ಅಮ್ಮ ಎತ್ತುಗಳ ತರಹ. ನಿಮ್ಮ ಮನೆ ಎಂಬ ಗಾಡಿಯನ್ನು ಅವರು ಎಳೆದುಕೊಂಡು ಹೋಗುತ್ತಿದ್ದಾರೆ". ಮನೆ ಹೇಗೆ ಗಾಡಿ ಆಗಲು ಸಾಧ್ಯ? ಅಪ್ಪ–ಅಮ್ಮ ಜೋಡೆತ್ತುಗಳು,...... ಅದೇನೂ ನನ್ನ ತಲೆಗೆ ಹೋಗಲಿಲ್ಲ ಎನ್ನುವುದು ನಿಜ. ಏನಾದರೂ ಆಗಲಿ ಇದೇನು ಸಂಧಿಯ ವಿಷಯ ಅಲ್ಲವಲ್ಲ ಎಂದು ಸಮಾಧಾನ ಪಟ್ಟುಗೊಂಡಿದ್ದೆ!

ಆಗ ಮೇಷ್ಟ್ರು ಮತ್ತೆ "ಸವರ್ಣ ದೀರ್ಘ ಸಂಧಿ"' ಎಂದು ಪಾಠ ಪ್ರಾರಂಭ ಮಾಡಿದರು... ಸಂಸ್ಕೃತ ಪದಗಳು ಸಂಧಿಯಾಗುವ ಸಂದರ್ಭದಲ್ಲಿ, ಸವರ್ಣ ಸ್ವರಗಳು ಒಂದರ ಮುಂದೊಂದು ಬಂದಾಗ ಸಂಧಿ ಹೊಂದಿ, ಆ ಸವರ್ಣದ ದೀರ್ಘ ಸ್ವರವಾಗಿ ಉಳಿಯುತ್ತದೆ. ಅ + ಅ ಸ್ವರಗಳು ಸಂಧಿಯಾದಾಗ ಅಥವ ಅ+ಆ ಸ್ವರಗಳು ಸಂಧಿಯಾದಾಗ 'ಆ' ಎಂಬ ದೀರ್ಘ ಸ್ವರವಾಗಿ ಉಳಿಯುತ್ತದೆ. 'ಅ' ಕಾರ..........." ಎಂದು ಹೇಳುತ್ತಾ ಹೋಗುತ್ತಿದ್ದರು ಮೇಷ್ಟ್ರು ... ಅವರು ಕೊಟ್ಟ ಅನೇಕ ಉದಾಹರಣೆಗಳಲ್ಲಿ ನೆನಪಿರುವುದು "ಜಲಜ + ಅಕ್ಷಿ =ಜಲಜಾಕ್ಷಿ" ಮಾತ್ರ! ನಮ್ಮದು ಬಾಲಕರ ಹೈಸ್ಕೂಲ್. ಹಾಗಾಗಿ ಜಾಸ್ತಿ ಯೋಚನೆ ಮಾಡಿ "ಯಾರು ಈ ಜಲಜ" ಎಂದು ತಲೆ ಕೆಡಿಸಿ ಕೊಳ್ಳಬೇಡಿ! "ಮೊದಲನೇಯ ಪದ ಪೂರ್ವ ಪದ, ಎರಡನೇಯದು ಉತ್ತರ ಪದ......." ಮೇಷ್ಟ್ರ ಪಾಠ ಸಾಗಿತ್ತು. ಕಣ್ಣು ಬಿಟ್ಟುಕೊಂಡು ಬೋರ್ಡ್ ನೋಡುತ್ತಿದ್ದರೂ, ಮನಸ್ಸು 'ಸ್ವಿಚ್ ಆಫ್' ಆಗಿತ್ತು.

"ಈ ಎತ್ತಿನಗಾಡಿಯು ಸವರ್ಣ ದೀರ್ಘ ಸಂಧಿ ತರಹ" ಎಂದು ಮೇಷ್ಟು ಹೇಳಿದಾಗ ಮತ್ತೆ ಮನಸ್ಸು ಜಾಗೃತವಾಯಿತು. ಎರಡು ಎತ್ತುಗಳು ಒಳ್ಳೆಯದಾಗಿದ್ದರೆ

ಗಾಡಿ ಜೋರಾಗಿ ಹೋಗುತ್ತದೆ. ಒಂದು ಎತ್ತು ಸ್ವಲ್ಪ ನಿಧಾನವಾದರೂ ಇನ್ನೊಂದು ಎತ್ತು ಜೋರಾಗಿ ಹೋಗುವುದರಿಂದ, ಆ ನಿಧಾನವಾಗಿ ಹೋಗುವ ಎತ್ತು ಕೂಡ ಜೋರಾಗಿ ಹೋಗಲೇ ಬೇಕು....... ಅರೇ ಹೌದಲ್ಲ! ಅಂದರೆ 'ಅ'ಕಾರದ ಮುಂದೆ 'ಆ'ಕಾರ ಬಂದರೆ 'ಆ' ಕಾರವೇ ಆಗುತ್ತದೆ, ಎತ್ತುಗಳ ತರಹ! ಆಗ ಸಂಧಿ ಮೇಲೆ ಸ್ವಲ್ಪ ಮಮತೆ ಬಂತು. ಅಪ್ಪನಿಗೆ ಹುಷಾರ್ ಇಲ್ಲದಾಗ 'ಅ' ಕಾರ ವಾದರೆ ಅಮ್ಮ 'ಆ'ಕಾರ ವಾಗಿ ಮನೆಯನ್ನು ಸಂಭಾಳಿಸಿ ಮನೆ ನಡೆಸುವುದಿಲ್ಲವೇ?.... .... ಈ ಸಂಧಿ ಗಂಟಲು ದಾಟಿ ಹೃದಯಕ್ಕೆ ಹೋಯಿತು. ಪರೀಕ್ಷೆಯು ಪಾಸಾಯಿತು.

**ಅಂಕ–2:**

ಅಂತೂ ಹೈಸ್ಕೂಲ್ ಮುಗಿಯಿತು. ಮುಂದೆ ವಿಜ್ಞಾನದ ವಿದ್ಯಾರ್ಥಿ ಆಗಿದ್ದರಿಂದ ಈ ಸಂಧಿಗಳು ಮತ್ತೆ ತಲೆ ಕೆಡಿಸಲಿಲ್ಲ. ಓದು ಮುಗಿಯಿತು, ಕೆಲಸಕ್ಕೆ ಸೇರಿಕೊಂಡಾಯಿತು. ನಂತರ ಮದುವೆ ತಾನೆ? ಅದೂ ಅಯಿತು!

**ಅಂಕ–3:**

ಮದುವೆಯಾದ ಮೊದಲ ದಿನವೇ 'ಗಂಡ ಹೆಂಡತಿ ಜೋಡೆತ್ತುಗಳ ತರಹ' ಎಂದ ನಮ್ಮ ಕನ್ನಡ ಮೇಷ್ಟ್ರು ಹೇಳಿದ ಮಾತು ಅಚಾನಕ್ ಆಗಿ ನೆನಪಾಗಬೇಕೆ? ಸರಿ ನನ್ನ ಪಾಂಡಿತ್ಯ ತೋರಿಸಲು "ಸಂಸಾರವೆಂದರೆ ಸವರ್ಣ ದೀರ್ಘ ಸಂಧಿ..."ಎಂದು ನನ್ನ ರಾಗ ತೆಗೆದೆ. ಕೇಳಿಸಿಕೊಂಡ ನನ್ನ ಮನದನ್ನೆ "ನೀವು ಪೂರ್ವ ಪದ, ನಾನು ಉತ್ತರ ಪದ" ಎಂದಳು. ಆಕೆ ಓದಿದ್ದು ವಾಣಿಜ್ಯದ ವಿಷಯವಾದರೂ ಅವಳ ಕನ್ನಡ ಜ್ಞಾನ ನೋಡಿ ಖುಷಿ ಆಗುವುದರ ಜೊತೆಗೆ ಎಲ್ಲರೂ ಪೂರ್ವ ಪದದಿಂದ ತಾನೇ ಒದಲು ಪ್ರಾರಂಭ ಮಾಡುವುದು. ಅಂದರೆ ಇವಳು ನನಗೆ ಪ್ರಾಶಸ್ತ್ಯ ಕೊಡುತ್ತಿದ್ದಾಳೆ ಎಂದು ಬಾವಿಸಿ ಸಂತೋಷಪಟ್ಟೆ! ಕ್ರಮೇಣವಾಗಿ ಅರ್ಥವಾಯಿತು ನಾನು 'ಅ' ಮಾತ್ರ. ಅವಳು 'ಅ' ಆದರು, 'ಆ' ಆದರೂ ನಾನು ''ಆ' ಆಗಿ ಬದಲಾಗಬೇಕೆಂದು!

ಪ್ರತಿವರ್ಷ ಮದುವೆಯ ದಿನ ಬಂದಾಗ, ಕಳೆದ ದಿನಗಳನ್ನು ಹಿಂತಿರುಗಿ ನೋಡಿದ್ದು ಇದೆ. ಆಗ ಕೆಲವೊಂದು ವಿಷಯಗಳು ಸ್ಪಷ್ಟವಾಗಿ ಕಾಣುತ್ತವೆ. ಮನೆ ಕಟ್ಟುವಾಗ ಅವಳು ತಾನು ಕೆಲಸ ಮಾಡುತ್ತಿದ್ದ ಬ್ಯಾಂಕಿನಿಂದ ಸಾಲ ಕೊಡಿಸಿ ಉತ್ತರ ಪದದ 'ಆ'ಕಾರವಾಗಿದ್ದಳು. ವರ್ಗಾವಣೆಯ ಭಯದಲ್ಲಿ ಆಕೆಯು ಪ್ರಮೋಷನ್ ಬಿಟ್ಟುಕೊಟ್ಟು ಸಂಸಾರ ಮಾಡುವಾಗ ನಾನು ಸ್ವತಃ 'ಆ' ಕಾರವಾಗಿ ಆಕೆಗೆ ಸಮಾಧಾನ ಕೊಟ್ಟಿದ್ದು ಇದೆ. ಕೆಲಸದಲ್ಲಿ ನನ್ನ ಬಡ್ತಿ ತಡವಾದಾಗ, ಆಕೆ ಮತ್ತೆ 'ಆ'ಕಾರವಾಗಿ ನನಗೆ ಸಮಾಧಾನ ಪಡಿಸಿದ್ದು ಇದೆ.

ಈ ದಿನ 38ನೇ ಮೈಲಿಕಲ್ಲಿನಲ್ಲಿ ಕುಳಿತು, ಮತ್ತೆ ಹಿಂತಿರುಗಿ ನೋಡುತ್ತಿದ್ದೇವೆ. ನಾನೆಂದೆ "ನನ್ನ ಚೇತನದ ಉಸಿರು ನೀನು!" ಆಕೆ ಕೇಳಿದಳು "ಪೂರ್ವ ಪದವಿಲ್ಲದೇ, ಉತ್ತರ ಪದಕ್ಕೆ ಅಸ್ತಿತ್ವ ಉಂಟೇ?" ■

**ಹಾದಿಯಲ್ಲಿ ಕೇಳಿಸಿದ್ದು**

"ನನಗೆ ಯಾವುದೋ ಅತೀಂದ್ರಿಯ ಶಕ್ತಿ ಇದೆಯೇನೋ ಅನ್ನಿಸುತ್ತೆ"

"ಯಾಕೆ ಹಾಂಗಂತೀಯಾ?"

"ಇಂಡಿಯಾ ಕ್ರಿಕೆಟ್ ಮ್ಯಾಚ್ ನೋಡೋಣ ಅಂತ ಟಿ.ವಿ. ಆನ್ ಮಾಡಿದ ತಕ್ಷಣ ಒಂದು ವಿಕೆಟ್ ಬೀಳುತ್ತಲ್ಲಾ!"

# ಹೈಕು ಪ್ರಪಂಚ

**ಗೋಪಾಲ್ ಮತ್ತು ಶಿವಕುಮಾರ್**

ಹೈಕು ಅಥವಾ ಹಾಯಿಕು ಎಂಬುದು ಜಪಾನಿನ ಬಹು ಪುರಾತನವಾದ ಕಾವ್ಯ ಪ್ರಕಾರ. ಈ ಕವನಗಳು ಹನಿಗವನಗಳಿಗಿಂತ ಚಿಕ್ಕವು. ಈ ಪದ್ಯಗಳು ಜಗತ್ತಿನ ಸಾರ ಹಿಡಿಯಲು ಸಹಾಯಮಾಡುತ್ತವಂತೆ.

ಕನ್ನಡದ ಹಾಯಿಕುಗಳ ಛಂದಸ್ಸು ಹೇಗಿರುತ್ತೆಂಬುದನ್ನು ಗೋಪಾಲ್ ಹೈಕುಗಳಲ್ಲಿಯೇ ವಿವರಿಸಿದ್ದಾರೆ.

ಹಾಯಿಕುಗಳು
ಹದಿನೇಳಕ್ಷರದ
ಕವಿತೆಗಳು

ಮೂರು ಪಾದದ
ಪದ್ಯದಲಿ ಮಧ್ಯದ್ದು
ಏಳು ಅಕ್ಷರ

ಮೊದಲ ಹಾಗೂ
ಕಡೆಯ ಪಾದಗಳು
ಐದೇ ಅಕ್ಷರ

ಕೇಳಲು ಇಂಪು
ನೆನೆಯಲು ಸುಲಭ
ಜಗದ್ವಿಖ್ಯಾತ

ಕನ್ನಡದಲ್ಲಿ ಹಾಯಿಕುಗಳನ್ನು ಮೊದಲು ರಚಿಸಿದವರು ಶ್ರೀಮತಿ ವಿಮಲಾ ಶೇಷಾದ್ರಿಯವರು.ಇವರು 2003ರಲ್ಲಿ ಇವರು ಬರೆದ ಹೈಕು ಎಂಬ ಪುಸ್ತಕ ಬಿಡುಗಡೆಯಾಯಿತು. ಅದರಿಂದ ಆಯ್ದ ಹಲವು ಹಾಯ್ಕುಗಳನ್ನು ಇಲ್ಲಿ ನೋಡಿ.

ಮಳೆಗಾಲದ
ಮಳೆ ನೀರು ನಿಂತಲ್ಲಿ
ಮಕ್ಕಳ ದೋಣಿ

ಅಮ್ಮಾ ಚಂದ್ರನ್ನ
ಯಾರೋ ಹರಿದು ಹಾಕಿ
ದೋಣಿ ಆಗಿದೆ

ಕಾಗದಗಳ
ಜೋಡಿಸಿ ಪಿನ್–
ಮಾಡಿದಾಗ ಚೀತ್ಕಾರ

" ದೆವ್ವ ನಂಬ್ತೀಯಾ ?"
" ಇಲ್ಲ " ಎಂದು ನೋಡಿದೆ
ವ್ಯಕ್ತಿಯೇ ಮಾಯ

ಅಜ್ಜಿ ಕೈ ತುತ್ತು
ಕಳ್ಳನ ಕಥೆ, ಚಕ್ಕುಲಿ
ಕನಸುಗಳು

ಇಂತಹ ಹಾಯಿಕುಗಳ ಶೈಲಿಯಲ್ಲಿ ದೈನಂದಿನ ವಾರ್ತೆಗಳನ್ನು ಬಿತ್ತರಿಸಿದರೆ ಹೇಗೆ ? ಎಂಬ ಸವಾಲನ್ನು ಪರಿಶೀಲಿಸುವ ಸಾಹಸವನ್ನು ಗೋಪಾಲ್ ಮತ್ತು ನಾನು ಇಲ್ಲಿ ಮಾಡಿದ್ದೇವೆ. ಪೂರ್ವಾರ್ಧ ನನ್ನ ಪ್ರಯತ್ನವಾಗಿದ್ದು ಉತ್ತರಾರ್ಧ ಗೋಪಾಲರಿಗೆ ಸೇರಿದ್ದು. ಇಲ್ಲಿನ ಸುದ್ದಿಯ ತುಣುಕುಗಳೆಲ್ಲವೂ ನವೆಂಬರ್, ಡಿಸೆಂಬರಿನ ವಿದ್ಯಮಾನಗಳು.

ಬಿಹಾರದಲ್ಲಿ
ಪಪ್ಪುಗೆ ಸೋಲುಗಳ
ಗಾಢ ಅಪ್ಪುಗೆ !

ನಿತೀಶ ಬಾಬು
ಪಲ್ಟಿ ಹೊಡೆಯುತ್ತಲೇ
ಧುರೀಣನಾದ !

ಹರ್ಮನ್‌ಪ್ರೀತ್
ಕ್ರಿಕೆಟ್ಟಿನ ಪಾಲಿಗೆ
ವಿಜಯಲಕ್ಷ್ಮಿ !

ನಟನಾಗ್ರಣಿ
ಷೋಲೆ ಧರ್ಮೇಂದ್ರರಿಗೆ
ಅಶ್ರುತರ್ಪಣ

ಏನು ಗಲಭೆ?
ಏನಿಲ್ಲ, ಟಿವಿಯಲ್ಲಿ
ಅರ್ನಾಬ ಅಷ್ಟೇ !

ಮಾತಿನ ಮಲ್ಲ
ಅಜೇಯ ಸರದಾರ
ಜಯಶಂಕರ

ಕ್ರಿಕೆಟ್ ಟೀಮ್
ಗೆಲ್ಲದಿದ್ದರೂ ಪಂದ್ಯ
ಹಣ ಬಾಚಿತು

ಕಾಂಗ್ರೆಸ್ ಪಕ್ಷ
ಕೊನೆಗೂ ಆರು ಸೀಟು
ಗೆದ್ದೇ ಬಿಟ್ಟಿತೇ

ಬಿಸಿ ಅಡುಗೆ
ಚಳಿಗಾಲದ ಹೊಟ್ಟೆ
ತಂಪಾಗಿಸಿತು

ಸಂಪಾದಕರ
ಕಸದ ಬುಟ್ಟಿ ತುಂಬಿ
ತುಳುಕಾಡಿತು.

**ರಾಜಕಾರಣಿ**
ಬ್ರಹ್ಮ ದೇವರು
ಕೋಪಗೊಂಡಾಗ ಗೀಚಿ–
–ದ ವ್ಯಂಗ್ಯ ಚಿತ್ರ

**ಬೆಂಗಳೂರ ಕನ್ನಡಿಗ**
ಉರಿವ ಬೆಂಕಿ
ಯಲ್ಲೂ ನಿಶ್ಚಿಂತೆಯಿಂದ
ಮೈ ಮರೆತಾತ

■

| | | |
|---|---|---|
| 1 2 3 4 5 | 1 2 3 4 5 6 7 | 1 2 3 4 5 |
| ha-tsu shi-gu-re | sa-ru mo ko-mi-no o | ho-shi-ge na-ri |
| 初しぐれ | 猿も小蓑を | ほしげ也 |

ಕನ್ನಡ ಭಾವಾನುವಾದ

**ಮೊ ದ ಲ ಮ ಳೆ ವೈ ವಿ ಧ್ಯ ಮ ಯ ವಂ ತೆ ಈ ಶ್ವ ರ ಕೃ ಪೆ**